ಸಂಪುಟ: 06 ಸಂಚಿಕೆ: 16 ಪುಟಗಳು: 08 ಮಂಗಳವಾರ 31 ಮಾರ್ಚ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಅನುಭವವು ವಯಸ್ಸಿನಿಂದ ಬರುವುದಿಲ್ಲ. ಅದು ಸಂದರ್ಭಗಳಿಂದ ಬರುತ್ತದೆ. ಒಳ್ಳೆಯ ಸಮಯಕ್ಕಿಂತ, ಕೆಟ್ಟ ಸಮಯವು ಮನುಷ್ಯನಿಗೆ ಬಹಳಷ್ಟು ಕಲಿಸುತ್ತದೆ

## ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೂ ತಟ್ಟಲಿದ್ಯಾ ಅಮೆರಿಕಾ- ಇರಾನ್ ಯುದ್ಧದ ಎಫೆಕ್ಟ್!

• ಉದಯವಾಹಿನಿ, ಬೆಂಗಳೂರು

ಇರಾನ್ ಹಾಗೂ ಅಮೆರಿಕಾದ ನಡುವೆ ಯುದ್ಧದ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಈ ನಡುವೆ ಗಲ್ಫ್ ರಾಷ್ಟ್ರಗಳಿಂದ ತೈಲ ಪೂರೈಕೆಗೆ ದೊಡ್ಡ ಮಟ್ಟದಲ್ಲಿ ಹಿನ್ನಡೆ ಉಂಟಾಗುತ್ತಿದೆ. ಇದರ ಪರಿಣಾಮ ಕಚ್ಚಾ ತೈಲ ದರ ಏರಿಕೆ ಆಗುತ್ತಿದೆ. ಇದರ ಪರಿಣಾಮ ಇದೀಗ ಗೋಚರವಾಗತೊಡಗಿವೆ. ಖಾಸಗಿ ಕಂಪನಿ ನಯಾರಾ ಎನರ್ಜಿ, ದೇಶಾದ್ಯಂತ ಇರುವ ತನ್ನ 7 ಸಾವಿರ ತೈಲ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪರಿಷ್ಕರಿಸಿದೆ. ಯುದ್ಧ ಹೀಗೆ ತೀವ್ರ ಗತಿಯಲ್ಲಿ ಮುಂದುವರಿದರೆ ರಾಜ್ಯದ ಸಾರಿಗೆ ಸಂಸ್ಥೆಗಳಿಗೂ ಅದರ ಬಿಸಿ ಮುಟ್ಟುವ ಸಾಧ್ಯತೆ ಇದೆ. ಡೀಸೆಲ್ ಕೊರತೆಯಿಂದ ಬಸ್ ಸಂಚಾರಕ್ಕೆ ಅಡ್ಡಿ ಉಂಟಾಗುವ ಸಾಧ್ಯತೆ ಇದೆ.

ಈ ಕುರಿತಾಗಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಮಾತನಾಡಿದ್ದಾರೆ. ''ತಕ್ಷಣಕ್ಕೆ ಯಾವುದೇ ಸಮಸ್ಯೆ ಇಲ್ಲ. ನಾಲ್ಕು ನಿಗಮಗಳಲ್ಲಿ ಡೀಸೆಲ್ ತೊಂದರೆ ಇಲ್ಲ. ಆದರೆ ಅಮೆರಿಕಾ-ಇರಾನ್ ಯುದ್ಧ ಹೀಗೆ ಮುಂದುವರಿದ್ರೆ, ಸಮಸ್ಯೆ ಆಗಬಹುದು'' ಎಂದು ಹೇಳಿದ್ದಾರೆ.



**ಪೆಟ್ರೋಲ್, ಡೀಸೆಲ್ ದರ ಏರಿಕೆ ಸಾಧ್ಯತೆ**

ಈ ನಡುವೆ ಜನಸಾಮಾನ್ಯರ ಮೇಲೆ ಬೆಲೆ ಏರಿಕೆ ಬಿಸಿ ಮುಟ್ಟುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ ರೂ.13 ರಿಂದ ರೂ.1ಕ್ಕೆ ಇಳಿಕೆ ಮಾಡಿದೆ. ಹಾಗೂ ಡೀಸೆಲ್ ಮೇಲಿನ ಸುಂಕವನ್ನು ಪೂರ್ಣವಾಗಿ ರದ್ದುಗೊಳಿಸಿದೆ.

**ಕರ್ನಾಟಕ ಸಾರಿಗೆ ನಿಗಮಕ್ಕೆ ಡೀಸೆಲ್ ವೆಚ್ಚ ಎಷ್ಟು?:** ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ನಿತ್ಯ ಕೋಟ್ಯಾಂತರ ಮೌಲ್ಯದ ಡೀಸೆಲ್ ಅಗತ್ಯವಿದೆ. ಆದರೆ ಯುದ್ಧದಿಂದ ಕಚ್ಚಾತೈಲ ದರ ಏರಿಕೆ ಆದರೆ ಅದರ ನೇರ ಪರಿಣಾಮ ಸಾರಿಗೆ ಪ್ರಯಾಣ ದರ ಮೇಲೂ ಆಗಲಿದೆ. ಸಾರಿಕೆ ಇಲಾಖೆ ದರ ಏರಿಕೆ ಮಾಡುವ ಕ್ರಮಕ್ಕೂ ಮುಂದಾಗುವ ಸಾಧ್ಯತೆ ಇದೆ. ಸಾರಿಗೆ ಇಲಾಖೆಯಲ್ಲಿ 2022-23 ರಲ್ಲಿ 4449 ಕೋಟಿ, 2023-24 ರಲ್ಲಿ 4507 ಕೋಟಿ ಹಾಗೂ 2024-25 ರಲ್ಲಿ 4744 ಕೋಟಿ ಡಿಸೇಲ್ ವೆಚ್ಚವಾಗಿದೆ.

**2022-23:** ● ಕೆಎಸ್ ಆರ್ ಟಿ ಸಿ- 1821 ಕೋಟಿ ● ಬಿಎಂಟಿಸಿ- 810.66 ಕೋಟಿ ● ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ -968 ಕೋಟಿ ● ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ - 849 ಕೋಟಿ

**2023-24:** ● ಕೆಎಸ್ ಆರ್ ಟಿ ಸಿ- 1826 ಕೋಟಿ ● ಬಿಎಂಟಿಸಿ- 820 ಕೋಟಿ ● ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ -956 ಕೋಟಿ ● ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ - 904 ಕೋಟಿ

**2024-25:** ● ಕೆಎಸ್ ಆರ್ ಟಿ ಸಿ- 1958 ಕೋಟಿ ● ಬಿಎಂಟಿಸಿ- 794 ಕೋಟಿ ● ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ -998 ಕೋಟಿ ● ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ - 993 ಕೋಟಿ

### ಆದಾಯ - ವೆಚ್ಚ ಎಷ್ಟು?

2024-25 ನೇ ಸಾಲಿನಲ್ಲಿ ಕೆ ಎಸ್ ಆರ್ ಟಿ ಸಿ ಒಟ್ಟು ಆದಾಯ 5,406.30 ಕೋಟಿ ಇದೆ. ಆದರೆ ವೆಚ್ಚ 5,488.22 ಕೋಟಿ ಯಷ್ಟಾಗಿದೆ. ಬಿಎಂಟಿಸಿಯಲ್ಲಿ ಆದಾಯ 2,768.27 ಕೋಟಿ ಇದೆ. ವೆಚ್ಚ 3,338.75 ಕೋಟಿಯಾಗಿದೆ. ಇನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆಯಲ್ಲಿ 2,805 ಕೋಟಿ ಆದಾಯ ಬಂದರೆ ವೆಚ್ಚ 2836 ಕೋಟಿಯಾಗಿದೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆಯಲ್ಲಿ 2,772 ಕೋಟಿ ಆದಾಯ ಬಂದರೆ ವೆಚ್ಚ 2,832 ಕೋಟಿಯಾಗಿದೆ. ಒಟ್ಟು ನಾಲ್ಕು ಸಾರಿಗೆ ಸಂಸ್ಥೆಗಳಿಂದ 2024-25 ನೇ ಸಾಲಿನಲ್ಲಿ 13,753 ಕೋಟಿ ಆದಾಯ ಸಂಗ್ರಹವಾದರೆ 13,753 ಕೋಟಿ ವೆಚ್ಚವಾಗಿದೆ. ಸುಮಾರು 842 ಕೋಟಿ ನಷ್ಟದಲ್ಲಿದೆ.

## ನಾಲ್ಕು ವರ್ಷಗಳಲ್ಲಿ ಲವ್ ಜಿಹಾದ್ ಪ್ರಕರಣ ದಾಖಲಾಗಿಲ್ಲ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೊಂಡಿರುವ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣೆ ಹಕ್ಕು (ಮತಾಂತರ ನಿಷೇಧ) ಕಾಯ್ದೆ' ಅಡಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಪ್ರೇಮದ ಮೂಲಕ ಧರ್ಮಾಂತರ (ಲವ್ ಜಿಹಾದ್) ಆರೋಪಕ್ಕೆ ಸಂಬಂಧಿಸಿದ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ತಿಳಿಸಿದ್ದಾರೆ.

2023ರಲ್ಲಿ 10, 2024ರಲ್ಲಿ 3, 2025ರಲ್ಲಿ 4 ಬಲವಂತದ ಮತಾಂತರ ಪ್ರಕರಣಗಳು ದಾಖಲಾಗಿವೆ. 2026ರಲ್ಲಿ ಇದುವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ. ಈ 17 ಪ್ರಕರಣಗಳಲ್ಲಿ ಮೂರು ಪ್ರಕರಣಗಳು ತನಿಖೆಯಲ್ಲಿದ್ದು, ಏಳು ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ಮೂರು ಪ್ರಕರಣಗಳಲ್ಲಿ ಪೊಲೀಸರು 'ಬಿ' ಅಂತಿಮ ವರದಿ ಸಲ್ಲಿಸಿದ್ದಾರೆ. ಆದರೆ ಯಾವುದೇ ಪ್ರಕರಣದಲ್ಲೂ ಶಿಕ್ಷೆ ಆಗಿಲ್ಲ' ಎಂದು ಹೇಳಿದರು.

'ಲವ್ ಜಿಹಾದ್ ಮತ್ತು ಬಲವಂತದ ಮತಾಂತರ ಪ್ರಕರಣಗಳನ್ನು ತಡೆಯಲು ದೂರು ಬಂದ ತಕ್ಷಣ ಸಂಬಂಧಿತ ಕಾನೂನುಗಳಡಿ (ಬಿಎನ್ ಎಸ್, ಪೋಕ್ಸೊ) ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಇಂತಹ ಪ್ರಕರಣಗಳನ್ನು ತಡೆಗಟ್ಟಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮತೀಯ ಗೂಂಡಾಗಳು ಪತ್ತೆಯಾದರೆ, ಅವರನ್ನು ಗುರುತಿಸಿ ರೌಡಿ ಶೀಟ್ ತೆರೆಯಲಾಗುತ್ತಿದ್ದು, ಅಗತ್ಯ ಇದ್ದರೆ ಗಡಿಪಾರು ಕೂಡ ಮಾಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

## ಬೆಂಗಳೂರು ಬಿಸಿನೆಸ್ ಕಾರಿಡಾರ್‌ಗೆ ಬಿಡಿಎ ಟೆಂಡರ್ ಆಹ್ವಾನ

• ಉದಯವಾಹಿನಿ, ಬೆಂಗಳೂರು

ಬಿಡಿಎ ಬಹುನಿರೀಕ್ಷಿತ 'ಬೆಂಗಳೂರು ಬಿಸಿನೆಸ್ ಕಾರಿಡಾರ್' (ಪೆರಿಫೆರಲ್ ರಿಂಗ್ ರೋಡ್) ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಿದ್ದು, ಯೋಜನೆಯ ಮೊದಲ ಹಂತದ ಕಾಮಗಾರಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಯ ನಿಟ್ಟಿನಲ್ಲಿ ಈ ಯೋಜನೆ ಅತ್ಯಂತ ಮಹತ್ವದಾಗಲಿದೆ. ಈ ಟೆಂಡರ್ ಯೋಜನೆಯ ಮೊದಲ ಪ್ಯಾಕೇಜ್‌ಗೆ ಸಂಬಂಧಿಸಿದ್ದಾಗಿದ್ದು, ತುಮಕೂರು ರಸ್ತೆಯ ಮಾದಾವರ(ಬಿಐಇಸಿ)ಯಿಂದ ಏರ್‌ಪೋರ್ಟ್ ಸಮೀಪ ಬಳ್ಳಾರಿ ರಸ್ತೆಯವರೆಗೆ ಒಟ್ಟು 19.8 ಕಿಲೋಮೀಟರ್ ಉದ್ದದ 8 ಪಥಗಳು ನಿರ್ಮಾಣವಾಗಲಿದೆ. ಈ ಬೃಹತ್ ಕಾಮಗಾರಿಯ ಅಂದಾಜು ವೆಚ್ಚ 3348.05 ಕೋಟಿ ರೂಪಾಯಿಗಳೆಂದು ಗುರುತಿಸಲಾಗಿದೆ.

## ಪೋಷಕರನ್ನು ಸಾಕದಿದ್ರೆ ಸಂಬಳ ಶೇ.15 ರಷ್ಟು ಹಣ ಕಡಿತ!

• ಉದಯವಾಹಿನಿ, ಬೆಂಗಳೂರು

ತಮ್ಮನ್ನು ನಂಬಿರುವ ವೃದ್ಧ ಪೋಷಕರನ್ನು ನಿರ್ಲಕ್ಷಿಸುವ ಅಥವಾ ಅವರಿಗೆ ಆರ್ಥಿಕ ನೆರವು ನೀಡದ ಮಕ್ಕಳಿಗೆ ಬಿಸಿ ಮುಟ್ಟಿಸಲು ತೆಲಂಗಾಣ ಸರ್ಕಾರ ಮುಂದಾಗಿದೆ. ಪೋಷಕರನ್ನು ಸಾಕದಿದ್ದರೆ ಉದ್ಯೋಗಿಗಳ ಸಂಬಳದಿಂದಲೇ ಹಣ ಕಡಿತಗೊಳಿಸಿ ಪೋಷಕರಿಗೆ ನೀಡಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ. ತೆಲಂಗಾಣ ವಿಧಾನಸಭೆಯಲ್ಲಿ 'ತೆಲಂಗಾಣ ಉದ್ಯೋಗಿಗಳ ಹೊಣೆಗಾರಿಕೆ ಮತ್ತು ಪೋಷಕರ ಬೆಂಬಲದ ಮೇಲ್ವಿಚಾರಣೆ ಮಸೂದೆ-2026' ಅನ್ನು ಅಂಗೀಕರಿಸಲಾಗಿದೆ.

ಪೋಷಕರನ್ನು ನಿರ್ಲಕ್ಷಿಸುವ ಉದ್ಯೋಗಿಯ ಒಟ್ಟು ವೇತನದಲ್ಲಿ ಶೇ. 15 ರಷ್ಟು ಅಥವಾ ಗರಿಷ್ಠ 10,000 ರೂಪಾಯಿಗಳನ್ನು (ಯಾವುದು ಕಡಿಮೆಯೋ ಅದು) ಕಡಿತಗೊಳಿಸಬಹುದು. ಈ ಕಡಿತಗೊಳಿಸಿದ ಮೊತ್ತವು ಉದ್ಯೋಗಿಯ ಮಧ್ಯಸ್ಥಿಕೆ ಇಲ್ಲದೆಯೇ ನೇರವಾಗಿ ಸಂಕಷ್ಟದಲ್ಲಿರುವ ಪೋಷಕರ ಬ್ಯಾಂಕ್ ಖಾತೆಗೆ ಜಮೆಯಾಗಲಿದೆ.

ವಿಧಾನಸಭೆಯಲ್ಲಿ ಮಸೂದೆಯ ಕುರಿತು ಮಾತನಾಡಿದ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ಪೋಷಕರ ಹಕ್ಕುಗಳನ್ನು ಪ್ರೀತಿ-ವಿಶ್ವಾಸದಿಂದ ರಕ್ಷಿಸಬೇಕು ಎಂಬುದು ನಮ್ಮ ಆಶಯ. ಆದರೆ, ಪೋಷಕರು ನಿರ್ಲಕ್ಷ್ಯಕ್ಕೆ ಒಳಗಾದಾಗ ಕಾನೂನು ಅವರ ಪರವಾಗಿ ನಿಲ್ಲುವುದನ್ನು ಈ ಮಸೂದೆಯು ಖಚಿತಪಡಿಸುತ್ತದೆ ಎಂದು ತಿಳಿಸಿದರು.

# ದರ ಏರಿಕೆಯ ಪ್ರಭಾವ ಜನರಿಗೆ ಢವಢವ




## ಬೆಂಗಳೂರಿಗರಿಗೆ ತಟ್ಟಲಿದೆ ನೀರು ವಿದ್ಯುತ್ ದರ ಏರಿಕೆಯ ಬಿಸಿ

**ಜನಸಾಮಾನ್ಯರಿಗೆ ಗಾಯದ ಮೇಲೆ ಬರೆ**

**ಏಪ್ರಿಲ್ 1ರಿಂದಲೇ ಜಾರಿ**

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರದ ಮುಂದೆ ವಿದ್ಯುತ್ ದರ ಏರಿಕೆ ಮಾಡಬೇಕು ಎನ್ನುವ ಪ್ರಸ್ತಾಪ ಬಂದು ಕೂತಿದೆ. ರಾಜ್ಯ ಸರ್ಕಾರ ಇನ್ನು ಯಾವುದೇ ತೀರ್ಮಾನ ಮಾಡಿಲ್ಲ. ಆದರೆ ಯಾವಾಗ ಬೇಕಾದರೂ ತೀರ್ಮಾನ ತೆಗೆದುಕೊಳ್ಳಬಹುದು ಮತ್ತು ಅಧಿಕೃತ ಆದೇಶ ಹೊರಬೀಳಬಹುದು.

ಸದ್ಯದ ಮತ್ತೊಂದು ಪ್ರಶ್ನೆ ಪ್ರತಿ ಯೂನಿಟ್ ವಿದ್ಯುತ್ ಮೇಲೆ ಎಷ್ಟು ಪೈಸೆ ಹೆಚ್ಚಳ ಮಾಡುತ್ತದೆ ಎನ್ನುವುದು.

**ಬೆಲೆ ಏರಿಕೆ ಮಾಡುತ್ತಿರುವುದು ಏಕೆ?:** ನಷ್ಟದಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳಾದ ಬೆಸ್ಕಾಂ, ಜೆಸ್ಕಾಂ, ಚೆಸ್ಕಾಂ, ಹೆಸ್ಕಾಂ ಮತ್ತು ಮೆಸ್ಕಾಂ ಸಂಸ್ಥೆಗಳು ರಾಜ್ಯ ಸರ್ಕಾರದ ಮುಂದೆ ವಿದ್ಯುತ್ ದರ ಏರಿಸುವಂತೆ ಪ್ರಸ್ತಾವನೆ ಸಲ್ಲಿಸಿವೆ. ರಾಜ್ಯ ಈ ಎಲ್ಲಾ ವಿದ್ಯುತ್ ಸರಬರಾಜು ಸಂಸ್ಥೆಗಳು ಸುಮಾರು 4,500 ಕೋಟಿ ರೂಪಾಯಿ ನಷ್ಟದಲ್ಲಿವೆ. ಸಂಸ್ಥೆಗಳಿಗೆ ಸಂಗ್ರಹವಾಗುವ ಆದಾಯ ಮತ್ತು ನಿರ್ವಹಣಾ ವೆಚ್ಚದ ನಡುವಿನ ಅಂತರ ಜಾಸ್ತಿಯಾಗಿರುವುದರಿಂದ ನಷ್ಟವಾಗುತ್ತಿದೆ. ದರ ಹೆಚ್ಚಿಸುವ ಮೂಲಕ ನಷ್ಟವನ್ನು ಭರಿಸಿಕೊಳ್ಳಲು ಅನುಮಂತಿ ನೀಡಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಎಷ್ಟು ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲು ಪ್ರಸ್ತಾವನೆ ಸಲ್ಲಿಸಿವೆ? ಒಂದೊಂದು ವಿದ್ಯುತ್ ಸರಬರಾಜು ಕಂಪನಿಗಳು ಒಂದೊಂದು ರೀತಿಯ ಪ್ರಸ್ತಾವನೆ ಸಲ್ಲಿಸಿವೆ. ಯಾವ್ಯಾವ ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಯುನಿಟ್ ವಿದ್ಯುತ್ ಗೆ ಎಷ್ಟು ಪೈಸೆ ಹೆಚ್ಚಳ ಮಾಡಬೇಕು ಎನ್ನುವ ವಿವರ ಈ ಕೆಳಕಂಡಂತೆ ಇದೆ.

**1. ಜೆಸ್ಕಾಂ:** 99 ಪೈಸೆ , **2. ಬೆಸ್ಕಾಂ:** 98 ಪೈಸೆ, **3. ಚೆಸ್ಕಾಂ:** 97 ಪೈಸೆ, **4. ಹೆಸ್ಕಾಂ:** 96 ಪೈಸೆ **5. ಮೆಸ್ಕಾಂ:** 91 ಪೈಸೆ.

**ವಿದ್ಯುತ್ ದರ ಏರಿಕೆ ಯಾವಾಗ ಆಗಬಹುದು?:** ವಿದ್ಯುತ್ ಸರಬರಾಜು ಕಂಪನಿಗಳ ಬೆಲೆ ಏರಿಕೆ ಪ್ರಸ್ತಾಪವನ್ನು ಪರಿಶೀಲನೆ ನಡೆಸುತ್ತಿದ್ದು, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಉಪ ಚುನಾವಣೆಗಳ ಬಳಿಕ ಅಧಿಕೃತ ಆದೇಶ ಹೊರಡಿಸಬಹುದು. ಯಾವಾಗ ಜಾರಿಯಾದರೂ ಏಪ್ರಿಲ್ 1ರಿಂದ ಪೂರ್ವಾನ್ವಯವಾಗುವಂತೆ ಬೆಲೆ ಏರಿಕೆ ಮಾಡಬಹುದು. ಹಾಗೆಯೇ ಪ್ರತಿ ಯೂನಿಟ್ ವಿದ್ಯುತ್ ಬೆಲೆ ಸರಾಸರಿ 12ರಿಂದ 15 ಪೈಸೆ ಹೆಚ್ಚಳ ಮಾಡಬಹುದು ಎಂದು ತಿಳಿದುಬರುತ್ತಿದೆ.

**ನೀರಿನ ದರವೂ ಏರಿಕೆ:** ಏಪ್ರಿಲ್ 1ರಿಂದ ಬೆಂಗಳೂರಿನಲ್ಲಿ ನೀರಿನ ಬಿಲ್ಲಿನಲ್ಲೂ ಶೇ. 3ರಷ್ಟು ಹೆಚ್ಚಳ ಜಾರಿಗೆ ಬರಲಿದೆ. ನೀರಿನ ಸರಬರಾಜು ವೆಚ್ಚ, ನಿರ್ವಹಣಾ ವೆಚ್ಚ, ವಿದ್ಯುತ್ ಮತ್ತು ಮೂಲಸೌಕರ್ಯ ಖರ್ಚು ಹೆಚ್ಚಳ ಮಾಡಲಾಗುತ್ತಿದ್ದು ಜಲಮಂಡಳಿಯ ಆರ್ಥಿಕ ಒತ್ತಡ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷವೇ ಪ್ರತಿವರ್ಷ ನೀರಿನ ದರವನ್ನು ಶೇ. 3ರಷ್ಟು ಹೆಚ್ಚಿಸಲು ಅನುಮೋದನೆ ನೀಡಲಾಗಿದ್ದು, ಅದರ ಭಾಗವಾಗಿ ಈ ವರ್ಷದ ಏರಿಕೆ ಜಾರಿಯಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.ಏಪ್ರಿಲ್ 1ರಿಂದ ವಿದ್ಯುತ್ ಹಾಗೂ ನೀರಿನ ದರ ಏರಿಕೆಯಿಂದ ಬೆಂಗಳೂರಿನ ಜನತೆಗೆ ದ್ವಿಗುಣ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ನಡುವೆಯೇ ಈ ದರ ಏರಿಕೆ ಜನರಲ್ಲಿ ಮಿಶ್ರ ಪ್ರತಿಕ್ರಿಯೆ ಮೂಡಿಸಿದೆ.


**ನೀರಿನ ದರವನ್ನು ಶೇ.3ರಷ್ಟು ಹೆಚ್ಚಿಸಲು ಅನುಮೋದನೆ**

ಕಳೆದ ವರ್ಷವೇ ಪ್ರತಿವರ್ಷ ನೀರಿನ ದರವನ್ನು ಶೇ.3ರಷ್ಟು ಹೆಚ್ಚಿಸಲು ಅನುಮೋದನೆ ನೀಡಲಾಗಿದ್ದು, ಅದರ ಭಾಗವಾಗಿ ಈ ವರ್ಷದ ಏರಿಕೆ ಜಾರಿಯಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಏಪ್ರಿಲ್ 1ರಿಂದ ವಿದ್ಯುತ್ ಹಾಗೂ ನೀರಿನ ದರ ಏರಿಕೆಯಿಂದ ಬೆಂಗಳೂರಿನ ಜನತೆಗೆ ದ್ವಿಗುಣ ಆರ್ಥಿಕ ಹೊರೆ ಬೀಳುವ ಸಾಧ್ಯತೆ ಇದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ನಡುವೆಯೇ ಈ ದರ ಏರಿಕೆ ಜನರಲ್ಲಿ ಮಿಶ್ರ ಪ್ರತಿಕ್ರಿಯೆ ದೊರೆತಿದೆ. ನೀರಿನ ಸರಬರಾಜು ವೆಚ್ಚ ಹೆಚ್ಚಳ.ನಿರ್ವಹಣಾ ವೆಚ್ಚ ಏರಿಕೆ ವಿದ್ಯುತ್ ಮತ್ತು ಮೂಲಸೌಕರ್ಯ ಖರ್ಚು ಹೆಚ್ಚಳ. ಜಲಮಂಡಳಿಯ ಆರ್ಥಿಕ ಒತ್ತಡ ಕಡಿಮೆ ಮಾಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.





### ಗೃಹ ಜ್ಯೋತಿ ಫಲಾನುಭವಿಗಳಿಗೆ ವಿನಾಯಿತಿ



'ಗೃಹ ಜ್ಯೋತಿ' ಯೋಜನೆಯಡಿ 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಗ್ರಾಹಕರ ಬಿಲ್ ಅನ್ನು ಸರ್ಕಾರವೇ ಭರಿಸುವುದರಿಂದ ಅವರಿಗೆ ನೇರ ಹೊರೆ ಇರುವುದಿಲ್ಲ. ಆದರೆ 200 ಯೂನಿಟ್ ಮೀರಿದ ಬಳಕೆದಾರರು ಹೆಚ್ಚಿದ ದರವನ್ನು ಪಾವತಿ ಮಾಡಬೇಕಾಗುತ್ತದೆ. ಯೂನಿಟ್ ದರ ಮಾತ್ರವಲ್ಲದೆ, ಸ್ಥಿರ ಶುಲ್ಕವನ್ನೂ ಹೆಚ್ಚಿಸುವ ಬಗ್ಗೆ ಚಿಂತನೆ ನಡೆದಿದೆ.ವಾಣಿಜ್ಯ ವಿದ್ಯುತ್ ದರ ಏರಿಕೆಯಾದರೆ ಹೋಟೆಲ್, ಸಣ್ಣ ಕೈಗಾರಿಕೆಗಳ ಉತ್ಪಾದನಾ ವೆಚ್ಚ ಹೆಚ್ಚಾಗಿ, ಅದರ ಪರಿಣಾಮವಾಗಿ ವಸ್ತುಗಳ ಬೆಲೆ ಏರಿಕೆ ಸಾಧ್ಯತೆ ಇದೆ.

**ಕೈಗಾರಿಕೆಗಳು ಇಲ್ಲಿಂದ ವಲಸೆ ಹೋಗಲಿ ಎಂಬ ಹುನ್ನಾರ**

ಇದು ದುರಾಡಳಿತದ ಪರಮಾವಧಿ. 35 ಸಾವಿರ ಕೋಟಿ ವಿದ್ಯುತ್ ಹೊರೆ ಇದೆ. ಇದನ್ನು ಉಳಿದ ಗ್ರಾಹಕರಿಂದ ವಸೂಲಿ ಮಾಡಲು ಸರ್ಕಾರ ತೀರ್ಮಾನಿಸಿದೆ. ಮಹಾರಾಷ್ಟ್ರ ಸರ್ಕಾರ ಉಳಿದ ಗ್ರಾಹಕರ ದರ ಕಡಿಮೆ ಮಾಡಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಆದರೆ ಕರ್ನಾಟಕದಲ್ಲಿ ಉಳಿದ ಗ್ರಾಹಕರ ಮೇಲೆ ದರ ಏರಿಸುವ ಹುನ್ನಾರ ನಡೆದಿದೆ. ಕೈಗಾರಿಕೆಗಳು ಇಲ್ಲಿಂದ ವಲಸೆ ಹೋಗಲಿ ಎಂಬ ಹುನ್ನಾರ ನಡೆದಿದೆ. ವಿತ್ತೀಯ ಶಿಸ್ತು ಇಲ್ಲದರ ಪರಿಣಾಮ ಇದಾಗಿದೆ. ಕೂಡಲೇ ವಿದ್ಯುತ್ ದರ ಏರಿಕೆ ನಿರ್ಧಾರ ಕೈಬಿಡುವಂತೆ ಪ್ರಹ್ಲಾದ್ ಜೋಶಿ ಸರ್ಕಾರಕ್ಕೆ ಆಗ್ರಹಿಸಿದರು.

1. ರಾಜ್ಯದಲ್ಲಿ ನೀರು - ವಿದ್ಯುತ್ ದರ ಏರಿಕೆ ಫಿಕ್ಸ್!
2. ಜನರಿಗೆ ಮತ್ತೆ ಹೊರೆ
3. ಪ್ರತಿ ಯೂನಿಟ್ ವಿದ್ಯುತ್ ಬೆಲೆ ಸರಾಸರಿ 12ರಿಂದ 15 ಪೈಸೆ ಹೆಚ್ಚಳ

## ಬ್ರೋಕರ್ ಆಗಲು ಹೋಗಿ ಜೋಕರ್ ಆದ ಶೆಹಬಾಜ್ ಷರೀಫ್!

**ಟೆಹ್ರಾನ್:** ಪಾಕಿಸ್ತಾನವು ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸಲು, ನೇರ ಸಂಧಾನಕಾರ ಪಾತ್ರ ನಿರ್ವಹಿಸಲು ನಡೆಸಲು ಸಿದ್ಧ ಎಂದು ಹೇಳಿಕೊಂಡ ನಂತರ, ಇರಾನ್ ಪಾಕಿಸ್ತಾನ ನೇತೃತ್ವದ ಅಂತಹ ಯಾವುದೇ ಸಂಧಾನ ಪ್ರಯತ್ನಗಳಲ್ಲಿ ಭಾಗವಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿರುವ ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್‌ಜನರಲ್ ಕಚೇರಿ, ನಾವು ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆಯಲ್ಲಿ ತೊಡಗಿಸಿಕೊಳ್ಳೂವುದಿಲ್ಲ. ಮಧ್ಯವರ್ತಿಗಳ ಮೂಲಕ ಅತಿಯಾದ ಮತ್ತು ಅಸಮಂಜಸ ಬೇಡಿಕೆಗಳನ್ನು ರವಾನಿಸಲಾಗಿದೆ. ಆದರೆ ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆವಹಿಸುವ ಪಾಕಿಸ್ತಾನದ ಆಫರ್ ಬಗ್ಗೆ ನಮಗೆ ಯಾವ ಆಸಕ್ತಿಯೂ ಇಲ್ಲ ಎಂದು ಸ್ಪಷ್ಟಪಡಿಸಿದೆ.



**ಪಾಕಿಸ್ತಾನದ ಆಫರ್ ಬಗ್ಗೆ ನಮಗೆ ಯಾವ ಆಸಕ್ತಿಯೂ ಇಲ್ಲ**

ಅಮೆರಿಕದ ರಾಜತಾಂತ್ರಿಕ ನಿಲುವುಗಳು ಕ್ಷಣಕ್ಷಣಕ್ಕೂ ಬದಲಾಗುತ್ತವೆ. ಸಂಘರ್ಷ ಕೊನೆಗೊಳಿಸಲು ಮಧ್ಯಸ್ಥಿಕೆವಹಿಸಲು ಪಾಕಿಸ್ತಾನ ಮುಂದಾಗಿರುವುದು ಅದರ ಸ್ವಂತ ನಿರ್ಧಾರ.

ನಾವು ಸದ್ಯಕ್ಕೆ ಯಾವುದೇ ಕಾರಣಕ್ಕೂ ಅಮೆರಿಕದೊಂದಿಗೆ ನೇರ ಮಾತುಕತೆಯಲ್ಲಿ ತೊಡಗಿಕೊಳ್ಳುವುದಿಲ್ಲ. ಹೀಗಾಗಿ ನಾವು ಯಾರ ಮಧ್ಯಸ್ಥಿಕೆಯನ್ನೂ ಗುರುತಿಸುವುದಿಲ್ಲ ಎಂದು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಕಚೇರಿ ಕಡ್ಡಿ ತುಂಡು ಮಾಡಿದಂತೆ ಹೇಳಿದೆ. ಪಾಕಿಸ್ತಾನದ ವಿದೇಶಾಂಗ ಸಚಿವ ಮತ್ತು ಉಪ ಪ್ರಧಾನಿ ಇಶಾಕ್ ದಾರ್, ಇಸ್ಲಾಮಾಬಾದ್‌ನಲ್ಲಿ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ತಮ್ಮ ಸಹವರ್ತಿಗಳೊಂದಿಗೆ ಮಾತುಕತೆ ನಡೆಸಿದ ನಂತರ, ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಸ್ಥಿಕೆವಹಿಸಲು ಸಿದ್ಧ ಎಂದು ಪಾಕಿಸ್ತಾನ ಘೋಷಿಸಿತ್ತು. ಪ್ರಧಾನಿ ಶೆಹಬಾಜ್ ಷರೀಫ್ ಅವರು ಇರಾನ್ ಮತ್ತು ಅಮೆರಿಕದ ಉನ್ನತ ನಾಯಕತ್ವದೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದೂ ಇಶಾಕ್ ದಾರ್ ಹೇಳಿದ್ದರು.

ಆದರೆ ವಾಷಿಂಗ್ಟನ್‌ನೊಂದಿಗೆ ಯಾವುದೇ ಅಧಿಕೃತ ಮಾತುಕತೆ ನಡೆಸುವುದನ್ನು ಒಪ್ಪಿಕೊಳ್ಳಲು ಟೆಹ್ರಾನ್ ನಿರಾಕರಿಸಿದೆ. ಇದು ಇಸ್ಲಾಮಾಬಾದ್‌ನ ಮಧ್ಯಸ್ಥಿಕೆ ಪ್ರಯತ್ನಗಳಿಗೆ ಹಿನ್ನಡೆಯನ್ನುಂಟು ಮಾಡಿದೆ. ಅಲ್ಲದೇ ಪಾಕಿಸ್ತಾನದ ಮಧ್ಯಸ್ಥಿಕೆ ಹೇಳಿಕೆಗೆ ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ಪ್ರತಿಕ್ರಿಯೆ ನೀಡಿರುವುದು ಗಮನ ಸೆಳೆದಿದೆ.

## ಬಾಗಲಕೋಟೆಯಲ್ಲಿ ಸಿದ್ದರಾಮಯ್ಯ ಬೀಡುಬಿಟ್ಟರೂ ಜನರ ಆಶೀರ್ವಾದ ಬಿಜೆಪಿಗೆ

■ ಬಾಗಲಕೋಟೆ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ಸಿನವರು

• ಉದಯವಾಹಿನಿ, ಬಾಗಲಕೋಟೆ

ಮುಖ್ಯಮಂತ್ರಿಯಾದಿಯಾಗಿ ಯಾರೇ ಇಲ್ಲಿ ಬಂದು ಬೀಡು ಬಿಟ್ಟರೂ ಮತದಾರರು ಬಿಜೆಪಿಗೆ ಆಶೀರ್ವಾದ ನೀಡಿ ಚರಂತಿಮಠ ಅವರನ್ನು ಗೆಲ್ಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಸೋಮವಾರ ಉತ್ತರ ನೀಡಿದ ಅವರು, ಕಾಂಗ್ರೆಸ್ಸಿನ ತಂತ್ರ, ಕುತಂತ್ರ ಯಾವುದೂ ನಡೆಯುವುದಿಲ್ಲ ಎಂದು ತಿಳಿಸಿದರು. ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಮತದಾರರ ಒಲವು ಬಿಜೆಪಿ ಪರವಾಗಿ ಹೆಚ್ಚಾಗುತ್ತಿದೆ. ಕಾರ್ಯಕರ್ತರು ಉತ್ಸಾಹದಲ್ಲಿದ್ದಾರೆ. ನಮ್ಮ ಅಭ್ಯರ್ಥಿ ಬೆಳಿಗ್ಗೆ 7ರಿಂದ ಮತಯಾಚನೆ ಮಾಡುತ್ತಿದ್ದಾರೆ. ವಾತಾವರಣ ಬಿಜೆಪಿ ಪರವಾಗಿದೆ ಎಂದು ಅವರು ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿದರು.

**ಬಿವೈವಿ ವಿಶ್ವಾಸ**

ನಾನು ಕಳೆದ 20 ವರ್ಷಗಳಿಂದ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಬೆಂಗಳೂರು ಮಹಾನಗರ ಯುವ ಮೋರ್ಚಾ ಕಾರ್ಯದರ್ಶಿಯಾಗಿ, ನಂತರ ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ, ರಾಜ್ಯ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇದೀಗ ಪಕ್ಷದ ವರಿಷ್ಠರು ಅಪೇಕ್ಷೆ ಪಟ್ಟ ಕಾರಣ ಈ ಜವಾಬ್ದಾರಿ ಕೊಟ್ಟಿದ್ದಾರೆ. ಸಂಘಟನೆ ಕೆಲಸ ಹುಡುಗಾಟಿಕೆಯಲ್ಲ. ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಕಾಂಗ್ರೆಸ್ಸಿನ ವಂಶ ರಾಜಕಾರಣವನ್ನು ಜನರು ನೋಡುತ್ತಿದ್ದಾರೆ ಎಂದು ಅವರು ಪ್ರಶ್ನೆಗೆ ಉತ್ತರ ನೀಡಿದರು.



**ಕಾಂಗ್ರೆಸ್ ಪಕ್ಷದಿಂದ ಬಿಜೆಪಿ ಗೆಲುವಿಗೆ ಸಹಕಾರ:** ಯತ್ನಾಳ್ ಅವರ ಪ್ರಚಾರ ಕುರಿತ ಪ್ರಶ್ನೆಗೆ ಉತ್ತರಿಸಿ, ಚರಂತಿಮಠ ಅವರು ಜನಾನುರಾಗಿ. ಯಾರ ವಿರೋಧವನ್ನೂ ಅವರು ಕಟ್ಟಿಕೊಂಡವರಲ್ಲ. ಕಾಂಗ್ರೆಸ್ ಪಕ್ಷದವರೂ ಚರಂತಿಮಠ ಅವರು ಗೆಲ್ಲಬೇಕೆಂದು ಬಯಸುತ್ತಿದ್ದಾರೆ. ಕಾಂಗ್ರೆಸ್ಸಿನವರೇ ಬಯಸುವಾಗ ಅವರು, ಇವರು ಬಯಸುವುದರಲ್ಲಿ ತಪ್ಪೇನಿಲ್ಲ ಎಂದು ನುಡಿದರು.

ಬಾಗಲಕೋಟೆ- ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್ ಪಕ್ಷದವರು ನಮಗೆ ಒಳಗೊಳಗೆ ಸಹಕಾರ ನೀಡುತ್ತಿದ್ದಾರೆ. ಬಿಜೆಪಿ ಅಭ್ಯರ್ಥಿ ಗೆಲ್ಲಿಸಬೇಕೆಂದು ಯಾರೇ ಕೆಲಸ ಮಾಡಿದರೂ ಅದನ್ನು ಸ್ವಾಗತಿಸುವೆ ಎಂದು ಅವರು ತಿಳಿಸಿದರು.

ಚುನಾವಣಾ ಫಲಿತಾಂಶ ಬರಲಿ; ಕಾಂಗ್ರೆಸ್ಸಿನಲ್ಲಿ ಎಷ್ಟು ಬಾಗಿಲು ಇದೆ? ಬಿಜೆಪಿಯಲ್ಲಿ ಎಷ್ಟು ಬಾಗಿಲುಗಳಿವೆ ಎಂಬುದು ಎಂ.ಬಿ.ಪಾಟೀಲರಿಗೆ ಗೊತ್ತಾಗಲಿದೆ ಎಂದು ಅವರು ಹೇಳಿದರು.

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರಿಗೆ ಸಂಬಳ ಕೊಡದೇ 2 ತಿಂಗಳಾಗಿದೆ. ಬೇರೆ ಬೇರೆ ವಿವಿಗಳಲ್ಲೂ ಇದೇ ಪರಿಸ್ಥಿತಿ ಇದೆ. 17 ಬಜೆಟ್ ಮಂಡಿಸಿದ್ದಾಗಿ ಮುಖ್ಯಮಂತ್ರಿಗಳು ಹೇಳುತ್ತಾರೆ. ರಾಜ್ಯದ ಹಣಕಾಸು ಪರಿಸ್ಥಿತಿ ಬಗ್ಗೆ ಶ್ವೇತಪತ್ರಕ್ಕಾಗಿ ಹಲವು ಬಾರಿ ಒತ್ತಾಯಿಸಿದ್ದೇವೆ ಎಂದು ಗಮನ ಸೆಳೆದರು.

### ಪೊಲೀಸ್, ಅತಿಥಿ ಉಪನ್ಯಾಸಕರ ಸಂಬಳ ವಿಳಂಬ

ಹಿಂದೆ ಬಿಜೆಪಿ ಸರಕಾರ ಕೊಟ್ಟ ಕಾರ್ಯಕ್ರಮಗಳಿಗೆ ಇವತ್ತು ಕೂಡ ಗುದ್ದಲಿ ಪೂಜೆ ಆಗುತ್ತಿದೆ. ಯಾವುದೇ ರೀತಿ ಅಭಿವೃದ್ಧಿಗೆ ಇವರು ಹಣ ನೀಡಿಲ್ಲ ಎಂದು ಟೀಕಿಸಿದರು. ಪೊಲೀಸ್ ಇಲಾಖೆ ಸಿಬ್ಬಂದಿ- ಅಧಿಕಾರಿಗಳಿಗೆ ಪ್ರತಿತಿಂಗಳು ಒಂದನೇ ತಾರೀಖಿನಂದು ಸಂಬಳ ಕೊಡಬೇಕು. ರಾಜ್ಯದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದೊಂದು ತಿಂಗಳು ತಡ ಆಗುತ್ತಿದೆ ಎಂದು ಆಕ್ಷೇಪಿಸಿದರು.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹14,896/Gram24ct ₹13,590/Gram22ct ಬೆಳ್ಳಿ: ₹245.00/Gram

# ಐಪಿಎಲ್ ಕ್ರಿಕೆಟ್ ನೋಡಲು ಶಾಸಕರಿಗೆ 3 ಉಚಿತ ಟಿಕೆಟ್! ಕೆಎಸ್ ಸಿಎಗೆ ಸೂಚನೆ ಕೊಟ್ಟ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಐಪಿಎಲ್ ಕ್ರಿಕೆಟ್ ಹಾಗೂ ಇತರ ಅಂತಾರಾಷ್ಟ್ರೀಯ ಕ್ರಿಕೆಟ್ ನೋಡಲು ಶಾಸಕರಿಗೆ ಉಚಿತವಾಗಿ ಟಿಕೆಟ್ ನೀಡುವಂತೆ ವಿಧಾನಸಭೆಯಲ್ಲಿ ನಡೆದ ಚರ್ಚೆ ಭಾರೀ ವಿವಾದಕ್ಕೆ ಕಾರಣವಾಗಿತ್ತು. ಈ ನಡುವೆ ಡಿಸಿಎಂ ಡಿಕೆಶಿ ಮಹತ್ವದ ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪದಾಧಿಕಾರಿಗಳ ಜೊತೆಗಿನ ಚರ್ಚೆಯ ಬಳಿಕ ಮಾತನಾಡಿ, ಶಾಸಕರಿಗೆ ಐಪಿಎಲ್ ಕ್ರಿಕೆಟ್ ನೋಡಲು ಉಚಿತವಾಗಿ 3 ಟಿಕೆಟ್ ನೀಡುವಂತೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ಸೋಮವಾರ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ್ ಪ್ರಸಾದ್, ಕಾರ್ಯದರ್ಶಿ ವಿನಯ್, ಡಿವಿಸಿಎಂಡಿ ವೆಂಕಟೇಶ್, ಆರ್ ಸಿ ಬಿ ಸಿಇಒ ರಾಜೇಶ್ ಮೆನನ್ ಮತ್ತಿತರರು ಡಿಸಿಎಂ ಡಿ ಕೆ ಶಿವಕುಮಾರ್ ಅವರ ಜತೆ ಸದಾಶಿವನಗರ ನಿವಾಸದಲ್ಲಿ ಸಮಾಲೋಚನೆ ನಡೆಸಿದರು. ಈ ಬಳಿಕ ಮಾತನಾಡಿದ ಡಿಕೆಶಿ, ಈ ವಿಚಾರವಾಗಿ ಸ್ಪೀಕರ್ ಯು.ಟಿ ಖಾದರ್ ಅವರ ಜೊತೆಗೂ ಮಾತುಕತೆ ನಡೆಸಿದ್ದೇನೆ. ಈಗ ಐಪಿಎಲ್ ಪಂದ್ಯಾಟ ನಡೆಯುತ್ತಿದ್ದು, ಶಾಸಕರಿಗೆ ಮೂರು ಟಿಕೆಟ್ ನೀಡಲು ಹೇಳಿದ್ದೇನೆ ಎಂದರು. ಐಪಿಎಲ್ ಪಂದ್ಯಾಟಕ್ಕೆ ಮೂರು ಟಿಕೆಟ್, ಇತರ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟಗಳಿಗೆ ಎರಡು ಟಿಕೆಟ್ ನೀಡುವಂತೆ ಸೂಚಿಸಲಾಗಿದೆ. ಹೆಚ್ಚುವರಿ ಟಿಕೆಟ್ ಬೇಕಾದರೆ ಅದನ್ನು ಖರೀದಿ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು. ಈ ಮೂಲಕ ಈ ವಿಚಾರವನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗುವುದು ಎಂದು ಅವರು ತಿಳಿಸಿದರು. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಪದಾಧಿಕಾರಿಗಳ ಜೊತೆಗೆ ಸ್ಟೇಡಿಯಂ ವಿಚಾರಕ್ಕೆ ಸಂಬಂಧಿಸಿ ಮಾತಾಗಿದೆ. ಹೆಚ್ಚುವರಿ ಸ್ಟೇಡಿಯಂ ವಿಚಾರಕ್ಕೆ ಚರ್ಚೆ ಆಗಿದೆ. ಅಲ್ಲದೆ, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಸನ ಹೆಚ್ಚಿಸೋ ಚಿಂತನೆಯಿದೆ. ಕೆಎಸ್‌ಸಿಎ ಅದರ ಯೋಚನೆ ಮಾಡಿದ್ದಾರೆ. ಅದಕ್ಕೆ ಸರ್ಕಾರಕ್ಕೆ ವರದಿ ನೀಡಿ ಎಂದಿದ್ದೇನೆ ಎಂದು ಮಾಹಿತಿ ನೀಡಿದರು. ಅಧಿವೇಶನದಲ್ಲಿ ಶಾಸಕರಿಗೆ ಉಚಿತ ಟಿಕೆಟ್ ನೀಡುವ ವಿಚಾರವಾಗಿ ಚರ್ಚೆ ಆಗಿತ್ತು. ಶಾಸಕ ವಿಜಯಾನಂದ ಕಾಶಪ್ಪನವರ್ ಅವರು ಈ ಕುರಿತಾಗಿ ಬೇಡಿಕೆ ಇಟ್ಟಿದ್ದರು. ಇದಕ್ಕೆ ಬಿಜೆಪಿ ಶಾಸಕರು ಧ್ವನಿಗೂಡಿಸಿದ್ದರು. ಬಳಿಕ ಸ್ಪೀಕರ್ ಯುಟಿ ಖಾದರ್ ಅವರು ಈ ಬಗ್ಗೆ ಪರಿಶೀಲನೆ ನಡೆಸುವಂತೆ ಸೂಚನೆ ನೀಡಿದ್ದರು. ಅಲ್ಲದೆ, ಶಾಸಕರಿಗೆ ಕ್ರೀಡಾಂಗಣಕ್ಕೆ ಹೋದಾಗ ಅಗತ್ಯ ಗೌರವ ನೀಡುವಂತೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದರು.





ಉದಯವಾಹಿನಿ ಚಿತ್ರ

**ಐಪಿಎಲ್ ಕ್ರಿಕೆಟ್ ಪಂದ್ಯಾಟ ವೀಕ್ಷಿಸಲು ಶಾಸಕರಿಗೆ ಮೂರು ಟಿಕೆಟ್ ನೀಡಲು ತೀರ್ಮಾನ ಮಾಡಲಾಗಿದೆ. ಇತರ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾಟಗಳಿಗೆ 2 ಟಿಕೆಟ್ ಉಚಿತವಾಗಿ ನೀಡಿದರೆ, ಎರಡು ಟಿಕೆಟ್ ಹಣ ಕೊಟ್ಟು ಖರೀದಿ ಮಾಡಬೇಕು. ಯಾರಿಗೆ ಟಿಕೆಟ್ ಬೇಕು ಅವರು ಸ್ಪೀಕರ್ ಯು.ಟಿ ಖಾದರ್ ಅವರಿಗೆ ಪತ್ರವನ್ನು ಬರೆಯಬೇಕು. ಸ್ಪೀಕರ್ ಕಚೇರಿಯಿಂದ ಟಿಕೆಟ್ ಕೊಂಡುಕೊಳ್ಳಲು ಅದ್ಯತೆಯ ಮೇಲೆ ಅವಕಾಶ ಮಾಡಿ ಕೊಡುತ್ತೇವೆ.**

**-ಡಿಕೆ ಶಿವಕುಮಾರ್, ಡಿಸಿಎಂ**

## ಬೀದಿ ನಾಯಿಗಳಿಗೆ ದತ್ತು ಭಾಗ್ಯ

• ಉದಯವಾಹಿನಿ, ಬೆಂಗಳೂರು

ನಾಯಿ ಮರಿಗಳ ದತ್ತು ಶಿಬಿರವನ್ನು ಜಯನಗರದ ಶಾಲಿನಿ ಮೈದಾನದಲ್ಲಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ಯಶಸ್ವಿಯಾಗಿ ಆಯೋಜಿಸಿತ್ತು. ಈ ಶಿಬಿರದಲ್ಲಿ 10 ಬೀದಿ ನಾಯಿ ಮರಿಗಳಿಗೆ ಹೊಸ ಮನೆಗಳು ದೊರೆತಿವೆ. ಪ್ರಾಣಿಪ್ರಿಯರು ಉತ್ಸಾಹದಿಂದ ಭಾಗವಹಿಸಿ ಗಮನ ಸೆಳೆದರು. ಪಶುಸಂಗೋಪನಾ ಇಲಾಖೆಯ ಮುಖ್ಯ ಪಶುವೈದ್ಯಾಧಿಕಾರಿ ಡಾ. ಶ್ರೀನಾಥ್ ನೇತೃತ್ವದಲ್ಲಿ, ಆಯುಕ್ತ ಕೆ.ಎನ್. ರಮೇಶ್ ಮಾರ್ಗದರ್ಶನದಲ್ಲಿ ಈ ಶಿಬಿರವನ್ನು ನಡೆಸಲಾಗಿದ್ದು, ಸೂಪರ್‌ಟೇಲ್ಸ್, ಕೇರ್, ವಾಟರ್ ಫಾರ್ ವಾಯ್ಸ್‌ಲೆಸ್, ಫಿಯಾಪೋ ಸಂಸ್ಥೆಗಳು ಸಹಯೋಗ ನಡೆದ ಈ ದತ್ತು ಶಿಬಿರದ ಪ್ರಮುಖ ಉದ್ದೇಶ ಬೀದಿ ನಾಯಿಗಳಿಗೆ ಸುರಕ್ಷಿತ ಆಶ್ರಯ ಒದಗಿಸುವುದರ ಜೊತೆಗೆ, ನಗರದಲ್ಲಿ ನಾಯಿಗಳ ಸಂಖ್ಯೆಯನ್ನು ನಿಯಂತ್ರಿಸುವುದು ಹಾಗೂ ಜನರ ಮನೋಭಾವವನ್ನು ಬದಲಿಸುವುದಾಗಿದೆ. ಜನರಿಂದ ಲಭಿಸಿದ ಉತ್ತಮ ಪ್ರತಿಕ್ರಿಯೆಯಿಂದ ಪ್ರೇರಿತರಾದ ಪಾಲಿಕೆ, ಇಂತಹ ದತ್ತು ಶಿಬಿರಗಳನ್ನು ತ್ರೈಮಾಸಿಕವಾಗಿ ನಡೆಸುವ ಯೋಜನೆ ರೂಪಿಸಿದೆ. ಮಾನವೀಯತೆ ಮತ್ತು ಪ್ರಾಣಿಪ್ರೀತಿಯೊಂದಿಗಿನ ಈ ಉಪಕ್ರಮ, ನಗರದಲ್ಲಿ ಮಾನವ ಮತ್ತು ಪ್ರಾಣಿಗಳ ನಡುವೆ ಸಮತೋಲನದ ಸಹಬಾಳ್ವೆಗೆ ದಾರಿಯಿಡುತ್ತಿದೆ ಎಂದು ಪಶುಪಾಲನೆ ಇಲಾಖೆ ಅಧಿಕಾರಿ ಶ್ರೀನಾಥ್ ತಿಳಿಸಿದ್ದಾರೆ.

## ಐತಿಹಾಸಿಕ ಬೆಂಗಳೂರು ಹಸಿ ಕರಗ

• ಉದಯವಾಹಿನಿ, ಬೆಂಗಳೂರು

ಐತಿಹಾಸಿಕ ಬೆಂಗಳೂರು ಹಸಿ ಕರಗ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಧರ್ಮರಾಯ ಸ್ವಾಮಿ ದೇವಾಸ್ಥಾನದಲ್ಲಿ ಹಸಿಕರಗ ಆಚರಣೆ ನೆರವೇರಲಿದೆ. ಹೂವಿನ ಕರಗಕ್ಕೂ ಮುನ್ನ ನಡೆಯುವ ಪ್ರಮುಖ ಆಚರಣೆಯಾದ ಹಸಿಕರಗ, ಮಧ್ಯರಾತ್ರಿ 3 ಗಂಟೆಗೆ ಸಂಪಂಗಿ ಕೆರೆಯ ಶಕ್ತಿಪೀಠದಲ್ಲಿ ವಿಶೇಷ ಪೂಜೆಯೊಂದಿಗೆ ಆರಂಭವಾಗಿ. ಬಳಿಕ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಹಸಿಕರಗವನ್ನು ದೇವಾಲಯಕ್ಕೆ ತರಲಾಗುತ್ತದೆ.

ಚಿತ್ರಹುಣ್ಣಿಮೆಗೆ ಮೂರು ದಿನ ಮೊದಲು ದ್ರೌಪದಿ ದೇವಿ ಭೂಮಿಗೆ ಆಗಮಿಸುತ್ತಾಳೆ ಎಂಬ ನಂಬಿಕೆ ಇದ್ದು, ಹಸಿಕರಗದಲ್ಲಿ ದೇವಿ ಮಗುವಿನ ರೂಪದಲ್ಲಿ ನೆಲೆಸುತ್ತಾಳೆ ಎಂಬ ಭಕ್ತರ ಭಾವನೆ ವಿಶೇಷವಾಗಿದೆ. ಇನ್ನೂ ಎರಡು ದಿನಗಳಲ್ಲಿ ನಡೆಯಲಿರುವ ಐತಿಹಾಸಿಕ ಹೂವಿನ ಕರಗ ಶಕ್ತ್ಯೋತ್ಸವಕ್ಕೆ ಸಕಲ ಸಿದ್ಧತೆಗಳು ಜೋರಾಗಿದೆ. ಏಪ್ರಿಲ್ 1ರಂದು ನಡೆಯುವ ಕರಗ ಮಹೋತ್ಸವವನ್ನು ಕಣ್ತುಂಬಿಕೊಳ್ಳಲು ಭಕ್ತರು ಕಾತರದಿಂದ ಕಾಯುತ್ತಿದ್ದಾರೆ.

## ಶೆಲ್ ಪೆಟ್ರೋಲ್ ಬಂಕ್‌ಗಳಲ್ಲಿ ಮತ್ತೆ ತೈಲ ದರ ಏರಿಕೆ

• ಉದಯವಾಹಿನಿ, ಬೆಂಗಳೂರು

ಒಂದು ಕಡೆ ಮಧ್ಯಪ್ರಾಚ್ಯದಲ್ಲಿ ಅಮೇರಿಕಾ-ಇಸ್ರೇಲ್-ಇರಾನ್ ನಡುವೆ ಭೀಕರ ಯುದ್ಧ ನಡೆಯುತ್ತಿರುವ ಕಾರಣ, ದೇಶದೆಲ್ಲೆಡೆ ಎಲ್‌ಪಿಜಿ, ತೈಲ ಬಿಕ್ಕಟ್ಟು ಕೊರತೆ ಉಂಟಾಗಿರುವ ಬೆನ್ನಲ್ಲೇ, ಖಾಸಗಿ ಪೆಟ್ರೋಲ್ ಕಂಪನಿ ಶೆಲ್ ಬಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ದರಗಳನ್ನು ಮತ್ತೆ ಪರಿಷ್ಕರಣೆ ಮಾಡುವ ಮೂಲಕ ಸವಾರರ ಜೇಬಿಗೆ ಕತ್ತರಿ ಹಾಕಿದೆ. ಪೆಟ್ರೋಲ್-ಡೀಸೆಲ್- ಬೆಲೆಯನ್ನು ಶೆಲ್ ಕಂಪನಿ ಕಳೆದ 15 ದಿನಗಳಲ್ಲಿ ಮೂರನೇ ಬಾರಿಗೆ ಹೆಚ್ಚಳ ಮಾಡಿದೆ.

ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಜೊತೆಗೆ ಪ್ರಿಮಿಯಂ ಇಂಧನದ ದರಗಳೂ ಹೆಚ್ಚಾಗಿವೆ. ಇದು ವಾಹನ ಸವಾರರಿಗೆ ದೊಡ್ಡ ಆಘಾತ ನೀಡಿದೆ. 106 ರೂ. ಇದ್ದ ಪೆಟ್ರೋಲ್ ದರವನ್ನು 108.50 ರೂಪಾಯಿಗೆ ಏರಿಕೆ ಮಾಡಲಾಗಿತ್ತು. ಇದೀಗ 6 ರೂಪಾಯಿ ಹೆಚ್ಚಿಸಿದ್ದು, ಸಾಮಾನ್ಯ ಪೆಟ್ರೋಲ್ ದರ 112 ರೂ.ಗೆ ಹೆಚ್ಚಳವಾಗಿದ್ದರೆ, ಪ್ರಿಮಿಯಂ ಪೆಟ್ರೋಲ್ ದರ ಪ್ರತಿ ಲೀಟರ್‌ಗೆ 122.42 ರೂಪಾಯಿ ತಲುಪಿದೆ. ಇನ್ನೂ ಸಾಮಾನ್ಯ ಡೀಸೆಲ್ ಬೆಲೆ ಕಳೆದ ವಾರ 91 ರೂ. ನಿಂದ 93.50 ರೂ.ಗಳಿಗೆ ಏರಿಕೆಯಾಗಿತ್ತು. ಇದೀಗ ಲೀಟರ್ ಡೀಸೆಲ್ 98 ರೂಪಾಯಿಗೆ ಹೆಚ್ಚಳವಾಗಿದ್ದು, ಪ್ರಿಮಿಯಂ ಡೀಸೆಲ್ ಪ್ರತಿ ಲೀ.ಗೆ 108.50 ರೂ. ತಲುಪಿದೆ.

**ಏಕೆ ಈ ಏರಿಕೆ?:** ಇರಾನ್-ಅಮೇರಿಕಾ-ಇಸ್ರೇಲ್ ನಡುವಿನ ಯುದ್ಧದಿಂದಾಗಿ ಜಗತ್ತಿನಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಇಂಧನ ಸಾಗಣೆಗೆ ಅಡಚಣೆ ಉಂಟಾಗಿರುವುದು ಇದಕ್ಕೆ ಮುಖ್ಯ ಕಾರಣ. ಖಾಸಗಿ ಕಂಪನಿಗಳು ಈ ವೆಚ್ಚವನ್ನು ಗ್ರಾಹಕರ ಮೇಲೆ ಹೊರಿಸುತ್ತಿವೆ. ಸರ್ಕಾರಿ ಕಂಪನಿಗಳಲ್ಲಿ ಇನ್ನೂ ದರ ಯಥಾಸ್ಥಿತಿಯಲ್ಲಿದೆಯಾದರೂ, ಶೆಲ್‌ನಂತಹ ಖಾಸಗಿ ಬಂಕ್‌ಗಳಲ್ಲಿ ದರ ಏರಿಕೆಯಾಗುತ್ತಿದೆ. ಈ ಏರಿಕೆಯಿಂದ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ದಿನನಿತ್ಯ ಕೆಲಸಕ್ಕೆ ಬೈಕ್ ಅಥವಾ ಕಾರು ಬಳಸುವವರಿಗೆ ಹೆಚ್ಚುವರಿ ಖರ್ಚು ಬರುತ್ತಿದೆ.

### ಎತ್ತಿನಹೊಳೆ ಯೋಜನೆ: ಉದ್ದೇಶಿತ ಜಿಲ್ಲೆಗಳಿಗೆ ತಲುಪದ ನೀರು, 5,108 ಕೋಟಿ ರೂ. ಕಾಮಗಾರಿ ಬಾಕಿ


# ವಿವಾದಿತ ಎತ್ತಿನಹೊಳೆ ಯೋಜನೆ ಮತ್ತಷ್ಟು ವಿಳಂಬ

• ಉದಯವಾಹಿನಿ, ಬೆಂಗಳೂರು

ವಿವಾದಿತ ಎತ್ತಿನಹೊಳೆ ಯೋಜನೆ ಅಡಿಯಲ್ಲಿ ಉದ್ದೇಶಿತ ಜಿಲ್ಲೆಗಳಿಗೆ ಇನ್ನೂ ನೀರು ತಲುಪಿಲ್ಲ. ಅಲ್ಲದೆ, ಯೋಜನೆಯ 5,108 ಕೋಟಿ ರೂ. ಕಾಮಗಾರಿ ಬಾಕಿ ಉಳಿದಿದೆ ಎಂದು ಜಲಸಂಪನ್ಮೂಲ ಇಲಾಖೆ ಮಾಹಿತಿಯನ್ನು ನೀಡಿದೆ. ಈ ಯೋಜನೆಯಿಂದ 7 ಜಿಲ್ಲೆಗಳಿಗೆ ನೀರನ್ನು ಒದಗಿಸಲು ಯೋಜಿಸಲಾಗಿದ್ದು, ಏಕೀಕೃತ ಅರಣ್ಯ, ತೀರುವಳಿ ಪ್ರಕ್ರಿಯೆಗಳಿಂದ ಯೋಜನೆಯ ಉದ್ದೇಶಿತ ಜಿಲ್ಲೆಗಳಿಗೆ ನೀರನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದೆ.

ಬದಲಾಗಿ ಗುರುತ್ವ ಕಾಲುವೆಯ 32.50 ಕಿ.ಮೀ ವರೆಗೆ ನೀರನ್ನು ಹರಿಸಿ ಅಲ್ಲಿನ ನಾಲಾ ಎಸ್ಕೆಪ್ ಮೂಲಕ ಸುಮಾರು 132.50 ಕಿ.ಮೀ ದೂರದಲ್ಲಿರುವ ವಾಣಿ ವಿಲಾಸ ಸಾಗರ ಜಲಾಶಯಕ್ಕೆ ವೇದಾ ವ್ಯಾಲಿಯ ಮುಖಾಂತರ ತಾತ್ಕಾಲಿಕವಾಗಿ 2024-25ನೇ ಹಾಗೂ 2025-26ನೇ ಸಾಲಿನಲ್ಲಿ ನೀರನ್ನು ಹರಿಸಲಾಗಿದೆ ಎಂದು ಮಾಹಿತಿಯನ್ನು ನೀಡಿದೆ. ಈ ಯೋಜನೆಗಾಗಿ ಜನವರಿ-2026ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.18,143.07 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ರೂ.5108.59 ಕೋಟಿಗಳ ಮೊತ್ತದ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಯೋಜನಾ ಕಾಮಗಾರಿಗಳು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಪ್ರಗತಿಯಲ್ಲಿದೆ. ಈ ಯೋಜನೆಯನ್ನು 2013-14 ನೇ ಸಾಲಿನಿಂದ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಕಾರಣಗಳಿಂದ ವಿಳಂಬವಾಗಿರುತ್ತದೆ. ರಾಷ್ಟ್ರೀಯ ಹಸಿರು ನ್ಯಾಯ ಪೀಠದಲ್ಲಿ ಪ್ರಕರಣಗಳು ಬಾಕಿ ಇದೆ. ರೈತರು ಭೂ-ಪರಿಹಾರ ಪಡೆಯುವಲ್ಲಿ ಆದ ವಿಳಂಬ, ಏಕೀಕೃತ ಅರಣ್ಯ ತೀರುವಳಿಯನ್ನು ಪಡೆಯುವಲ್ಲಿನ ಪ್ರಕ್ರಿಯೆ, ದ್ವಿ-ಹಕ್ಕು ಮಾಲೀಕತ್ವದ ಗುರುತಿಸುವಲ್ಲಿನ ಪ್ರಕ್ರಿಯೆ ಬಾಕಿ ಇದೆ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಪೆಟ್ರೋನೆಟ್, ಗೇಲ್ ಕ್ರಾಸಿಂಗ್‌ಗಳಿಗೆ ಸಂಬಂಧ ಪಟ್ಟ ಇಲಾಖೆಗಳಿಂದ ಅನುಮತಿ ದೊರೆಯುವ ಪ್ರಕ್ರಿಯೆ ಬಾಕಿ ಇದೆ.

ಪ್ರಸ್ತುತ, ನಿಗಮದ ಮಂಡಳಿಯ ಅನುಮೋದನೆಯನ್ವಯ ಪರಿಷ್ಕೃತ ಯೋಜನಾ ವರದಿಯಂತೆ ಕಾಮಗಾರಿಯ ಬದಲಾದ ಸ್ವರೂಪಕ್ಕೆ ಅನುಗುಣವಾಗಿ 1.88 ಟಿ.ಎಂ.ಸಿ ಸಾಮರ್ಥ್ಯದ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ನಿರ್ಮಾಣದ ಕಾಮಗಾರಿಯನ್ನು ಗುತ್ತಿಗೆ ವಹಿಸಲು ಕ್ರಮ ಜರುಗಿಸಲಾಗುತ್ತಿದೆ. ಜೊತೆಗೆ ಕೊರಟಗೆರೆ ತಾಲ್ಲೂಕು ವಡೇರಹಳ್ಳಿ ಸಮೀಪ 1.20 ಟಿಎಂಸಿ ಸಂಗ್ರಹಣಾ ಸಾಮರ್ಥ್ಯದ ಸಮತೋಲನಾ ಮತ್ತೊಂದು ಜಲಾಶಯವನ್ನು ನಿರ್ಮಿಸಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ. ಕಾಮಗಾರಿಯ



ಉದಯವಾಹಿನಿ ಚಿತ್ರ

**ಯೋಜನೆಗೆ 12 ವರ್ಷ**

**ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳನ್ನು ಎರಡು ಕೈಗೆತ್ತಿಕೊಳ್ಳಲಾಗಿದ್ದು, 12 ವರ್ಷಗಳು ಕಳೆದಿವೆ. ಈ ಹಂತಗಳಲ್ಲಿ ಯೋಜನೆಯ ಪುನರ್ ಪರಿಷ್ಕೃತ ಯೋಜನಾ ವರದಿಯಂತೆ ರೂ.23,251.66 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. 2027-28ನೇಸಾಲಿನಲ್ಲಿ ಅಕ್ಟೋಬರ್ -2027ರ ಅಂತ್ಯಕ್ಕೆ, ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆ ಮೇಲೆ ಪೂರ್ಣಗೊಳಿಸಲು ಯೋಜಿಸಲಾಗಿದೆ.**

**ಜಲಸಂಪನ್ಮೂಲ ಇಲಾಖೆ ಮಾಹಿತಿ**

**ಒಟ್ಟು 8528 ಎಕರೆ 16.04 ಗುಂಟೆ ಜಮೀನಿನ ಅವಶ್ಯಕತೆ ಯೋಜನೆಗೆ ಇದೆ. ಈ ಪೈಕಿ 5803 ಎಕರೆ 10.04 ಗುಂಟೆ ಜಮೀನನ್ನು ಭೂಸ್ವಾಧೀನ ಮಾಡಲಾಗಿದೆ. ರೂ 1561.82 ಕೋಟಿ ಪರಿಹಾರ ಮೊತ್ತವನ್ನು ರೈತರಿಗೆ ಪಾವತಿ ಮಾಡಲಾಗಿದೆ. 673.08 ಕೋಟಿ ಪಾವತಿಸಲು ಬಾಕಿ ಇದೆ. ಅಲ್ಲದೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರನ್ನೊದಗಿಸುವ ಫೀಡರ್ ಪೈಪ್ ಲೈನ್ ಕಾಮಗಾರಿಗಳ ಹಾಗೂ ಸಮತೋಲನಾ ಜಲಾಶಯ ನಿರ್ಮಾಣಕ್ಕಾಗಿ ಬಾಕಿ 2724 ಎಕರೆ -38 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ಜಲಸಂಪನ್ಮೂಲ ಇಲಾಖೆ ಮಾಹಿತಿಯನ್ನು ನೀಡಿದೆ.**

ಪ್ರಸ್ತುತ, ನಿಗಮದ ಮಂಡಳಿಯ ಅನುಮೋದನೆಯನ್ವಯ ಪರಿಷ್ಕೃತ ಯೋಜನಾ ವರದಿಯಂತೆ ಬದಲಾದ ಸ್ವರೂಪಕ್ಕೆ ಅನುಗುಣವಾಗಿ 1.88 ಟಿ.ಎಂ.ಸಿ ಸಾಮರ್ಥ್ಯದ ಲಕ್ಕೇನಹಳ್ಳಿ ಸಮತೋಲನಾ ಜಲಾಶಯದ ನಿರ್ಮಾಣದ ಕಾಮಗಾರಿಯನ್ನು ಗುತ್ತಿಗೆ ವಹಿಸಲು ಕ್ರಮ ಜರುಗಿಸಲಾಗುತ್ತಿದೆ.

ಅಲ್ಲದೆ, ಕೊರಟಗೆರೆ ತಾಲ್ಲೂಕು ವಡೇರಹಳ್ಳಿ ಸಮೀಪ 1.20 ಟಿಎಂಸಿ ಸಂಗ್ರಹಣಾ ಸಾಮರ್ಥ್ಯದ ಮತ್ತೊಂದು ಸಮತೋಲನಾ ಜಲಾಶಯವನ್ನು ನಿರ್ಮಿಸಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮ ವಹಿಸಲಾಗುತ್ತಿದೆ. ಈ ಯೋಜನೆಯನ್ನು ಅನುದಾನದ ಲಭ್ಯತೆಯ ಮೇರೆಗೆ ಆದ್ಯತೆ ಮೇಲೆ ಸಂಪೂರ್ಣವಾಗಿ ಪೂರ್ಣಗೊಳಿಸಿ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸಲು ಅಕ್ಟೋಬರ್-2027ರ ಅಂತ್ಯಕ್ಕೆ ಯೋಜಿಸಲಾಗಿದೆ ಎಂದು ಇಲಾಖೆ ಮಾಹಿತಿಯನ್ನು ನೀಡಿದೆ.

## ತೆರಿಗೆ ವಂಚಕರ ಆಸ್ತಿ ಬಿಜಿಎ ವಶಕ್ಕೆ

ಉದಯವಾಹಿನಿ ಚಿತ್ರ




• ಉದಯವಾಹಿನಿ, ಬೆಂಗಳೂರು

ದಕ್ಷಿಣ ನಗರ ಪಾಲಿಕೆ ಹಾಗೂ ಪೂರ್ವ ನಗರ ಪಾಲಿಕೆಗಳು ಆಸ್ತಿ ತೆರಿಗೆ ಪಾವತಿಸುವಲ್ಲಿ ವಿಫಲರಾಗಿರುವ ಸುಸ್ತಿದಾರರ ಸ್ವತ್ತುಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ಮುಂದಾಗಿವೆ. ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯ ಪ್ರಕಾರ, ಪ್ರತಿಯೊಬ್ಬ ಸ್ವತ್ತು ಮಾಲೀಕರೂ ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸುವುದು ಕಡ್ಡಾಯ. ಆದರೆ, ಹಲವು ಬಾರಿ ನೋಟಿಸ್, ಬೇಡಿಕೆ ಪತ್ರಗಳು ಹಾಗೂ ಮೊಬೈಲ್ ಸಂದೇಶಗಳ ಮೂಲಕ ಸೂಚನೆ ನೀಡಿದರೂ ಕೆಲವು ಮಾಲೀಕರು ತೆರಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿದ್ದಾರೆ.ಇದರಿಂದಾಗಿ, ದಕ್ಷಿಣ ಪಾಲಿಕೆ ವ್ಯಾಪ್ತಿಯಲ್ಲಿ ಗುರುತಿಸಲಾದ ಕೆಲವು ಸ್ವತ್ತುಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿತ್ತು. ಆದರೆ ಹರಾಜಿನಲ್ಲಿ ಬಿಡ್ಡುದಾರರು ಭಾಗವಹಿಸದ ಹಿನ್ನೆಲೆಯಲ್ಲಿ ಈಗ ಪಾಲಿಕೆಯೇ ಆ ಸ್ವತ್ತುಗಳನ್ನು ಖರೀದಿಸಿ ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಮುಂದಾಗಿವೆ. ಮೊದಲ ಹಂತದಲ್ಲಿ ಬೊಮ್ಮನಹಳ್ಳಿ ವಲಯದ 22 ಹಾಗೂ ಜಯನಗರ ವಲಯದ 30 ಸ್ವತ್ತುಗಳನ್ನು ಪಾಲಿಕೆ ವಶಕ್ಕೆ ಪಡೆಯುವ ಪ್ರಕ್ರಿಯೆ ಆರಂಭವಾಗಿದೆ. ಪಾಲಿಕೆ ತನ್ನ ನಿಧಿಯಿಂದ ಮೊತ್ತ ಪಾವತಿಸಿ, ಬಾಕಿ ತೆರಿಗೆ ಕಡಿತಗೊಳಿಸಿದ ನಂತರ ಉಳಿದ ಹಣವನ್ನು ಮೂಲ ಮಾಲೀಕರ ಖಾತೆಗೆ ಜಮಾ ಮಾಡಲಿದೆ. ಇದೇವೇಳೆ, ಬೆಂಗಳೂರು ಪೂರ್ವ ನಗರ ಪಾಲಿಕೆಯಲ್ಲೂ 51 ಆಸ್ತಿ ತೆರಿಗೆ ಬಾಕಿದಾರರ ಸ್ವತ್ತುಗಳನ್ನು ಪಾಲಿಕೆ ಸುಪರ್ದಿಗೆ ಪಡೆಯಲು ತೀರ್ಮಾನಿಸಲಾಗಿದೆ. ಮಹದೇವಪುರ ಮತ್ತು ಕೆ.ಆರ್.ಪುರ ವಲಯಗಳಲ್ಲಿ ಈ ಕ್ರಮ ಜಾರಿಯಾಗಲಿದೆ.ಆದರೆ, ಸ್ವತ್ತು ಮಾಲೀಕರಿಗೆ ಇನ್ನೊಂದು ಅವಕಾಶ ನೀಡಲಾಗಿದೆ. ಒಂದು ತಿಂಗಳೊಳಗೆ ಬಾಕಿ ತೆರಿಗೆ ಪಾವತಿಸಿದರೆ, ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಕ್ರಮದಿಂದ ವಿನಾಯಿತಿ ದೊರೆಯಲಿದೆ. ನಗರ ಪಾಲಿಕೆಗಳು ಸ್ಪಷ್ಟಪಡಿಸಿರುವಂತೆ, ಆಸ್ತಿ ತೆರಿಗೆ ನಗರ ಅಭಿವೃದ್ಧಿಗೆ ಪ್ರಮುಖ ಆದಾಯ ಮೂಲವಾಗಿದ್ದು, ನಾಗರಿಕರು ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸುವುದು ಅಗತ್ಯವಾಗಿದೆ. ತೆರಿಗೆ ಬಾಕಿದಾರರಿಗೆ ಇದು ಅಂತಿಮ ಎಚ್ಚರಿಕೆ ಎಂದು ನಗರಪಾಲಿಕೆ ಎಚ್ಚರಿಕೆ ನೀಡಿದೆ.

## ರಾಜ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ

• ಉದಯವಾಹಿನಿ, ಬೆಂಗಳೂರು



ಎಸ್ಸೆಸ್ಸೆಲ್ಸಿಯಲ್ಲಿ ಹಿಂದಿ ಭಾಷೆ ಅಂಕಗಳನ್ನು ತೆಗೆದು ಹಾಕುವ ಮೂಲಕ ರಾಜ್ಯ ಸರ್ಕಾರ ತುಘಲಕ್ ದರ್ಬಾರ್ ನಡೆಸುತ್ತಿದೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದಾರೆ.ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಅನಗತ್ಯವಾಗಿ ವಿದ್ಯಾರ್ಥಿಗಳಿಗೆ ತೊಂದರೆ ಉಂಟು ಮಾಡಬೇಕೆಂಬ ಕಾರಣಕ್ಕಾಗಿಯೇ ಎಸ್ಸೆಸ್ಸೆಲ್ಸಿ ಹಿಂದಿ ಪ್ರಶ್ನೆಪತ್ರಿಕೆ ಅಂಕಗಳನ್ನು ಪರಿಗಣಿಸದಿರಲು ತೆಗೆದುಕೊಂಡಿರುವ ನಿರ್ಧಾರ ಸರಿಯಲ್ಲ ಎಂದು ಆಕ್ಷೇಪಿಸಿದರು.

ಹಿಂದಿ ಬಳಕೆ ವಿರೋಧಿಸುವ ಮೂಲಕ ರಾಜ್ಯ ಸರ್ಕಾರ ತುಘಲಕ್ ನೀತಿ ಅನುಸರಿಸುತ್ತಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದಿ ಪ್ರಚಾರ ಸಮಿತಿಗಳ ಮೂಲಕ ಹಿಂದಿ ಕಲಿಕೆಗೆ ಉತ್ತೇಜನ ಕೊಡಬೇಕು ಎಂದು ರಾಷ್ಟ್ರಪಿತ ಮಹಾತ್ಮ ಗಾಂಧಿ ಕರೆ ಕೊಟ್ಟಿದ್ದರು. ಏಕಾಏಕಿ ಈಗ ಈ ಹಿಂದಿ ರದ್ದು ಮಾಡಿರುವುದು ಎಷ್ಟು ಸರಿ ? ಎಂದು ಪ್ರಶ್ನೆ ಮಾಡಿದರು.

ಲಕ್ಷಾಂತರ ಮಕ್ಕಳು ಕಷ್ಟಪಟ್ಟು ಓದಿದ ಹಿಂದಿ ಭಾಷೆಯೇ ಈಗ ಬೇಡ ಅಂದರೆ ಹೇಗೆ? ಇದರ ಹಿಂದೆ ಇರುವ ಶಕ್ತಿಗಳು ಯಾವುದು? ಹೈಕಮಾಂಡ್ ಮೆಚ್ಚಿಸುವುದಕ್ಕಾಗಿ ಶಿಕ್ಷಣ ತಜ್ಞರು, ಪೋಷಕರು, ಮಕ್ಕಳ ಜೊತೆ ಸೌಜನ್ಯಕ್ಕಾದರೂ ಚರ್ಚೆ ನಡೆಸದೆ ಈ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ. ಶಿಕ್ಷಣದಲ್ಲೂ ಕಾಂಗ್ರೆಸ್ ರಾಜಕಾರಣ ಮಾಡಲು ಹೊರಟಿದೆ ಎಂದು ಆರೋಪಿಸಿದರು. ಶೈಕ್ಷಣಿಕವಾಗಿ ಸ್ಕೋರ್ ಮಾಡಲು ಅವಕಾಶ ನೀಡುತ್ತಿದ್ದ ಭಾಷೆ ಇಲ್ಲವಾಗಿದೆ. ಒಂದು ವರ್ಷದ ಕಾಲ ಮಕ್ಕಳು ಓದಿದ ಭಾಷೆಗೆ ಬೆಲೆ ಇಲ್ಲವೇ? ಗಾಂಧಿ ಹೆಸರು ಹೇಳುವ ನೀವು ಈಗ ಒಇ ವಿಚಾರದ ಬಗ್ಗೆ ಯಾವ ಸ್ಪಷ್ಟೀಕರಣ ಕೊಡುತ್ತೀರಾ? ಎಂದು ಕಾಂಗ್ರೆಸ್ ನಾಯಕರನ್ನು ಅಶೋಕ್ ತರಾಟೆಗೆ ತೆಗೆದುಕೊಂಡಿದ್ದಾರೆ.

## ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ 'ಭಗಿನಿ' ಸನ್ಮಾನ

• ಉದಯವಾಹಿನಿ ಬೆಂಗಳೂರು

ಮಹಿಳೆಯರು ಹುಟ್ಟಿನಿಂದಲೇ ಅಸ್ಮಿತೆ ಹೊಂದಿರುವ ಕಾರಣ, ಪ್ರತಿ ಮಹಿಳೆಯ ಬದುಕೂ ವಿಶೇಷವೇ, ಅವರ ಹೋರಾಟ-ಸಾಧನೆಗಳನ್ನು ಕೇವಲ ಮಹಿಳಾ ದಿನದಂದು ಮಾತ್ರ ಗುರುತಿಸದೆ, ಅನುದಿನವೂ ಮಹಿಳಾ ದಿನವಾಗಬೇಕು, ಆಕೆಯ ಕಾರ್ಯ ವೈಖರಿಯನ್ನು ಗುರುತಿಸುವ ಕೆಲಸ ಅವಶ್ಯವಾಗಿ ಆಗಬೇಕು' ಎಂದು ಲೇಖಕಿ- ರಂಗಕರ್ಮಿ ಶ್ರೀಮತಿ ವೈ.ಕೆ.ಸಂಧ್ಯಾ ಶರ್ಮ ಅಭಿಪ್ರಾಯಪಟ್ಟರು. ಅವರು ನಿನ್ನೆ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ 'ಆರೋಹಣ' ಸಂಸ್ಥೆ ಮಹಿಳಾ ದಿನದ ಪ್ರಯುಕ್ತ ಹಮ್ಮಿಕೊಂಡಿದ್ದ 'ಭಗಿನಿ' ಸಾಧನೆ ಕಾರ್ಯಕ್ರಮದಲ್ಲಿ ನಡೆದ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಸಂಸ್ಥೆಯ ಸ್ಥಾಪಕ ನಿರ್ದೇಶಕ ಶ್ರೀ ಸುಧೀಂದ್ರ, ಸಾಧಕ ಮಹಿಳೆಯರನ್ನು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿದರು.




ಉದಯವಾಹಿನಿ ಚಿತ್ರ

ಉದ್ಘಾಟನೆಯನ್ನು ಹಿರಿಯ ಪತ್ರಕರ್ತೆ ಡಾ. ಆರ್ ಪೂರ್ಣಿಮಾ ನೆರವೇರಿಸಿ ಸ್ಫೂರ್ತಿದಾಯಕವಾಗಿ ಮಾತನಾಡಿದರು. ಅತಿಥಿಯಾಗಿ ಕೇಂದ್ರ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಡೈರೆಕ್ಟರ್ ಜನರಲ್ ಆಗಿದ್ದ ಡಾ. ಸಂಧ್ಯಾ ಕೃಷ್ಣಮೂರ್ತಿ ಆಗಮಿಸಿ ತಮ್ಮ ಉದ್ಯೋಗ ಬದುಕಿನ ಹಲವಾರು ಸವಾಲಿನ ಸಂದರ್ಭಗಳು ಮತ್ತು ಅನುಭವವನ್ನು ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ- ಕಂಪೆನಿ ಸೆಕ್ರೆಟರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಎಸ್. ಸಿ ಶಾರದಾ, ಖ್ಯಾತ ಲೇಖಕಿ, ರಂಗಕರ್ಮಿ, ಅಂಕಣಕಾರ್ತಿ ಮತ್ತು ನೃತ್ಯ - ನಾಟಕಗಳ ವಿಮರ್ಶಕಿಯಾಗಿರುವ ಲಿಪಿಪ್ರಾಜ್ಞೆ ಶ್ರೀಮತಿ ವೈ.ಕೆ. ಸಂಧ್ಯಾ ಶರ್ಮ ಮತ್ತು ಮೈಸೂರಿನ ವೀರಶೈವ ರುದ್ರಭೂಮಿಯಲ್ಲಿ ಕಾಯಕಯೋಗಿಯಾಗಿರುವ ಶ್ರೀಮತಿ ನೀಲಮ್ಮ ಅವರನ್ನು ಅವರ ಕಾರ್ಯಕ್ಷಮತೆಗಾಗಿ ಸನ್ಮಾನಿಸಲಾಯಿತು.

ಗಾಯಕ ಮತ್ತು ನಿರೂಪಕರಾಗಿರುವ ಖ್ಯಾತ ಕಲಾವಿದ ಸುಧೀಂದ್ರ, ಶ್ವೇತಾ ಪ್ರಭು ಅವರಿಂದ ಸುಶ್ರಾವ್ಯ ಗಾಯನ, ಎಸ್.ಎ.ಎನ್. ಮೇಘನಾ ಅವರಿಂದ ಭರತನಾಟ್ಯ ಹಾಗೂ ನೃತ್ಯ ದರ್ಪಣ್ ಅಕಾಡೆಮಿಯ ಗುರು ವಿದುಷಿ . ವೀಣಾ ಭಟ್ ಅವರ ಶಿಷ್ಯೆಯರಿಂದ ಕಥಕ್ ನೃತ್ಯ ಕಾರ್ಯಕ್ರಮ ನಡೆದು ಪ್ರೇಕ್ಷಕರನ್ನು ರಂಜಿಸಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ನಾಗಶ್ರೀ ಅಜಯ್ ಸ್ಫುಟವಾಗಿ ನಡೆಸಿಕೊಟ್ಟರು. ಅಂತ್ಯದಲ್ಲಿ 'ಆರೋಹಣಾ' ಸಂಸ್ಥೆ ವತಿಯಿಂದ ಹಲವು ಆಯ್ದ ವಿದ್ಯಾರ್ಥಿನಿಯರಿಗೆ ಪುಸ್ತಕ ಸಾಮಗ್ರಿ ಮತ್ತು ಬ್ಯಾಗುಗಳನ್ನು ವಿತರಿಸಲಾಯಿತು.

## ಮಹಿಳಾ ಸ್ವಾತಂತ್ರ್ಯ ಎಂದರೆ ಸ್ವೇಚಾಚಾರವಲ್ಲ: ಡಾ: ಗೀತಾ ರಾಮಾನುಜಂ

• ಉದಯವಾಹಿನಿ, ಕೆಂಗೇರಿ ಉಪನಗರ

ತಂದೆ ತಾಯಂದಿರು ಹೆಣ್ಣು ಮಕ್ಕಳಿಗೆ ಸ್ವೇಚಚಾರವನ್ನು ಕಲಿಸಬೇಡಿ, ಶಿಕ್ಷಕರು ರಾಜಕಾರಣಿಗಳಾಗಬೇಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ, ನಿಮ್ಮ ಬೆನ್ನನ್ನು ನೀವೆ ತಟ್ಟಿಕೊಳ್ಳಬೇಡಿ ಎಂದು ಖ್ಯಾತ ಶಿಕ್ಷಣ ತಜ್ಞೆ ಸಾಹಿತಿ ಡಾ. ಗೀತಾ ರಾಮನುಜಂ ಹೇಳಿದರು. ಸಂಸ್ಕೃತಿಗೆ ಹೆಚ್ಚು ಆದ್ಯತೆ ನೀಡಿದಾಗ ಮಾತ್ರ ಸಾಧ್ಯ, ಕವಿಗೋಷ್ಠಿ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುತ್ತದೆ ಎಂದು ಅವರು ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ಕೆಂಗೇರಿ ಉಪನಗರದ ಕಾಳಿಕಾಂಭ ದೇವಸ್ಥಾನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಿಲ್ಲಾ ಮಹಿಳಾ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಹಿರಿಮೆಯನ್ನು ಪಸರಿಸಲು ಮಹಿಳೆಯರಿಗೆ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.




ಉದಯವಾಹಿನಿ ಚಿತ್ರ

ಯಶವಂತಪುರ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್. ಎಸ್. ಸುಧೀಂದ್ರ ಕುಮಾರ್ ಮಾತನಾಡಿ ಕನ್ನಡ ನಾಡಿನಲ್ಲಿ ಕನ್ನಡಿಗರು ಆರೋಗ್ಯವಾಗಿ ಇರಬೇಕಾದರೆ ಕನ್ನಡ ಭಾಷೆ ನಾಡು ನುಡಿ, ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗೆ ಹೆಚ್ಚು ಆದ್ಯತೆ ನೀಡಿದಾಗ ಮಾತ್ರ ಸಾಧ್ಯ ಎಂದು ತಿಳಿಸಿದರು. ಕನ್ನಡದ ಕಂಪು ಪಸರಿಸಲು ಗಲ್ಲಿ ಗಲ್ಲಿಗಳಲ್ಲಿ ಕನ್ನಡದ ಹಬ್ಬವನ್ನು ಆಚರಣೆ ಮಾಡಿದಾಗ ಕನ್ನಡ ಉಳಿಯಲು ಬೆಳೆಯಲು ಸಾಧ್ಯ ಎಂದರು. ಮಹಿಳೆಯರಿಗೆ ಉತ್ತಮ ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಸಮಾಜದ ಸಾಮರಸ್ಯ, ಸದೃಢತೆಗೆ ಮಹಿಳೆಯರ ಪಾತ್ರ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ. ಪ್ರಕಾಶ್ ಮೂರ್ತಿ ಮಾತಾನಾಡಿದರು. ಸಾಹಿತಿ ಅಂಕಣಕಾರರಾದ ಬಿ.ಎಸ್. ಪಾರಿಜಾತ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿ ನಿಜವಾಗಿಯೂ ಪ್ರಸ್ತುತ ಸನ್ನಿವೇಶದಲ್ಲಿ ಶೋಷಣೆಗೆ ಒಳಗಾಗುತ್ತಿರುವವರು ಪುರುಷರು ಅದನ್ನು ವ್ಯಕ್ತಪಡಿಸಲಾಗದ ಸ್ಥಿತಿ ಅವರದ್ದು ಎಂದು ಹೇಳಿ ಎಲ್ಲದಕ್ಕೂ ಮೂಲ ಕಾರಣ ಮಹಿಳೆಯೇ, ಮಗಳಾಗಿ ಸೊಸೆಯಾಗಿ ಅತ್ತೆ ಯಾಗುವ ಅವಳ ಪರಿಸ್ಥಿತಿಗೆ ಅನುಗುಣವಾಗಿ ಸಾಮರಸ್ಯ ಉಳಿಸಿಕೊಂಡರೆ ಎಲ್ಲವೂ ಸುಸೂತ್ರವಾಗುತ್ತದೆ ಎಂದರು. ಅನಾದಿಕಾಲದಿಂದಲೂ ಈ ಕಾಲದವರೆಗೆ ಮಹಿಳೆಯ ಸಾಧನೆ ಅಪಾರವಾಗಿದೆ ಸಮಾಜದ ಆರೋಗ್ಯಕರ ಬೆಳವಣಿಗೆಗೆ ಮಹಿಳಾ ಪಾತ್ರ ಪ್ರಮುಖವಾದದ್ದು ಎಂದು ವಿಶ್ಲೇಷಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಆಯುರ್ವೇದ ವೈದ್ಯರಾದ ಡಾ. ಪ್ರತಿಭಾ ಭಟ್, ಭುವನೇಶ್ವರಿ ಮಹಿಳಾ ಮಂಡಳಿಯ ಯಶೋಧ ರಾಮಚಂದ್ರ, ಬಹುಮುಖ ಪ್ರತಿಭೆ ಹಾಗೂ ಶಿಕ್ಷಕಿ ಡಾ. ಇಂದಿರಾ ಶರಣ ಜಮ್ಮಲದಿನ್ನಿ, ಶಿಕ್ಷಣ ತಜ್ಞೆ ಡಾ,ಸುಕನ್ಯಾ ಹೆಗಡೆ ಭರತನಾಟ್ಯ ಶಾಲೆಯ ವಿದುಷಿ ವಿಜಯಲಕ್ಷ್ಮಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು. ಯಶವಂತಪುರ ವಿಧಾನಸಭಾ ಕ್ಷೇತ್ರ ಕಸಾಪ ಅಧ್ಯಕ್ಷ ಎಚ್.ಎಸ್.ಸುಧೀಂದ್ರ ಕುಮಾರ್, ಕಸಾಪ ಗೌರವ ಕಾರ್ಯದರ್ಶಿ ಶಿವಸ್ವಾಮಿ, ಗೌರವ ಕೋಶಾಧ್ಯಕ್ಷ ವಿವಿ ಸತ್ಯನಾರಾಯಣ ಸೇರಿದಂತೆ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು. ಇಂಜಿನಿಯರಿಂಗ್ ವಿದ್ಯಾರ್ಥಿ ನಾಡಗೀತೆ ಪ್ರಸ್ತುತಪಡಿಸಿದರು ಸಾಹಿತಿ ಆಶಾ ಹೆಗಡೆ ನಿರೂಪಿಸಿದರು. ಜಿಲ್ಲೆಯಿಂದ ಅನೇಕ ಮಹಿಳಾ ಕವಿಗಳು ಭಾಗವಹಿಸಿ ಕವನ ವಾಚನ ಮಾಡಿದರು.

# ಜಮೀರ್ ಸೈಡ್ ಲೈನ್ ಬಗ್ಗೆ ಕೈ ಪಾಳಯದಲ್ಲಿ ಬಿಸಿ ಬಿಸಿ ಚರ್ಚೆ

## ದಾವಣಗೆರೆ ದಕ್ಷಿಣ: ಪ್ರಚಾರಕ್ಕೆ ಅಗತ್ಯವಿಲ್ಲ, ಸಂಧಾನದಲ್ಲೂ ಪಾತ್ರವಿಲ್ಲ

• ಉದಯವಾಹಿನಿ, ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಇದೀಗ ರಾಜ್ಯದ ಗಮನ ಸೆಳೆಯುತ್ತಿದೆ. ಮುಸ್ಲಿಂ ಅಭ್ಯರ್ಥಿಗಳ ಬಂಡಾಯ ಹಾಗೂ ಅದನ್ನು ಶಮನ ಮಾಡುವ ನಿಟ್ಟಿನಲ್ಲಿ ನಡೆದ ಪ್ರಯತ್ನದಲ್ಲಿ ಕೈ ಪಾಳಯದ ಆಂತರಿಕ ಭಿನ್ನಾಭಿಪ್ರಾಯವೂ ಬಹಿರಂಗಗೊಳ್ಳುತ್ತಿದೆ. ಅದರಲ್ಲೂ ಸಚಿವ ಜಮೀರ್ ಅಹ್ಮದ್ ಖಾನ್ ಅವರನ್ನು ದಾವಣಗೆರೆ ಬೆಳವಣಿಗೆಗೆ ಸಂಬಂಧಿಸಿದಂತೆ ಉದ್ದೇಶಪೂರ್ವಕವಾಗಿ ಸೈಡ್ ಲೈನ್ ಮಾಡಲಾಗುತ್ತಿದೆ ಎಂಬ ಆರೋಪವೂ ಕಾಂಗ್ರೆಸ್ ಪಾಳಯದಲ್ಲಿ ಬಿಸಿ ಬಿಸಿ ಚರ್ಚೆಗೆ ಎಡೆಮಾಡಿಕೊಟ್ಟಿದೆ.

ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಂ ಮತದಾರರು ದೊಡ್ಡ ಪ್ರಮಾಣದಲ್ಲಿ ಇದ್ದಾರೆ. ಹಾಗಾಗಿ ಈ ಕ್ಷೇತ್ರದಲ್ಲಿ ಮುಸ್ಲಿಮರಿಗೆ ಟಿಕೆಟ್ ಕೊಡಬೇಕು ಎಂಬುವುದು ಬೇಡಿಕೆಯಾಗಿತ್ತು. ಈ ಬೇಡಿಕೆ ಇಟ್ಟ ಮುಸ್ಲಿಂ ನಾಯಕರ ಪೈಕಿ ಜಮೀರ್ ಅಹ್ಮದ್‌ಖಾನ್ ಮುಂಚೂಣಿಯಲ್ಲಿದ್ದರು. ಕಾಂಗ್ರೆಸ್ ಮುಸ್ಲಿಂ ನಾಯಕರ ಒಂದು ಬಣ ಇದಕ್ಕೆ ಬೆಂಬಲ ನೀಡಿತ್ತು. ಆದರೆ, ಸಚಿವ ಎಸ್ ಎಸ್ ಮಲ್ಲಿಕಾರ್ಜುನ್ ಅವರು ತಮ್ಮ ಮಗನಿಗೆ ಟಿಕೆಟ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದರು. ಇದು ಜಮೀರ್‌ಗೆ ಆದ ಆರಂಭಿಕ ಹಿನ್ನಡೆಯಾಗಿತ್ತು.

ಈ ನಡುವೆ ಬಂಡಾಯ ಅಭ್ಯರ್ಥಿಯಾಗಿ ಸಾದಿಕ್ ಪೈಲ್ವಾನ್ ಅಖಾಡಕ್ಕಿಳಿದಿದ್ದರು. ಸಾದಿಕ್ ಪೈಲ್ವಾನ್ ಹಾಗೂ ಇತರರ ಬಂಡಾಯ ಕ್ಷೇತ್ರದಲ್ಲಿ ಸದ್ದು ಮಾಡಿತ್ತು. ಜಮೀರ್ ಅವರ ಸೂಚನೆಯಂತೆ ಸಾದಿಕ್ ಅಖಾಡಕ್ಕಿಳಿದಿದ್ದಾರೆ ಎಂಬ ಚರ್ಚೆಗಳು ರಾಜಕೀಯ ಪಡಸಾಲೆಯಲ್ಲಿ ನಡೆಯುತ್ತಿದ್ದವು. ಆದರೆ ಆ ಬಂಡಾಯವನ್ನು ಶಮನ ಮಾಡುವ ನಿಟ್ಟಿನಲ್ಲಿ ಕಾಂಗ್ರೆಸ್ ನಾಯಕತ್ವ ಯಶಸ್ವಿಯಾಗಿದೆ.ಆದರೆ ಇದರಲ್ಲೂ ಜಮೀರ್ ಪಾತ್ರ ಇರಲಿಲ್ಲ ಎಂಬುವುದು ವಿಶೇಷವಾಗಿದೆ.



ಉದಯವಾಹಿನಿ ಚಿತ್ರ

**ಕಾಂಗ್ರೆಸ್ ನಾಯಕತ್ವ ಯಶಸ್ವಿ**

**ಹೊಣೆಗಾರಿಕೆ ಶಿಫ್ಟ್ ಉದ್ದೇಶ ಏನು?:** ಸಾದಿಕ್ ಪೈಲ್ವಾನ್ ಬಂಡಾಯ ಶಮನ ಮಾಡುವುದು ಕಾಂಗ್ರೆಸ್‌ಗೆ ಅನಿವಾರ್ಯ ಆಗಿತ್ತು. ಹಾಗಾಗಿ ಜಮೀರ್ ಮಧ್ಯಪ್ರವೇಶ ಮಾಡುತ್ತಾರೆ ಎಂದೇ ನಂಬಲಾಗಿತ್ತು. ಆದರೆ ಜಮೀರ್ ಅಂತರ ಕಾಯ್ದುಕೊಂಡಿದ್ದರು.

**ಜಮೀರ್ ನಡೆ ಏನು?**

**ಈ ಎಲ್ಲಾ ಬೆಳವಣಿಗೆಗಳ ನಡುವೆ ಸಚಿವ ಜಮೀರ್ ಅಹ್ಮದ್ ಖಾನ್ ಏನು ನಡೆಯನ್ನು ಅನುಸರಿಸುತ್ತಾರೆ? ಎಂಬುವುದು ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ. ಸಮರ್ಥ್ ಪರವಾಗಿ ಪ್ರಚಾರಕ್ಕೆ ಹೋಗುತ್ತಾರಾ? ಅಥವಾ ಅಂತರ ಕಾಯ್ದುಕೊಳ್ಳುತ್ತಾರಾ? ಎಂಬುವುದು ಕುತೂಹಲ ಕೆರಳಿಸಿದೆ. ಇದಕ್ಕೆ ಕಾಲವೇ ಉತ್ತರ ನೀಡಲಿದೆ. ಈ ನಡುಗೆ ಎಸ್ ಎಸ್ ಮಲ್ಲಿಕಾರ್ಜುನ್ ಹಾಗೂ ಜಮೀರ್ ನಡುವೆ ಸಂಧಾನಕ್ಕೆ ರಾಜ್ಯ ನಾಯಕರು ಪ್ರಯತ್ನ ನಡೆಸುತ್ತಾರಾ? ಎಂಬ ಕುತೂಹಲವೂ ಇದೆ.**

ಜಮೀರ್ ಕುರಿತಾಗಿ ಎಸ್ ಎಸ್ ಮಲ್ಲಿಕಾರ್ಜುನ ಆಡಿರುವ ಮಾತುಗಳೇ ಇದಕ್ಕೆ ಕಾರಣ ಎಂಬ ಚರ್ಚೆಗಳು ನಡೆಯುತ್ತಿದ್ದವು.

ಆದರೆ ಬಂಡಾಯ ಶಮನ ಮಾಡುವ ಹೊಣೆಗಾರಿಕೆ ವಿಧಾನಪರಿಷತ್ ಸದಸ್ಯ ಸಲೀಂ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ಅವರಿಗೆ ನೀಡಲಾಯಿತು. ಈ ಇಬ್ಬರು ನಾಯಕರು ದಾವಣಗೆರೆಗೆ ತೆರಳಿ ಮಾತುಕತೆ ನಡೆಸಿದ್ದರು. ಬಳಿಕ ಸಾದಿಕ್ ಪೈಲ್ವಾನ್ ಅವರನ್ನು ಸಿಎಂ ಸಿದ್ದರಾಮಯ್ಯ ಅವರ ಬಳಿ ಕರೆದುಕೊಂಡು ಬಂದು ಸಂಧಾನ ನಡೆಸುವಲ್ಲಿ ಸಫಲರಾದರು. ಸಂಧಾನವೂ ಯಶಸ್ವಿಯಾಗಿದೆ ಸಾದಿಕ್ ಚುನಾವಣಾ ಕಣದಿಂದ ನಿವೃತ್ತರಾಗಿದ್ದಾರೆ. ಎಸ್.ಎಸ್ ಮಲ್ಲಿಕಾರ್ಜುನ್ ನಡೆಗೆ ಸಚಿವ ಜಮೀರ್ ಅಹಮ್ಮದ್ ಕೆಂಡಾಮಂಡಲರಾಗಿದ್ದಾರೆ ಎಂಬ ಮಾಹಿತಿ ಇದೆ. ಸಿಎಂ ಸಿದ್ದರಾಮಯ್ಯ ಅವರ ಮುಂದೆ ಜಮೀರ್ ಅಹಮ್ಮದ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಮುಂದೆ ಸ್ವಾಭಿಮಾನದ ಪ್ರಶ್ನೆ ಎತ್ತಿರುವ ಸಚಿವ ಜಮೀರ್ ಅಹಮ್ಮದ್, ಸಚಿವರ ವರ್ತನೆ ಸರಿಯಲ್ಲ ಎಂದು ಬೇಸರ ತೋಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಏ.3ರಿಂದ ಸಮರ್ಥ್ ಪರವಾಗಿ ಚುನಾವಣಾ ಪ್ರಚಾರಕ್ಕೆ ಬರಲು ಜಮೀರ್ ಮುಂದಾಗಿದ್ದರು. ಆದರೆ ಜಮೀರ್ ಬರದೇ ಇದ್ದರೂ ಪರವಾಗಿಲ್ಲ ಎಂದು ಹೇಳಿರುವ ಮಲ್ಲಿಕಾರ್ಜುನ್ ಪರೋಕ್ಷವಾಗಿ ಅವರ ವಿರುದ್ಧ ಅಸಮಧಾನ ಹೊರ ಹಾಕಿದ್ದಾರೆ. ಚುನಾವಣೆ ಘೋಷಣೆಗೂ ಮೊದಲೇ ಜಮೀರ್‌ಗೂ ದಾವಣಗೆರೆಗೂ ಏನು ಸಂಬಂಧ ಎಂದು ಏಕವಚನದಲ್ಲೇ ಮಲ್ಲಿಕಾರ್ಜುನ್ ಕಿಡಿಕಾರಿದ್ದರು. ಮಲ್ಲಿಕಾರ್ಜುನ್ ಮಾತುಗಳಿಂದ ತೀವ್ರ ಅಸಮಾಧಾನಗೊಂಡಿರುವ ಜಮೀರ್ ಅಹಮ್ಮದ್, ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಮುಂದೆ ನೇರವಾಗಿಯೇ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ನಾನೂ ನಿಮ್ಮ ಜೊತೆಗೆ ಚುನಾವಣಾ ಪ್ರಚಾರಕ್ಕೆ ಬರುತ್ತಿದ್ದೆ. ಆದರೆ ಮಲ್ಲಿಕಾರ್ಜುನ್ ಮಾತುಗಳಿಂದ ಸ್ವಾಭಿಮಾನದ ಪ್ರಶ್ನೆ ಎದುರಾಗಿದೆ. ಅವರು ನನ್ನ ಬಗ್ಗೆ ಹೀಗೆ ಮಾತನ್ನಾಡಿದ್ರೆ ಪ್ರಚಾರಕ್ಕೆ ಬರೋರಾದ್ರೂ ಹೇಗೆ ? ನಮಗೂ ಸ್ವಾಭಿಮಾನ ಇಲ್ಲವಾ ಎಂದು ಸಿಎಂ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

**ಎಸ್‌ಎಸ್ ಎಂ ಮಾತಿಗೆ ಜಮೀರ್ ಕೆಂಡ**

**ಈ ಬೆಳವಣಿಗೆ ನಡುವೆ ಎಸ್ ಎಸ್ ಮಲ್ಲಿಕಾರ್ಜುನ್, ಜಮೀರ್ ಖಾನ್ ನಡುವಿನ ಭಿನ್ನಾಭಿಪ್ರಾಯ ಬಹಿರಂಗಗೊಂಡಿದೆ. ಜಮೀರ್ ಪ್ರಚಾರಕ್ಕೆ ಬರುತ್ತಾರಾ? ಎಂಬ ಪ್ರಶ್ನೆಗೆ ಮಲ್ಲಿಕಾರ್ಜುನ ಕೊಟ್ಟ ಉತ್ತರ ಚರ್ಚೆಯನ್ನು ಹುಟ್ಟುಹಾಕಿದೆ. ''ಜಮೀರ್‌ರನ್ನು ಪ್ರಚಾರಕ್ಕೆ ಬರುವಂತೆ ಆಹ್ವಾನಿಸಿದ್ದೇನೆ. ಇದೀಗ ಅವರು ಕೇರಳ ಚುನಾವಣಾ ಪ್ರಚಾರಕ್ಕೆ ಹೋಗಿದ್ದಾರೆ. ಚುನಾವಣಾ ಪ್ರಚಾರಕ್ಕೆ ಬರದಿದ್ದರೂ ಒಳ್ಳೆಯದೇ'' ಎಂದಿದ್ದರು.**

# ಚಿಕ್ಕತುಪ್ಪೂರಿನಲ್ಲಿ ಉಚಿತ ನೇತ್ರ ತಪಾಸಣೆ ಶಿಬಿರ : ಕನ್ನಡಕ ವಿತರಣೆ

• ಉದಯವಾಹಿನಿ, ಗುಂಡ್ಲುಪೇಟೆ

ಹೆಲ್ಪ್ ಏಜ್ ಇಂಡಿಯಾ, ಶ್ರೀ ಯೋಗೇಶ್ವರಿ ಜಾತ್ರಾ ಮಹೋತ್ಸವ ಸಮಿತಿ, ಸ್ನೇಹ ಬಳಗ ಚಿಕ್ಕತುಪ್ಪೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಉಚಿತ ಕಣ್ಣಿನ ತಪಾಸಣೆ ಹಾಗೂ ಕನ್ನಡಕ ವಿತರಣಾ ಕಾರ್ಯಕ್ರಮವನ್ನ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಸಹಾಯಕ ಅಭಿಯಂತರ ನಿಂಗರಾಜುರವರು ಗ್ರಾಮೀಣ ಪ್ರದೇಶದ ವೃದ್ಧರು ದೃಷ್ಟಿ ದೋಷದ ಹಿನ್ನಲೆ ಹಲವು ಸಮಸ್ಯೆಗಳನ್ನ ಎದುರಿಸುತ್ತಿದ್ದಾರೆ. ವಯಸ್ಕರಿಗೆ ವೃದ್ಧರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಶ್ರೀ ಯೋಗೇಶ್ವರಿ ಜಾತ್ರಾ ಮಹೋತ್ಸವ ಸಮಿತಿ ಹಾಗೂ ಸ್ನೇಹ ಬಳಗದ ಅನೇಕ ಸ್ನೇಹಿತರ ನೆರವಿನಿಂದ ಈ ಕಾರ್ಯಕ್ರಮ ಆಯೋಜಿಸಿ ಗ್ರಾಮೀಣ ಜನರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಮಹತ್ಕಾರ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ದಲಿತ ಸಾಹಿತ್ಯ ಪರಿಷತ್ತು (ರಿ) ತಾಲ್ಲೂಕು ಘಟಕದ ಅಧ್ಯಕ್ಷ ಯೋಗೇಶ ಮಾತನಾಡಿ ಕಣ್ಣಿನ ತಪಾಸಣೆ ಎಂದರೆ ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ವಿವಿಧ ಪರೀಕ್ಷೆ ಮೂಲಕ ಕಣ್ಣಿನ ಆರೋಗ್ಯವನ್ನು ಪತ್ತೆಹಚ್ಚುವ ವಿಧಾನವಾಗಿದೆ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಯಜಮಾನರಾದ ರಾಮನಾಯಕ, ಹೆಲ್ಪ್ ಏಜ್ ಇಂಡಿಯಾ ಗುಂಡ್ಲುಪೇಟೆ ತಾಲ್ಲೂಕು ಘಟಕದ ರಾಜಣ್ಣ, ವೈದ್ಯಕೀಯ ಅಧಿಕಾರಿ ಪ್ರಭುಸ್ವಾಮಿ, ಕಾಂಗ್ರೇಸ್ ಮುಖಂಡ ರಂಗಸ್ವಾಮಿ, ಉದ್ಯಮಿ ಮಾದೇಶ, ಬಿಜೆಪಿ ಯುವ ಮುಖಂಡ ಮಂಜುನಾಥ, ಬನ್ನಿತಾಳಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಪಿಣ್ಣಮ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಚಾಮರಾಜನಗರದಲ್ಲಿ ಜಿಲ್ಲೆಯಲ್ಲಿ ಕಾಡ್ಗಿಚ್ಚು ಭೀತಿ ; ಅರಣ್ಯ ಇಲಾಖೆಗೆ ಬೇಸಿಗೆ ಸವಾಲು

# ಅರಣ್ಯ ಇಲಾಖೆ ಎಚ್ಚರದಿಂದ ಇರುವುದು ಅಗತ್ಯ

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯ ಅರಣ್ಯಗಳಲ್ಲಿ ಇದೀಗ ಬೆಂಕಿಯ ಭೀತಿ ಆವರಿಸಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗೆ ಕಿಡಿಗೇಡಿಗಳನ್ನು ಕಾಯುವುದೇ ಸವಾಲಾಗಿ ಪರಿಣಮಿಸಿದೆ. ಬಿರು ಬಿಸಿಲಿಗೆ ಒಣಗಿ ನಿಂತಿರುವ ಅರಣ್ಯವನ್ನು ಬೆಂಕಿಯಿಂದ ರಕ್ಷಣೆ ಮಾಡುವುದು ಸುಲಭದ ಮಾತಲ್ಲ. ಅದರಲ್ಲೂ ಯಾವುದೋ ಮೂಲೆಯಲ್ಲಿ ತಿಳಿಗೇಡಿಗಳು ಹಚ್ಚುವ ಬೆಂಕಿಯನ್ನು ತಣಿಸುವುದು ನಿಜಕ್ಕೂ ಸವಾಲೇ ಸರಿ.

**ನಿಜಕ್ಕೂ ಸವಾಲೇ ಸರಿ**

ಜಿಲ್ಲೆಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನ , ಬಿಆರ್‌ಟಿ ಹುಲಿಧಾಮ, ಮಲೆ ಮಹದೇಶ್ವರಬೆಟ್ಟ ಹಾಗೂ ಕಾವೇರಿ ವನ್ಯಧಾಮಗಳು ಸುತ್ತುವರಿದಿವೆ. ಪೂರ್ವ, ಪಶ್ಚಿಮ ಘಟ್ಟಗಳನ್ನು ಸಂದಿಸುವ ಈ ಅರಣ್ಯಗಳ ಸೊಬಗು, ವನ್ಯಜೀವಿ ಸಂಪತ್ತು ಜಿಲ್ಲೆಗೆ ವರದಾನ. ಆದರೆ, ಬೇಸಿಗೆ ಬಂತೆಂದರೆ ಆತಂಕವೂ ತಪ್ಪಿದ್ದಲ್ಲ. ಯಾವುದೋ ಸಿಟ್ಟು, ಸೆಡೆವು, ಸೇಡಿಗಾಗಿ ಕೆಲವರು ಹಾಕುವ ಬೆಂಕಿ ಒಮ್ಮೊಮ್ಮೆ ಅರಣ್ಯ ಸಿಬ್ಬಂದಿಯ ನಿಯಂತ್ರಣಕ್ಕೆ ಸಿಲುಕುತ್ತದೆ. ಆದರೆ, ಕೆಲವೊಮ್ಮೆ ಇಡೀ ಅರಣ್ಯವನ್ನೇ ಆಹುತಿ ತೆಗೆದುಕೊಳ್ಳುತ್ತದೆ. ಇಂಥ ಬೆಂಕಿಯಿಂದ ಆಗುವ ನಷ್ಟವನ್ನು ಅಳೆಯುವುದು ಹಾಗೂ ಮತ್ತೆ ಅರಣ್ಯವನ್ನು ಆ ಸ್ಥಿತಿಗೆ ತರುವುದು ಸುಲಭದ ವಿಚಾರವಲ್ಲ. ಹಾಗಾಗಿ ಬೇಸಿಗೆಯಲ್ಲಿ ಅರಣ್ಯ ಇಲಾಖೆ ಎಚ್ಚರದಿಂದ ಇರುವುದು ಅಗತ್ಯ.

**ಬೈಲೂರಿನಲ್ಲಿ ನಷ್ಟ:** ಬಿಆರ್‌ಟಿ ವನ್ಯಧಾಮದ ಬೈಲೂರು ಪ್ರದೇಶದ ಕೆಲವೆಡೆ ನಾಲ್ಕು ದಿನಗಳ ಹಿಂದೆಯಷ್ಟೇ ಕ್ಷಣಾರ್ಧದಲ್ಲಿ ಬೆಂಕಿ ಆವರಿಸಿತ್ತು. ಆದರೆ, ಅರಣ್ಯ ಸಿಬ್ಬಂದಿ ಕೂಡಲೇ ಕಾರ್ಯಪ್ರವೃತ್ತರಾಗಿ, ಅಗ್ನಿಶಾಮಕ ದಳದ ಸಹಕಾರದೊಂದಿಗೆ ಕೆಲ ಗಂಟೆಗಳಲ್ಲೇ ಬೆಂಕಿಯನ್ನು ನಿಯಂತ್ರಣಕ್ಕೆ ತಂದಿತು.


ಉದಯವಾಹಿನಿ ಚಿತ್ರ

### ಹೆಚ್ಚುವರಿ ಸಿಬ್ಬಂದಿ ನೇಮಕ

**ಅರಣ್ಯ ಇಲಾಖೆಯು ಬೇಸಿಗೆ ಆರಂಭವಾಗುತ್ತಿದ್ದಂತೆ ತನ್ನ ಅರಣ್ಯದ ವ್ಯಾಪ್ತಿಗೆ ಅನುಗುಣವಾಗಿ ಹೆಚ್ಚುವರಿ ಸಿಬ್ಬಂದಿಯನ್ನು ಹೊರ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುತ್ತದೆ. ಬೆಂಕಿ ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಬೆಂಕಿ ರೇಖೆ ಮಾಡಿಸುವುದು ಹಾಗೂ ಎಲ್ಲಾದರೂ ಬೆಂಕಿ ಕಾಣಿಸಿಕೊಂಡರೆ ತಕ್ಷಣ ಆ ಪ್ರದೇಶದಲ್ಲಿ ಬೆಂಕಿಯನ್ನು ನಿಯಂತ್ರಿಸುವುದು ಈ ಸಿಬ್ಬಂದಿಯ ಕಾಯಕ. ಆಯಾ ಅರಣ್ಯಗಳ ಬಗ್ಗೆ ಮಾಹಿತಿ ಇರುವ ಸ್ಥಳೀಯರನ್ನೇ ಈ ಕಾರ್ಯಕ್ಕೆ ನೇಮಕ ಮಾಡಿಕೊಳ್ಳುವುದು ಸಹ ಈ ಹಿಂದಿನಿಂದಲೂ ನಡೆದಿದೆ. ಹೀಗಾಗಿ ಎಲ್ಲೇ ಬೆಂಕಿ ಹರಡಿದರೂ ಸಿಬ್ಬಂದಿ ತಕ್ಷಣ ಜಾಗೃತರಾಗುತ್ತಾರೆ.**

ಇದರಿಂದ 30ರಿಂದ 35 ಎಕರೆಯಷ್ಟು ಅರಣ್ಯಕ್ಕೆ ಮಾತ್ರ ಬೆಂಕಿ ಸೀಮಿತವಾಯಿತು.

ಸಿಬ್ಬಂದಿಯ ಶ್ರಮ ಇಲ್ಲವಾದರೆ ನೂರಾರು ಎಕರೆ ಅರಣ್ಯ ನಾಶವಾಗುವುದಿತ್ತು. ಹೀಗಾಗಿ ಎಲ್ಲಾ ಅರಣ್ಯಗಳಲ್ಲಿ ಬೇಸಿಗೆಯಲ್ಲಿ ಬೆಂಕಿಯ ತುರ್ತು ಕಾರ್ಯಗಳಿಗಾಗಿ ಹೆಚ್ಚುವರಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತದೆ ಎಂಬುದು ಗಮನಾರ್ಹ.


**ವರುಣನ ಅಭಯ ಅತ್ಯಗತ್ಯ:** ಕಾಡುಗಳಿಗೆ ಬೆಂಕಿಯಿಂದ ರಕ್ಷಣೆಗಾಗಿ ವರುಣನ ಆಗಮನ ಅತ್ಯಗತ್ಯ. ಇದೀಗ ಪೂರ್ವ ಮುಂಗಾರು ಪ್ರಾರಂಭವಾಗಿರುವುದರಿಂದ ಆಗಾಗ ಮಳೆಯಾದರೆ ಅರಣ್ಯಗಳು ನಿಟ್ಟುಸಿರು ಬಿಟ್ಟಂತೆ. ಆದರೆ, ಬಂಡೀಪುರದಲ್ಲಿಒಮ್ಮೆಯಷ್ಟೇ ಮಳೆಯಾಗಿದೆ. ಇನ್ನುಳಿದ ಕಡೆಗಳಲ್ಲಿ ಹೆಚ್ಚಿನ ಮಳೆಯಾಗಿಲ್ಲ. ಇದು ಒಂದು ಬಗೆಯಲ್ಲಿ ಬೆಂಕಿ ಹಾಗೂ ಮತ್ತೊಂದೆಡೆ ವನ್ಯಜೀವಿಗಳಿಗೆ ನೀರಿನ ಕೊರತೆಯನ್ನು ತಂದೊಡ್ಡಲಿದೆ. ಹೀಗಾಗಿ ಅರಣ್ಯ ಇಲಾಖೆಯು ವರುಣನ ಕೃಪೆಯ ನಿರೀಕ್ಷೆಯಲ್ಲಿದೆ. 1100 ಚದರ ಕಿ.ಮೀ ಸುತ್ತಳತೆಯಲ್ಲಿ ಹರಡಿರುವ ಬಂಡೀಪುರ, 625 ಚದರ ಕಿ.ಮೀ. ವ್ಯಾಪ್ತಿಯನ್ನು ಹೊಂದಿರುವ ಬಿಆರ್‌ಟಿ, 906 ಚದರ ಕಿ.ಮೀ. ವಿಸ್ತೀರ್ಣದ ಮಲೆ ಮಹದೇಶ್ವರಬೆಟ್ಟ ಅರಣ್ಯದಲ್ಲಿ ಸದ್ಯ ಬಿಸಿಲ ತಾಪ ಹೆಚ್ಚಾಗಿದೆ. ನೀರಿನ ಮೂಲಗಳಲ್ಲಿ ಹೆಚ್ಚಿನ ಜಲವಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಮಳೆ ಕೊರತೆ ಎದುರಾದರೆ ವನ್ಯಜೀವಿಗಳಿಗೂ ಕುಡಿಯುವ ನೀರಿಗೆ ಸಮಸ್ಯೆಯಾಗಬಹುದಾಗಿದೆ.

> **ಬಂಡೀಪುರ ಅಭಯಾರಣ್ಯದಲ್ಲಿ ಒಂದು ತಿಂಗಳ ಮುಂಚೆಯೇ ಫೈರ್ ವಾಚರ್‌ಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳಲಾಗಿದೆ. ಅಲ್ಲದೇ ಬೆಂಕಿ ರೇಖೆಯನ್ನು ಸಹ ಪೂರ್ಣಗೊಳಿಸಲಾಗಿದೆ. ಅಲ್ಲದೇ ಎಲ್ಲೆಡೆ ಬೆಂಕಿ ಕಾಣಿಸಿಕೊಂಡರೂ ತಕ್ಷಣ ಎಚ್ಚರಿಸುವ ಎಐ ತಂತ್ರಜ್ಞಾನವನ್ನು ಸಹ ಅಳವಡಿಸಿಕೊಳ್ಳಲಾಗಿದೆ.**
>
> **–ಪ್ರಭಾಕರನ್, ನಿರ್ದೇಶಕರು, ಬಂಡೀಪುರ ಹುಲಿ ಯೋಜನೆ**

## ಮಿನಿ ನ್ಯೂಸ್

### ಪಾದರಹಳ್ಳಿ ಗ್ರಾಮದಲ್ಲಿ ತಿಬ್ಬಾದೇವಿ ಜಾತ್ರಾ ಮಹೋತ್ಸವ

• ಉದಯವಾಹಿನಿ, ರಾಮನಗರ


ಉದಯವಾಹಿನಿ ಚಿತ್ರ

ತಾಲ್ಲೂಕಿನ ಪಾದರಹಳ್ಳಿ ಗ್ರಾಮದಲ್ಲಿ ಶ್ರೀ ತ್ರಿಪುರ ಸುಂದರಿ ತಿಬ್ಬಾದೇವಿ ಅಮ್ಮನವರ 20ನೇ ವರ್ಷದ ಜಾತ್ರಾ ಮಹೋತ್ಸವ, ದೇವರುಗಳ ಉತ್ಸವ ಕಾರ್ಯಕ್ರಮ ಮೂರು ದಿನಗಳ ಕಾಲ ನಡೆಯಲಿದೆ ಎಂದು ಅರ್ಚಕ ಮರಿಯಪ್ಪ, ಕಾರ್ಯದರ್ಶಿ ಟಿ.ಚಂದ್ರು ತಿಳಿಸಿದ್ದಾರೆ. ಈ ವಿಷಯವಾಗಿ ಪತ್ರಿಕೆಯೊಂದಿಗೆ ಅವರು ಮಾತನಾಡಿ ಮಾ.31 ರಂದು ಹೋಮ ನಡೆಯಲಿದೆ. ಮಾ,2 ರಂದು ರಾತ್ರಿ ಶ್ರೀ ಮಲ್ಲೈಮಹದೇಶ್ವರಸ್ವಾಮಿ, ಬಸವೇಶ್ವರ ಸ್ವಾಮಿ, ಶಿವಲಿಂಗೇಶ್ವರಸ್ವಾಮಿ, ಮದ್ದೂರಮ್ಮದೇವಿ, ಹೊಳೇಚೌಡೇಶ್ವರಿದೇವಿ ದೇವತೆಗಳ ಉತ್ಸವ ಏರ್ಪಡಿಸಲಾಗಿದೆ. ಪೂಜೆಕುಣಿತ, ವಿವಿಧ ಜನಪದ ಕಲಾ ತಂಡಗಳು ಮೆರವಣಿಗೆಯ ಆಕರ್ಷಣೆಯಾಗಲಿವೆ ಎಂದು ತಿಳಿಸಿದ್ದಾರೆ.

ಏ.3 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಪಾದರಹಳ್ಳಿ ಗೇಟ್ ನಿಂದ ಅಮ್ಮನವರು ಮತ್ತು ಕವಣಾಪುರ ಶ್ರೀ ಬಸಪ್ಪನವರನ್ನು ಮಡಿ ಬಟ್ಟೆಯ ಮೇಲೆ ದೇವಸ್ಥಾನಕ್ಕೆ ಹೂ ಹೊಂಬಾಳೆಯಲ್ಲಿ ಕರೆ ತರಲಾಗುವುದು. ನಂತರ ಅಮ್ಮನವರಿಗೆ ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು. ಶ್ರೀ ತ್ರಿಪುರ ಸುಂದರಿ ತಿಬ್ಬಾದೇವಿ ಅಮ್ಮನವರ ಉತ್ಸವಕ್ಕೆ, ಅನ್ನಸಂತರ್ಪಣೆಗೆ ಅಕ್ಕಪಕ್ಕದ ಗ್ರಾಮಸ್ಥರು ಭಕ್ತಾಧಿಗಳು ಮತ್ತು ದಾನಿಗಳು ತಮ್ಮ ತನು, ಮನ, ಧನ, ಧಾನ್ಯ ನೀಡಲಿಚ್ಚಿಸುವ ಭಕ್ತಾಧಿಗಳು ಮುಂಚಿತವಾಗಿ ಅಮ್ಮನವರ ಸನ್ನಿಧಾನಕ್ಕೆ ತಲುಪಿಸುವುದು. ಜೊತೆಗೆ ಭಕ್ತಾಧಿಗಳು ಸಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕಾಗಿ ಅವರು ಮನವಿ ಮಾಡಿದ್ದಾರೆ.

### ಹುಲಿ ದಾಳಿಗೆ ಹಸು ಬಲಿ ಭೀಮನಭೀಡಿನಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ


ಉದಯವಾಹಿನಿ ಚಿತ್ರ

ಹುಲಿ ದಾಳಿ ನಡೆಸಿ ಹಸುವನ್ನು ಬಲಿ ಪಡೆದ ಘಟನೆ ತಾಲ್ಲೂಕಿನ ಭೀಮನಬೀಡು ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ. ಭೀಮನ ಬೀಡು ಗ್ರಾಮದ ಗೋಪಾಲಶೆಟ್ಟಿ ಎಂಬುವರಿಗೆ ಸೇರಿದ ಹಸು ಇದಾಗಿದ್ದು, ಸರ್ವೇ ನಂ–210ರ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ವೇಳೆ ಹಠಾತ್ ದಾಳಿ ನಡೆಸಿದ ಹುಲಿ ಹಸುವನ್ನು ಪೊದೆಯೊಳಗೆ ಎಳೆದೊಯ್ದು ಕೊಂದು ಹಾಕಿದೆ. ರೈತರು ಕೂಡಲೇ ಅರಣ್ಯಾಧಿಕಾರಿಗಳಿಗೆ ವಿಷಯ ಮುಟ್ಟಿಸಿದ್ದಾರೆ. ಮಾಹಿತಿ ಅರಿತ ಗುಂಡ್ಲುಪೇಟೆ ಬಫರ್ ವಲಯದ ಅರಣ್ಯಾಧಿಕಾರಿಗಳ ನೇತೃತ್ವದ ತಂಡ ಸ್ಥಳಕ್ಕೆ ದೌಡಾಯಿಸಿ, ಸಾವನ್ನಪ್ಪಿರುವ ಹಸುವನ್ನು ಪರಿಶೀಲಿಸಿ, ಸುತ್ತಮುತ್ತಲ ಪ್ರದೇಶದಲ್ಲಿ ಕೂಂಬಿಂಗ್ ನಡೆಸಿದ್ದಾರೆ. ಆದರೂ ಸಹ ಹುಲಿ ಗುರುತು ಎಲ್ಲೂ ಪತ್ತೆಯಾಗಿಲ್ಲ.

**ಥರ್ಮಲ್ ಡ್ರೋನ್ ಬಳಕೆ:** ಹುಲಿ ದಾಳಿಗೆ ಹಸು ಬಲಿಯಾದ ಸುತ್ತಮುತ್ತಲು ಅರಣ್ಯ ಸಿಬ್ಬಂದಿ ಕೂಂಬಿಂಗ್ ನಡೆಸುತ್ತಿದ್ದಾರೆ. ಸಂಜೆ ವೇಳೆಗೆ ಥರ್ಮಲ್ ಡ್ರೋನ್ ಹಾರಿಸಲಾಗುವುದು. ಆ ವೇಳೆ ಹುಲಿ ಕಂಡು ಬಂದರೆ ಸೆರೆಗೆ ಕ್ರಮ ವಹಿಸಲಾಗುವುದು ಎಂದು ಬಫರ್ ವಲಯದ ಅರಣ್ಯಾಧಿಕಾರಿ ಶಿವಕುಮಾರ್ ಮಾಹಿತಿ ನೀಡಿದರು.

**ಪರಿಹಾರಕ್ಕೆ ಒತ್ತಾಯ:** ಸುಮಾರು 40 ಸಾವಿರ ಬೆಲೆ ಬಾಳುವ ಹಸು ಹುಲಿ ದಾಳಿಗೆ ಸಿಲುಕಿ ಸಾವನ್ನಪ್ಪಿರುವುದರಿಂದ ರೈತನಿಗೆ ಅಪಾರ ನಷ್ಟ ಉಂಟಾಗಿದೆ. ಆದ್ದರಿಂದ ಕೂಡಲೇ ಅರಣ್ಯಾಧಿಕಾರಿಗಳು ಸೂಕ್ತ ಪರಿಹಾರ ದೊರಕಿಸಿಕೊಡಬೇಕು. ಜೊತೆಗೆ ಬೋನ್ ಇರಿಸಿ ಹುಲಿ ಸೆರೆಗೆ ಕ್ರಮ ವಹಿಸಬೇಕೆಂದು ರೈತ ಮುಖಂಡ ಭೀಮನಬೀಡು ರಾಜು ಒತ್ತಾಯಿಸಿದ್ದಾರೆ.

### ವಿದ್ಯಾರ್ಥಿನಿಗೆ 8.58 ಲಕ್ಷ ವಂಚನೆ

• ಉದಯವಾಹಿನಿ, ತುಮಕೂರು

ವರ್ಕ್‌ಫ್ರಂ ಹೋಮ್ ಆಮಿಷಕ್ಕೆ ಒಳಗಾಗಿ ಶಿರಾ ನಗರದ ಸಪ್ತಗಿರಿ ಬಡಾವಣೆ ವಿದ್ಯಾರ್ಥಿನಿ ಒಬ್ಬರು 8.58 ಲಕ್ಷ ಕಳೆದುಕೊಂಡಿದ್ದಾರೆ. ಅಪರಿಚಿತರು ಟೆಲಿಗ್ರಾಮ್ ಗ್ರೂಪ್‌ಗೆ ವಿದ್ಯಾರ್ಥಿನಿ ನಂಬರ್ ಸೇರಿಸಿದ್ದಾರೆ. ಸದರಿ ಗ್ರೂಪ್‌ನಲ್ಲಿ ಮನೆಯಲ್ಲಿದ್ದು, ಕೆಲಸ ಮಾಡಿದರೆ ತಿಂಗಳಿಗೆ 2,800ರಿಂದ 13,500ರ ವರೆಗೆ ಗಳಿಸಬಹುದು ಎಂದು ತಿಳಿಸಿದ್ದಾರೆ. ವಂಚಕರು ಹೇಳಿದ ಟಾಸ್ಕ್ ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿನಿ ಖಾತೆಗೆ 100 ವರ್ಗಾವಣೆ ಮಾಡಿದ್ದಾರೆ. ಇದಾದ ಬಳಿಕ ಪ್ರೀ–ಪೇಯ್ಡ್ ಟಾಸ್ಕ್‌ಗಳ ಬಗ್ಗೆ ಮಾಹಿತಿ ಹಂಚಿಕೊಂಡು, ಹಣ ಹೂಡಿಕೆ ಕುರಿತು ವಿವರಿಸಿದ್ದಾರೆ. ಮೊದಲಿಗೆ 2 ಸಾವಿರ ವರ್ಗಾಯಿಸಿದ್ದು, ವಿದ್ಯಾರ್ಥಿನಿ ಖಾತೆಗೆ 2,800 ವಾಪಸ್ ಹಾಕಿದ್ದಾರೆ. ಲಿಂಕ್ ಮೂಲಕ ಟ್ರೇಡಿಂಗ್ ಗ್ರೂಪ್‌ಗೆ ಸೇರಿಸಿ, ಹೂಡಿಕೆ ಮಾಡುವಂತೆ ಹೇಳಿದ್ದಾರೆ. ಇದನ್ನು ನಂಬಿದ ವಿದ್ಯಾರ್ಥಿನಿ 8,61,888 ಹಣವನ್ನು ವಿವಿಧ ಬ್ಯಾಂಕ್ ಖಾತೆ, ಯುಪಿಐ ಐ.ಡಿಗಳಿಗೆ ವರ್ಗಾಯಿಸಿದ್ದಾರೆ. ಇದರಲ್ಲಿ ಅವರಿಗೆ 2,950 ಮಾತ್ರ ಜಮಾ ಮಾಡಿದ್ದಾರೆ. ಹಣ ವಾಪಸ್ ಕೇಳಿದಾಗ ಆರೋಪಿಗಳು ನಿಮ್ಮ ಖಾತೆ ನಿಷ್ಕ್ರಿಯವಾಗಿದೆ, ಕ್ರೆಡಿಟ್ ಸ್ಕೋರ್ ಕಡಿಮೆ ಇದೆ ಎಂಬ ಕಾರಣ ಹೇಳಿದ್ದಾರೆ. ಇದರಿಂದ ಅನುಮಾನಗೊಂಡ ವಿದ್ಯಾರ್ಥಿನಿ ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಲಾಗಿದೆ.

# ಪುರಸಭೆ ಉಳಿತಾಯ ಬಜೆಟ್‌ಗೆ ಅನುಮೋದನೆ

• ಉದಯವಾಹಿನಿ, ತಿ.ನರಸೀಪುರ

ಪಟ್ಟಣದ ಪುರಸಭೆಯ 2026 27ನೇ ಸಾಲಿನ 86,44, 458 ರೂಪಾಯಿಗಳ ಉಳಿತಾಯ ಬಜೆಟ್ ಅನ್ನು ಆಡಳಿತಾಧಿಕಾರಿಯೂ ಆಗಿರುವ ಉಪವಿಭಾಗಾಧಿಕಾರಿ ಆಶಪ್ಪ ಅವರು ಮಂಡಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ 2026–27ನೇ ಸಾಲಿನಲ್ಲಿ ಒಟ್ಟು 24,33,33,000 ರೂಗಳ ಆದಾಯವನ್ನು ನಿರೀಕ್ಷಿಸಲಾಗಿದ್ದು, ಅದರಲ್ಲಿ 23,46,88, 542 ರೂಗಳ ನಿರೀಕ್ಷಿತ ಪಾವತಿಯನ್ನು ಮಾಡಬೇಕಿರುವುದರಿಂದ 86,44,458 ರೂಗಳ ಉಳಿತಾಯ ಬಜೆಟ್ ಮಂಡಿಸಿ, ಆಯವ್ಯಯಕ್ಕೆ ಅನುಮೋದನೆ ನೀಡಿದರು. ಅನುಮೋದನೆ ನೀಡಿದ ಬಳಿಕ ಘೋಷಿತ ಹಿಂದಿನ ಕಾರ್ಯಕ್ರಮಗಳ ಅನುಷ್ಠಾನಕ್ಕೆ, ಹೊಸ ಕಾರ್ಯಕ್ರಮಗಳ ಘೋಷಣೆಗೆ, ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಿ ಆದ್ಯತೆಗೆ ಅನುಗುಣವಾಗಿ ಅಭಿವೃದ್ಧಿಯತ್ತ ಕೊಂಡೊಯ್ಯುವಂತೆ ಪುರಸಭೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪುರಸಭೆಯ ಮುಖ್ಯ ಅಧಿಕಾರಿ ಸಿ. ಶ್ರೀನಿವಾಸ್ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿಗೆ ಆದ್ಯತೆ ದೃಷ್ಟಿಯಿಂದ ಪುರಸಭೆಯ ಬಜೆಟ್‌ನಲ್ಲಿ ಹಲವಾರು ಹೊಸ ಯೋಜನೆಗಳನ್ನು ಘೋಷಿಸುವ ಮೂಲಕ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು. ಘನ ತ್ಯಾಜ್ಯ ವಸ್ತು ವಿಲೇವಾರಿ ಘಟಕದ ಅಭಿವೃದ್ಧಿ ಕಾಮಗಾರಿಗಾಗಿ ಕೋಟ್ಯಾಂತರ ರೂಗಳನ್ನು ಮೀಸಲಿಡಲಾಗಿದೆ, ಕಸ ವಿಲೇವಾರಿ ಘಟಕಕ್ಕೆ ಹೆಚ್ಚು ಒತ್ತು ನೀಡಿ,


ಉದಯವಾಹಿನಿ ಚಿತ್ರ


ಸಂಸ್ಕರಣೆ ಮಾಡಲು ಸ್ಥಳ ಗುರುತಿಸಿ ಉತ್ತಮ ಪರಿಸರ ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ. ಪುರಸಭಾ ವ್ಯಾಪ್ತಿಯ ಮುಖ್ಯ ರಸ್ತೆಗಳಿಗೆ ಸ್ವಾಗತ ಕಮಾನು ನಿರ್ಮಾಣ ಮತ್ತು ವಾರ್ಡ್ ಗಳಿಗೆ ಸೂಚನಾ ಫಲಕ ನಿರ್ಮಾಣಕ್ಕಾಗಿ 50 ಲಕ್ಷ ರೂಗಳನ್ನು ಇಡಲಾಗಿದೆ.

ರಸ್ತೆ ಮತ್ತು ರಸ್ತೆ ಬದಿಯ ಚರಂಡಿಗಳು ಮಳೆ ನೀರಿನ ಚರಂಡಿಗಳು ಉದ್ಯಾನವನಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಪುರಸಭಾ ವ್ಯಾಪ್ತಿಯಲ್ಲಿರುವ ಪ್ರಮುಖ ವೃತ್ತಗಳನ್ನು ಟ್ರಾಫಿಕ್ ನಿಯಂತ್ರಣಕ್ಕಾಗಿ ಸಿಸಿ ಕ್ಯಾಮೆರಾ ಗಳನ್ನು ಅಳವಡಿಸಲಾಗಿದೆ. ಸಾರ್ವಜನಿಕ ಸಮುದಾಯ ಮತ್ತು ಅಂಗನವಾಡಿ ಶಾಲೆಗಳ ಶೌಚಾಲಯಗಳ ದುರಸ್ತಿಗೆ ಕ್ರಮ, ಬೀದಿ ನಾಯಿಗಳ ಹಾವಳಿಗಳ ನಿಯಂತ್ರಣಕ್ಕೆಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಹಾಗೂ ಡಾಗ್ ಶೆಲ್ಟರ್ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ ಎಂದರು. ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಒತ್ತು, ಪೌರಕಾರ್ಮಿಕ ದಿನಾಚರಣೆ ಬೆಳಗಿನ ಉಪಹಾರ, ವೈಯಕ್ತಿಕ ಸುರಕ್ಷಾ ಧಿರಿಸು, ಸಾಧಬಾ ಪರಿಕರಣಗಳನ್ನು ವಿತರಿಸಲಾಗಿದೆ.

ಪುರಸಭಾ ವ್ಯಾಪ್ತಿಯ ಸರ್ವ ಜನಾಂಗದ ಸ್ಮಶಾನಗಳ ಅಭಿವೃದ್ಧಿಗಾಗಿ ಅನುದಾನ ಮೀಸಲಿಡಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಧಿಗೆ ಎಸ್‌ಎಸ್‌ಸಿ, ಪುರಸಭಾ ನಿಧಿ 24.10 ರಷ್ಟು ಮೀಸಲಿಡಲಾಗಿದೆ. ಇದಲ್ಲದೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಧಿಗೆ ಎಸ್‌ಎಫ್ಸಿ ಮತ್ತು ಪುರಸಭಾ ನಿಧಿಯಿಂದ 7.25% ಹಣ ಮೀಸಲಿಟ್ಟು, ವಿಕಲಚೇತನ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಪತ್ರಕರ್ತರ ಆರೋಗ್ಯ ತಪಾಸಣೆ, ವೈದ್ಯಕೀಯ ವ್ಯಕ್ತಿಗಳ ವಿಮೆಗೂ 2 ಲಕ್ಷ ರೂಗಳನ್ನು ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ಕುಡಿಯುವ ನೀರಿನ ಆದ್ಯತೆಗಾಗಿ ನೀರು ಸರಬರಾಜು ಯಂತ್ರಗಳ ಖರೀದಿ, ರಿಪೇರಿ, ಕೊಳವೆಬಾವಿ, ಸಾಮಗ್ರಿಗಳು, ನೀರು ಶುದ್ಧೀಕರಣ ಘಟಕದ ಮೋಟರ್ ಪಂಪ್ ಸ್ಟಾರ್ಟರ್ ಹ್ಯಾಂಡ್ ಪಂಪ್ ಖರೀದಿ ಮತ್ತು ರಿಪೇರಿ ನಿರ್ವಹಣೆಗೆ ಒತ್ತು ನೀಡಲಾಗಿದೆ. ಘನ ತ್ಯಾಜ್ಯ ವಿಲೇವಾರಿ ವಾಹನಗಳ ಖರೀದಿಗಾಗಿ, ವಿಲೇವಾರಿ ವಾಹನಗಳ ಇಂಧನ ರಿಪೇರಿ ವಿಮೆ ಹಾಗೂ ನಿರ್ವಹಣಾ ವೆಚ್ಚ ಚಾಲಕರ ವೇತನಕ್ಕೆ ಹಣ ಮೀಸಲಿಡಲಾಗಿದೆ ಎಂದು ತಿಳಿಸಿದರು. ಪುರಸಭೆ ಕಂದಾಯ ಅಧಿಕಾರಿ ಕೆ.ಸಿ.ತ್ರಿವೇಣಿ, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಹಾಗೂ ಲೆಕ್ಕಾಧಿಕಾರಿ ವಿನಯ್ ಕುಮಾರ್ ಇದ್ದರು.

# ಎಸ್‌ಐಆರ್: ಮತದಾನದ ಹಕ್ಕು ಕಿತ್ತುಕೊಳ್ಳುವ ಯತ್ನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹಂಪಾಪುರ

ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್‌ಅವರ ದೀರ್ಘಕಾಲದ ಹೋರಾಟದ ಫಲವಾಗಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ದೊರೆತಿದೆ' ಎಂದು ಸಂವಿಧಾನ ಸಂಚಾಲನ ಸಮಿತಿ ಸದಸ್ಯ ಅಕ್ಟರ್ ಪಾಷ ಹೇಳಿದರು. ಹೋಬಳಿ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಮತ್ತು ಮುಖಂಡರಿಗೆ ಸಂವಿಧಾನ ಸಂರಕ್ಷಣಾ ಪಡೆಯಿಂದ ಆಯೋಜಿಸಿದ್ದ 'ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

'ಮತದಾನದ ಹಕ್ಕು ಸಿಕ್ಕ ಮೇಲೆ ಪ್ರತಿಯೊಂದು ಸಣ್ಣ ಸಣ್ಣ ಸಮಾಜಕ್ಕೂ ವಿಶೇಷ ಪ್ರಾತಿನಿಧ್ಯ ಸಿಕ್ಕಿದೆ. ಹಕ್ಕಿನ ಫಲವಾಗಿ ನಾವು ಇಂದು ಸ್ವತಂತ್ರವಾಗಿ ಸ್ವಾಭಿಮಾನದ ಜೀವನ ನಡೆಸಲು ಸಾಧ್ಯವಾಗಿದೆ. ಆದರೆ, ಈ ಹಕ್ಕನ್ನೇ ಕಗ್ಗೊಲೆ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬುಡಮೇಲು ಮಾಡಿ ಏಕಾಧಿಪತ್ಯ ಸ್ಥಾಪಿಸುವ ವ್ಯವಸ್ಥಿತ ಹುನ್ನಾರ ನಡೆದಿದೆ' ಎಂದು ಆರೋಪಿಸಿದರು. 'ಎಸ್‌ಐಆರ್ ಜಾರಿಯಿಂದ ಅನಕ್ಷರಸ್ಥರು, ದಲಿತರು, ಅಲ್ಪಸಂಖ್ಯಾತರು. ಗಿರಿಜನರು, ಕ್ರಿಶ್ಚಿಯನ್ನರು ಮತದಾನದ ಹಕ್ಕಿನಿಂದ ವಂಚಿತರರಾಗುತ್ತಿದ್ದು, ಈ ದೇಶದ ಪೌರತ್ವವನ್ನೇ ಕಳೆದುಕೊಳ್ಳುವ ಭೀತಿಯಲಿದ್ದಾರೆ. ಆದ್ದರಿಂದ ಪ್ರತಿ ಹಳ್ಳಿಯಲ್ಲಿಯೂ ಮತ್ತು ಪ್ರತಿ ಮನೆಯಲ್ಲಿಯೂ ಎಚ್ಚೆತ್ತುಕೊಳ್ಳಬೇಕಾಗಿದೆ' ಎಂದರು.


ಸಂವಿಧಾನ ಸಂರಕ್ಷಣಾ ಪಡೆಯ ವಲಯ ಸಂಯೋಜಕ ಜೀವಿಕ ಉಮೇಶ್ ಮಾತನಾಡಿ, 'ಚುನಾವಣೆ ಆಯೋಗ ಮತದಾರರ ಪಟ್ಟಿ ಅಂತಿಮಗೊಳಿಸುವ ಮುನ್ನ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮ, ವಾರ್ಡ್ ಸಭೆ ಕರೆದು ಸಭೆಯ ಮುಂದೆ ಪಟ್ಟಿಯನ್ನು ಓದಿ ಸೇರಿರುವವರು ಮತ್ತು ಬಿಟ್ಟಿರುವವರ ಹೆಸರನ್ನು ಸಾರ್ವಜನಿಕವಾಗಿ ತಿಳಿಸಿ ನಂತರ ಜನರ ಒಪ್ಪಿಗೆ ಮೇರೆಗೆ ಪಟ್ಟಿ ಬಿಡುಗಡೆ ಮಾಡಿ' ಎಂದು ಮನವಿ ಮಾಡಿದರು.

# ಬಿಜೆಪಿ ಕಾರ್ಯಕರ್ತರ ಕಾರ್ಯಾಗಾರ

• ಉದಯವಾಹಿನಿ, ಚಿಂತಾಮಣಿ

ಮುಂಬರುವ ಚುನಾವಣೆ ಹಿನ್ನೆಲೆ ಬಿಜೆಪಿ ತನ್ನ ಸಾಂಸ್ಥಿಕ ಬಲವರ್ಧನೆಗಾಗಿ ನಗರದ ಕೆಎಂಡಿ ಕಲ್ಯಾಣ ಮಂಟಪದಲ್ಲಿ ಬಿಎಲ್‌ಎ–2 ಕಾರ್ಯಗಾರ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಬಿಜೆಪಿ ಮುಖಂಡ ವೇಣುಗೋಪಾಲ್ ಮಾತನಾಡಿ, ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಯಾವುದೇ ಅಕ್ರಮಗಳಿಗೆ ಅವಕಾಶ ನೀಡದೆ, ಪಾರದರ್ಶಕವಾಗಿ ಮತದಾನ ನಡೆಯುವಂತೆ ನೋಡಿಕೊಳ್ಳುವುದು ಪಕ್ಷದ ಪ್ರಮುಖ ಆದ್ಯತೆ. ಮತದಾರರ ಪಟ್ಟಿಯಲ್ಲಿರುವ ದೋಷಗಳನ್ನು ಸರಿಪಡಿಸಲು ಕಾರ್ಯಕರ್ತರು ನಿಗಾವಹಿಸಬೇಕು ಎಂದರು.

ವಿಶೇಷವಾಗಿ ಮೃತಪಟ್ಟವರ ಹೆಸರುಗಳನ್ನು ಪಟ್ಟಿಯಿಂದ ತೆಗೆದು ಹಾಕುವುದು, ವಲಸೆ ಹೋದವರ, ವಿಳಾಸ ಬದಲಾವಣೆ ಹಾಗೂ ಹೊಸ ಮತದಾರರ ಸೇರ್ಪಡೆಗೆ ಹೆಚ್ಚಿನ ಒತ್ತು ನೀಡಬೇಕು. ಒಂದಕ್ಕಿಂತ ಹೆಚ್ಚು ಕಡೆ ಹೆಸರಿರುವ ಮತದಾರರನ್ನು ಗುರುತಿಸಿ ಪಟ್ಟಿಯನ್ನು ಸರಿಪಡಿಸುವತ್ತ ಗಮನಹರಿಸಬೇಕೆಂದು ಮನವಿ ಮಾಡಿದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಹ ಸಂಯೋಜಕಿ ರಕ್ಷಿತ ಮಾತನಾಡಿ, ಚುನಾವಣೆಗಳಲ್ಲಿ ಅಕ್ರಮಗಳನ್ನು ತಡೆಯಲು ಡಿಡೆಕ್ಟ್,


ಉದಯವಾಹಿನಿ ಚಿತ್ರ

ಡಿಲೀಟ್, ಡಿಪೋರ್ಟ್ ಎಂಬ ಮಂತ್ರದೊಂದಿಗೆ ಕಾರ್ಯನಿರ್ವಹಿಸಬೇಕು ವಿರೋಧ ಪಕ್ಷಗಳು ಇವಿಎಂ ಯಂತ್ರಗಳ ಮೇಲೆ ಪದೇ ಪದೇ ಆರೋಪ ಮಾಡುತ್ತಿವೆ. ಮತದಾರರ ಪಟ್ಟಿಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸುವ ಮೂಲಕ ಇಂತಹ ಸುಳ್ಳು ಆರೋಪಗಳಿಗೆ ನಾವು ಸಮರ್ಥವಾಗಿ ಉತ್ತರ ನೀಡುತ್ತಿದ್ದೇವೆ ಎಂದರು.


ಅಭಿಯಾನದ ಮೂಲಕ ಅರ್ಹ ಮತದಾರರನ್ನು ಪಟ್ಟಿಗೆ ಸೇರಿಸುವ ಮತ್ತು ಅನರ್ಹರನ್ನು ಹೊರಹಾಕುವ ಮೂಲಕ 2028ರ ವಿಧಾನಸಭಾ ಚುನಾವಣೆಯಲ್ಲಿ ಚಿಂತಾಮಣಿಯಲ್ಲಿ ಬಿಜೆಪಿ ಬಾವುಟ ಹಾರಿಸುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದು ಹೇಳಿದರು.

# ವೈದ್ಯ ಶುಶ್ರೂಷಕಿಯರಿಗೆ ಇಲ್ಲ ವಸತಿಗೃಹ

• ಉದಯವಾಹಿನಿ, ತುರುವೇಕೆರೆ

ತಾಲ್ಲೂಕಿನ ದಬ್ಬೆಘಟ್ಟ ಹೋಬಳಿಯ ಮಾವಿನಕೆರೆ ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕಿಯರ ವಸತಿ ಗೃಹ ಸಂಪೂರ್ಣ ಶಿಥಿಲಗೊಂಡಿದ್ದು, ವೈದ್ಯರಿಗೆ ವಸತಿ ಗೃಹಗಳು ಇಲ್ಲದೆ ಪರದಾಡುವಂತಾಗಿದೆ. ಮಾವಿನಕೆರೆ ತುಮಕೂರು ಜಿಲ್ಲೆಯ ಹಾಗೂ ತಾಲ್ಲೂಕಿನ ಕಟ್ಟಕಡೆಯ ಗ್ರಾಮವಾಗಿದೆ. ಮಾಯಸಂದ್ರ, ದಬ್ಬಘಟ್ಟ ಎರಡೂ ಹೋಬಳಿಗಳನ್ನು ಸಂಪರ್ಕಿಸುತ್ತದೆ. ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮೇಲಿನವಳಗೇರ ಹಳ್ಳಿ, ಕಾಡಸೂರು, ಮುದಿಗೆರೆ, ಬ್ಯಾಡರಹಳ್ಳಿ, ಅರಳಹಳ್ಳಿ, ಕರಡಿಗೆರೆ, ಮುದ್ದ ಮಾರನಹಳ್ಳಿ, ನಾಗಲಾಪುರ, ಕೆ.ಹೊಸೂರು, ಒಬ್ಬೇನಾಗಸಂದ್ರ, ಜೆ.ಸಿ.ಪುರ, ಮದ್ದನಹಳ್ಳಿ ಸೇರಿದಂತೆ 30ಕ್ಕೂ ಹೆಚ್ಚು ಗ್ರಾಮಗಳಿಂದ ಪ್ರತಿ ದಿನ ಸುಮಾರು 70 ರಿಂದ 80 ರೋಗಿಗಳು ಚಿಕಿತ್ಸೆಗೆಂದು ಬರುತ್ತಾರೆ. ಮಾವಿನಕೆರೆ ಗ್ರಾಮದ ಕಿರಿಯ ಆರೋಗ್ಯ ಶುಶೂಷಕಿಯರ ವಸತಿ ಗೃಹ, ವೈದ್ಯರ ವಸತಿ ಗೃಹ ಕೊಠಡಿ ನಿರ್ಮಾಣ ಮಾಡಿ 70 ವರ್ಷ ಸಂದಿವೆ.

ಕಟ್ಟಡಗಳೆಲ್ಲಾ ಸಂಪೂರ್ಣ ಶಿಥಿಲವಾಗಿವೆ. ಕಿಟಕಿ, ಬಾಗಿಲು ಮುರಿದಿವೆ. ಗೋಡೆಗಳು ಬಿರುಕು ಬಿಟ್ಟಿವೆ, ಕೊಠಡಿಯ ಚಾವಣಿಯಲ್ಲಿ ಹುಲ್ಲಿನ ಪೊದೆ ಬೆಳೆದಿವೆ. ಎರಡೂ ವಸತಿ


ಉದಯವಾಹಿನಿ ಚಿತ್ರ

ಗೃಹಗಳ ಸುತ್ತಲೂ ಲಂಟಾನ ಗಿಡಗಳು ಅವರಿಸಿಕೊಂಡಿದೆ. ರಸ್ತೆ ಬದಿಯಲ್ಲಿ ವಸತಿಗೃಹ ಇರುವುದರಿಂದ ಮಳೆಗಾಲದಲ್ಲಿ ಗ್ರಾಮಸ್ಥರು ಓಡಾಡುವಾಗ ಬಿದ್ದು ತೊಂದರೆಗಳು ಆಗುವ ಮುನ್ನ ಅಧಿಕಾರಿಗಳು ಕಟ್ಟಡ ನೆಲಸಮಗೊಳಿಸಬೇಕು ಎಂಬುದು ಗ್ರಾಮಸ್ಥರು ಒತ್ತಾಯ ಮಾಡಿದ್ದಾರೆ.

**ಸಿಬ್ಬಂದಿ ಕೊರತೆ:** ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಸ್ಪತ್ರೆಯಲ್ಲಿ ವಿವಿಧ ತಜ್ಞ ವೈದ್ಯರು ಇಲ್ಲ. ಲ್ಯಾಬ್ ಟೆಕ್ನಿಷಿಯನ್ 1, ಎಲ್.ಎಚ್.ವಿ 1, ಪಿಎಚ್.ಸಿ.ಒ 1, ಗ್ರೂಪ್ ಡಿ 2 ಹುದ್ದೆಗಳು ಖಾಲಿ ಇದೆ.

**ಅರ್ಧಕ್ಕೆ ನಿಂತ ಕಾಂಪೌಡ್:** ಆಸ್ಪತ್ರೆಗೆ ಸುತ್ತಲೂ ಕಾಂಪೌಡ್ ಮಾಡಬೇಕೆಂದು ಇಲಾಖೆಯಿಂದ ನಿರ್ದೇಶನವಿದ್ದರೂ ಇಲ್ಲಿವರೆಗೆ ಕೇವಲ ಒಂದು ಭಾಗಕ್ಕೆ ಮಾತ್ರ ಕಾಂಪೌಂಡ್ ನಿರ್ಮಿಸಲಾಗಿದೆ. ಆಸ್ಪತ್ರೆಯ ಪಶ್ಚಿಮ ಮತ್ತು ದಕ್ಷಿಣ ಭಾಗಕ್ಕೆ ಕಾಂಪೌಂಡ್ ನಿರ್ಮಾಣವಾಗಬೇಕಿದೆ. ಕಾಂಪೌಂಡ್ ಇಲ್ಲದೆ ಕಾರಣ ದನಕರು ಮತ್ತು ನಾಯಿಗಳು ಆಸ್ಪತ್ರೆಯ ಆವರಣಕ್ಕೆ ನುಗ್ಗುತ್ತವೆ.

### ವಸತಿ ಗೃಹ ನಿರ್ಮಿಸಿ

**ಹಳೆ ವಸತಿ ಗೃಹ ನೆಲಸಮಗೊಳಿಸಿ ಈ ಆಸ್ತಿಯನ್ನು ಆರೋಗ್ಯ ಇಲಾಖೆಗೆ ನೀಡಬೇಕು. ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮುಚ್ಚಯದಲ್ಲಿಯೇ ವಿಶಾಲವಾದ ಸ್ಥಳವಿದೆ. ಅಲ್ಲಿಯೇ ವೈದ್ಯರಿಗೆ ಮತ್ತು ಶುಶ್ರೂಷಕಿಯರಿಗೆ ಹೊಸದಾಗಿ ವಸತಿ ಗೃಹ ನಿರ್ಮಿಸಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದೇನೆ. ಜನರ ಹಿತಾಸಕ್ತಿಯಿಂದ ಸರ್ಕಾರ ಬೇಗ ಕ್ರಮ ಕೈಗೊಳ್ಳಲಿ.**


**–ಸಿದ್ದಲಿಂಗೇಗೌಡ, ವಿಶ್ವ ಮಾನವ ಹಕ್ಕುಗಳ ಹೋರಾಟಗಾರ**

# 'ನಂಜನಗೂಡು ಜಾತ್ರೆ' ನೋಡಿ ಬಾಲ್ಯ ನೆನೆದ ಸಚಿವ ಮಹದೇವಪ್ಪ


## ದಕ್ಷಿಣ ಕಾಶಿ ನಂಜನಗೂಡಿನಲ್ಲಿ ದೊಡ್ಡ ಜಾತ್ರೆ ಸಂಭ್ರಮ

• ಉದಯವಾಹಿನಿ, ಮೈಸೂರು

ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಸೋಮವಾರ ನಂಜನಗೂಡಿನಲ್ಲಿ ನಡೆದ ಶ್ರೀಕಂಠೇಶ್ವರ 'ದೊಡ್ಡ ಜಾತ್ರಾ ಮಹೋತ್ಸವ'ದಲ್ಲಿ ಭಾಗಿಯಾಗಿ, ಬಾಲ್ಯದ ದಿನಗಳ ನೆನಪನ್ನು ಹಂಚಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣದ ತಮ್ಮ ಖಾತೆಯನ್ನು 'ಪೋಸ್ಟ್' ಹಾಕಿರುವ ಅವರು, 'ಊರ ಜಾತ್ರೆಯ ನೆನಪು' ಮಾಡಿಕೊಂಡಿದ್ದಾರೆ.



'ನಂಜನಗೂಡಿನಿಂದ ಕೆಲವೇ ಮೈಲಿಗಳ ದೂರದಲ್ಲಿರುವುದು ನಮ್ಮೂರು ಹದಿನಾರು. ಇದರ ಜೊತೆಗೆ ಕಪಿಲಾ ನದಿ ದಡದ ಪಕ್ಕದಲ್ಲೇ ಇರುವ ಹೆಜ್ಜಿಗೆ ಕೂಡ ನಮ್ಮ ಸಂಬಂಧಿಕರ ಊರಾಗಿತ್ತು. ಚಿಕ್ಕ ವಯಸ್ಸಿನಲ್ಲಿ ಹೆಜ್ಜಿಗೆಗೆ ಬರುತ್ತಿದ್ದಾಗ ನಂಜನಗೂಡು ಜಾತ್ರೆಗೆ


ಉದಯವಾಹಿನಿ ಚಿತ್ರ

ಬಹು ಸಂಭ್ರಮದಿಂದ ಹೋಗುತ್ತಿದ್ದೆವು'. 'ಬಡತನ ಹೆಚ್ಚಾಗಿದ್ದ ಆ ಕಾಲದಲ್ಲಿ ಉಡುವ ಬಟ್ಟೆಗಳೂ ಕಡಿಮೆ ಇದ್ದಿದ್ದರಿಂದ ಅಮ್ಮ ಹೊಲಿಸಿಕೊಟ್ಟ ಅಪರೂಪದ ಪ್ಯಾಂಟ್ ಶರ್ಟನ್ನೇ ಜೋಪಾನವಾಗಿಟ್ಟುಕೊಂಡು ಜಾತ್ರೆಗೆ ಹೋಗುತ್ತಿದ್ದ ನೆನಪು'.

'ಆದರೆ, ಈಗಿನಂತೆ ಆಗ ನದಿಯನ್ನು ದಾಟಲು ಸೇತುವೆ ಇರಲಿಲ್ಲ. ಬೇಸಿಗೆ ಸಂದರ್ಭದಲ್ಲಿ ನೀರು ಕಡಿಮೆ ಇರುತ್ತಿದ್ದ ಕಾರಣ, ನಾವು ಹೊಸ ಪ್ಯಾಂಟು ಯಾವ ಕಾರಣಕ್ಕೂ ನೆನೆಯಬಾರದೆಂದು ಹೆಚ್ಚು ಕಡಿಮೆ ಮೊಣಕಾಲಿಗಿಂತಲೂ ಮೇಲಿನವರೆಗೂ ಅದನ್ನು ಮಡಿಚಿಕೊಂಡು, ನದಿ ದಾಟುತ್ತಿದ್ದೆವು. ಕೆಲವೊಮ್ಮೆ ನೀರು ಸ್ವಲ್ಪ ಹೆಚ್ಚಾಗಿದೆ ಎನಿಸಿದಾಗ ಪ್ಯಾಂಟನ್ನು ತಲೆ ಮೇಲೆ ಹೊತ್ತು ಆ ಕಡೆ ದಡಕ್ಕೆ ಹೋದ ಮೇಲೆ ಹಾಕಿಕೊಳ್ಳುತ್ತಿದ್ದೆವು' ಎಂದು ನೆನೆದಿದ್ದಾರೆ.

**ಉತ್ತಮ ಪಾರ್ಕಿಂಗ್ ವ್ಯವಸ್ಥೆ**

'ಆಗ ನಮ್ಮ ಕೈಲಿರುತ್ತಿದ್ದ ಎರಡೋ ಮೂರು ರೂಪಾಯಿಯಲ್ಲಿ ಜಾತ್ರೆಯಲ್ಲಿ ಬೆಂಡು–ಬತ್ತಾಸು ಮತ್ತು ಕಳ್ಳೆಪುರಿಯನ್ನು ಕೊಂಡು ಅಲ್ಲೇ ಸ್ವಲ್ಪ ತಿಂದು ಮಿಕ್ಕಿದ್ದನ್ನು ಸ್ವಲ್ಪವೂ ನೆನೆಯದಂತೆ ನದಿ ದಾಟಿಕೊಂಡು ಮನೆಗೆ ಒಯ್ಯುತ್ತಿದ್ದ ನೆನಪು ಮಾಸಿಲ್ಲ' ಎಂದು ಹೇಳಿದ್ದಾರೆ. 'ನಮ್ಮೂರು ನಂಜನಗೂಡಿನ ಜಾತ್ರೆ ಇಡೀ ಮೈಸೂರು–ಚಾಮರಾಜನಗರ ಭಾಗಕ್ಕೆ ಬಹಳ ಜನಪ್ರಿಯವಾದ ಜಾತ್ರೆ. ಇಂತಹ ಜಾತ್ರೆಯಲ್ಲಿ ಪಾಲ್ಗೊಂಡಾಗ ನನ್ನೊಳಗೆ ಬಾಲ್ಯದ ನೆನಪುಗಳು ಮತ್ತೆ ಆವರಿಸಿದವು' ಎಂದು ಹಂಚಿಕೊಂಡಿದ್ದಾರೆ. 'ಅದರಲ್ಲೂ ಜಾತಿ, ಧರ್ಮ ಬೇಧವಿಲ್ಲದೇ ಒಂದು ಮುಗ್ಧ ಆಚರಣೆಯಾಗಿ ಆಚರಿಸಲಾಗುವ ನಂಜನಗೂಡಿನ ಜಾತ್ರೆ ಅಂದು ಹೇಗಿತ್ತೋ ಇಂದೂ ಹಾಗೆಯೇ ತನ್ನ ಆಚರಣೆಯ ಮುಗ್ಧತೆಯನ್ನು ಉಳಿಸಿಕೊಂಡಿದೆ' ಎಂದು ಬರೆದುಕೊಂಡಿದ್ದಾರೆ.

> **ಬಹು ಮುಖ್ಯವಾಗಿ ನಾನು ಸಚಿವನಾದ ನಂತರ ಇಲ್ಲಿನ ಜನರು ಸುಲಭವಾಗಿ ನದಿ ದಾಟಲು ಅನುಕೂಲ ಆಗುವಂತೆ ನಂಜನಗೂಡು–ಹೆಜ್ಜಿಗೆ ಸೇತುವೆ ಮತ್ತು ನದಿಯ ಇಕ್ಕೆಲಗಳಲ್ಲಿ ಸುಸಜ್ಜಿತ ಮೆಟ್ಟಿಲುಗಳು, ಪರಶುರಾಮ ದೇವಾಲಯದ ಸುತ್ತ ಮಳೆ ಮತ್ತು ನದಿ ಪ್ರವಾಹದಿಂದ ಆಗುತ್ತಿದ್ದ ಕೆಸರನ್ನು ತಪ್ಪಿಸಲು ಕಾಂಕ್ರೀಟ್ ಹೊದಿಕೆ ನಿರ್ಮಾಣ, ನಂಜನಗೂಡಿನ ದೇವಾಯದ ಸುತ್ತಲೂ ಉತ್ತಮ ಪಾರ್ಕಿಂಗ್ ವ್ಯವಸ್ಥೆ ಮತ್ತು ಕಾಂಕ್ರೀಟ್ ಹಾಸಿನ ವ್ಯವಸ್ಥೆಯನ್ನು ಮಾಡಿಸುವ ಅವಕಾಶ ನನ್ನದಾಗಿತ್ತು. ಬಾಲ್ಯದ ನೆನಪುಗಳನ್ನು ಹಾಗೆ ಕಾಪಾಡಿಕೊಂಡು ಅವಕಾಶ ಸಿಕ್ಕಾಗ ಅವುಗಳನ್ನು ಸಾಕಾರಗೊಳಿಸುವ ಸಂದರ್ಭವಿದೆಯಲ್ಲಾ ಅದಕ್ಕೆ ಎಂದೂ ಬೆಲೆ ಕಟ್ಟಲು ಆಗದು.**
>
> **– ಡಾ.ಎಚ್.ಸಿ. ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ**

### ಬೀದಿ ಬೀದಿಯಲ್ಲಿ ಉಘೇ ನಂಜುಂಡೇಶ್ವರ ಘೋಷಣೆ

**ದೊಡ್ಡ ಜಾತ್ರೆ ಸಂಭ್ರಮ ಕಳೆಗಟ್ಟಿದೆ. ಮುಂಜಾನೆಯಿಂದಲೂ ಶ್ರೀಕಂಠೇಶ್ವರನಿಗೆ ವಿಶೇಷ ಪೂಜಾ ಕೈಂಕರ್ಯಗಳು ವೈಭವದಿಂದ ಜರುಗುತ್ತಿವೆ. ಇತಿಹಾಸ ಪ್ರಸಿದ್ಧ ಗೌತಮ ಪಂಚಮ ರಥೋತ್ಸವ ನಡೆದಿದ್ದು, ಮುಂಜಾನೆ 5.50 ರಿಂದ 6.30ರ ಶುಭ ಮೀನ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಗಿದೆ. ಸಹಸ್ರ ಸಂಖ್ಯೆಯಲ್ಲಿ ಸೇರಿದ ಭಕ್ತರು ಶ್ರೀಕಂಠಶ್ವೇರ ರಥ ಎಳೆದು ಕೃತಾರ್ಥರಾಗಿದ್ದಾರೆ ನಂಜನಗೂಡಿನ ಬೀದಿ ಬೀದಿಯಲ್ಲಿ ಗೌತಮ ಪಂಚ ರಥೋತ್ಸವ ಸಾಗಿದ್ದು, ರಥಕ್ಕೆ ಹಣ್ಣು ಜವನ ಎಸೆದು ಭಕ್ತರು ಪ್ರಾರ್ಥನೆ ಸಲ್ಲಿಸಿದ್ದಾರೆ. ಬೀದಿ ಬೀದಿಯಲ್ಲಿ ಉಘೇ ನಂಜುಂಡೇಶ್ವರ ಘೋಷಣೆಗಳು ಕೇಳಿ ಬಂದವು.**

ಅಂತರಾಳದಿಂದ..
EDITORIAL

# ತೃತೀಯ ಭಾಷೆ ಹೊರೆ ಹಗುರ, ಸ್ವಾಗತಾರ್ಹ; ಎಚ್ಚರವೂ ಅಗತ್ಯ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿಯನ್ನು ಕೈಬಿಡುವ ಶಾಲಾ ಶಿಕ್ಷಣ ಇಲಾಖೆಯ ನಿರ್ಧಾರ, ಹತ್ತನೇ ತರಗತಿಯ ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸುವ ಮಹತ್ವದ ಕ್ರಮವಾಗಿದೆ. ಮೂರನೇ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ಹೊಸ ಪದ್ಧತಿಯನ್ನು 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಜಾರಿಗೆ ತರಲು ಇಲಾಖೆ ನಿರ್ಧರಿಸಿದೆ. ಈ ಹಿಂದಿನಂತೆ ಹೊಸ ಪದ್ಧತಿಯಲ್ಲೂ ವಿದ್ಯಾರ್ಥಿಗಳು 625 ಅಂಕಗಳಿಗೆ ಪರೀಕ್ಷೆ ಬರೆಯಲಿದ್ದಾರೆ. ಆದರೆ, ತೃತೀಯ ಭಾಷೆಯ ಫಲಿತಾಂಶ ಗ್ರೇಡಿಂಗ್‌ಗಷ್ಟೇ ಸೀಮಿತಗೊಳ್ಳುವುದರಿಂದ, ಶೇಕಡವಾರು ನಿರ್ಧರಿಸಲು 525 ಅಂಕಗಳನ್ನಷ್ಟೇ ಪರಿಗಣಿಸಲಾಗುತ್ತದೆ. ಕನ್ನಡಪರ ಸಂಘಟನೆಗಳು ಮತ್ತು ಚಿಂತಕರ ಒತ್ತಾಯದ ಮೇರೆಗೆ ಈ ಬದಲಾವಣೆ ಮಾಡಿರುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. 2025ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸುಮಾರು 1.48 ಲಕ್ಷ ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗಿದ್ದರು, 2024ರಲ್ಲೂ ಹಿಂದಿಯಲ್ಲಿ ಫೇಲಾದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಮಕ್ಕಳ ಪಾಲಿಗೆ ಹಿಂದಿ ಹೇರಿಕೆ ಮಾರಕವಾಗುತ್ತಿದೆ ಎನ್ನುವ ಆತಂಕ ಕನ್ನಡ ಸಂಘಟನೆಗಳಿಂದ ವ್ಯಕ್ತವಾಗಿತ್ತು. ಆ ಆತಂಕಕ್ಕೆ ಸ್ಪಂದಿಸಿರುವ ಸರ್ಕಾರ, ತೃತೀಯ ಭಾಷೆಯಲ್ಲಿ ಪಡೆಯುವ ಅಂಕಗಳನ್ನು ಫಲಿತಾಂಶದಿಂದ ಹೊರಗಿಡಲು ತೀರ್ಮಾನಿಸಿದೆ.




ಇದರಿಂದಾಗಿ, ವಿದ್ಯಾರ್ಥಿಗಳ ಮೇಲಿನ ಮಾನಸಿಕ ಒತ್ತಡ ಕಡಿಮೆ ಆಗಲಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಮಕ್ಕಳ ಮೇಲಿನ ದೊಡ್ಡದೊಂದು ಹೊರೆ ಇಳಿದಂತಾಗುತ್ತದೆ. ತೃತೀಯ ಭಾಷೆಯಾಗಿ ಹಿಂದಿಯ ಮಹತ್ವವನ್ನು ಕುಗ್ಗಿಸುವ ಸರ್ಕಾರದ ನಿರ್ಧಾರವನ್ನು ದ್ವಿಭಾಷಾ ಸೂತ್ರದತ್ತ ಸಾಗುವ ದಾರಿಯಲ್ಲಿನ ಮಹತ್ವದ ಹೆಜ್ಜೆಯ ರೂಪದಲ್ಲಿಯೂ ಗುರ್ತಿಸಲಾಗುತ್ತಿದೆ. ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಇನ್ನೂ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರೂ, ದ್ವಿಭಾಷಾ ನೀತಿಯ ಭಾಗವಾಗಿಯೇ ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ವಿಷಯದ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದ್ದಾರೆ. ಸರ್ಕಾರದ ನಿರ್ಧಾರವನ್ನು ಬಿಜೆಪಿ ನಾಯಕರು ಕಟುವಾಗಿ ಟೀಕಿಸಿದ್ದಾರೆ. ಯಾವುದೇ ಶೈಕ್ಷಣಿಕ ದೃಷ್ಟಿಕೋನವಿಲ್ಲದ, ರಾಜಕೀಯಪ್ರೇರಿತ ನಿರ್ಧಾರ ಇದಾಗಿದೆ ಎನ್ನುವ ಟೀಕೆಗಳು ವ್ಯಕ್ತವಾಗಿವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ಮಹತ್ವದ ಬದಲಾವಣೆಯನ್ನು ತಂದಿರುವ ಸರ್ಕಾರದ ಕ್ರಮ, ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಲಿದೆ ಎನ್ನುವ ಅಭಿಪ್ರಾಯಗಳೂ ಇವೆ. ಹಿಂದಿಯನ್ನು ನಗಣ್ಯಗೊಳಿಸಿರುವ ಕ್ರಮ ವಿದ್ಯಾರ್ಥಿಗಳ ಬಹುಭಾಷಾ ಸಾಮರ್ಥ್ಯ ಹಾಗೂ ರಾಷ್ಟ್ರೀಯ ಏಕತೆಯ ಮೇಲೆ ಪರಿಣಾಮ ಬೀರಲಿದೆ ಎನ್ನುವ ವಿಶ್ಲೇಷಣೆಗಳೂ ಇವೆ. ಪರೀಕ್ಷೆಗಳು ಆರಂಭವಾಗುವವರೆಗೂ ಕಾಯುವ ಬದಲು, ಪರೀಕ್ಷೆಗೆ ಸಾಕಷ್ಟು ಮುಂಚಿತವಾಗಿ ಸರ್ಕಾರ ತೀರ್ಮಾನ ಕೈಗೊಳ್ಳಬಹುದಾಗಿತ್ತು. ಇಲ್ಲವೇ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಪದ್ಧತಿಯನ್ನು ಜಾರಿಗೊಳಿಸಬಹುದಿತ್ತು ಎನ್ನುವುದು ಒಪ್ಪಬಹುದಾದ ಮಾತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗುತ್ತಿರುವ ಮಕ್ಕಳ ದೊಡ್ಡ ಸಂಖ್ಯೆಯನ್ನು ಗಮನಿಸಿದರೆ, ಸರ್ಕಾರದ ನಿರ್ಧಾರ ವಿಳಂಬವಾದರೂ ಸಮಯೋಚಿತ ಎಂದು ಭಾವಿಸಬೇಕಾಗಿದೆ. ಸಾವಿರಾರು ಮಕ್ಕಳು ಅನುತ್ತೀರ್ಣರಾಗುವುದನ್ನು ತಪ್ಪಿಸುವ ನಿರ್ಧಾರಕ್ಕೆ ಶೈಕ್ಷಣಿಕ, ಸಾಮಾಜಿಕ ಮಹತ್ವವಿದೆ. ಹಿಂದಿ ಭಾಷೆಯು ರಾಷ್ಟ್ರೀಯ ಏಕತೆಗೆ ಪೂರಕ ಎನ್ನುವ ಮಾತಿನಲ್ಲಿಯೂ ಅರ್ಧ ಸತ್ಯವಷ್ಟೇ ಇದೆ. ಹಿಂದಿಯಷ್ಟೇ ಎಲ್ಲಾ ಭಾರತೀಯ ಭಾಷೆಗಳೂ ಏಕತೆಗೆ ಪೂರಕವೇ. ಆದರೆ, ರಾಷ್ಟ್ರೀಯ ಸಂದರ್ಭದಲ್ಲಿ ಹಿಂದಿಯನ್ನು ಹೊರತುಪಡಿಸಿ ಕನ್ನಡವೂ ಸೇರಿದಂತೆ ಯಾವ ಭಾರತೀಯ ಭಾಷೆಯ ಪ್ರಸ್ತಾಪವೂ ಆಗುವುದಿಲ್ಲ. ಸ್ಥಳೀಯ ಭಾಷೆಗಳ ಮೇಲೆ ಪ್ರಾಬಲ್ಯ ಸಾಧಿಸುವ ಉದ್ದೇಶದ ಹಿಂದಿ ಹೇರಿಕೆಯು ರಾಜಕೀಯ ಹುನ್ನಾರದ ರೂಪದಲ್ಲಿ ದಶಕಗಳಿಂದಲೂ ವ್ಯವಸ್ಥಿತವಾಗಿ ನಡೆಯುತ್ತಿದೆ. ಹಾಗಾಗಿ, ಭಾಷಾ ದಬ್ಬಾಳಿಕೆಯ ಪ್ರತಿರೋಧದ ಕ್ರಮವಾಗಿಯೂ ಹಿಂದಿ ಭಾಷಾ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರುವ ನಿರ್ಧಾರವನ್ನು ಗಮನಿಸಬಹುದಾಗಿದೆ. ಆದರೆ, ಕನ್ನಡದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಗಮನಿಸಿದರೆ, ತೃತೀಯ ಭಾಷೆಯ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರುವ ನಿರ್ಧಾರ ಸಮಸ್ಯಾತ್ಮಕವೂ ಹೌದು. ಪ್ರಸ್ತುತ ಔಪಚಾರಿಕವಾಗಿಯಷ್ಟೇ ತೃತೀಯ ಭಾಷೆಯ ರೂಪದಲ್ಲಿ ಕನ್ನಡವನ್ನು ಉಳಿಸಿಕೊಂಡಿರುವ ಖಾಸಗಿ ಶಾಲೆಗಳು. ಇನ್ನುಮುಂದೆ ಕನ್ನಡವನ್ನು ಮತ್ತಷ್ಟು ನಿರ್ಲಕ್ಷಿಸುವ ಸಾಧ್ಯತೆಯಿದೆ. ಹಾಗಾದಲ್ಲಿ, ಕನ್ನಡದ ಮಕ್ಕಳನ್ನು ಕನ್ನಡದಿಂದ ದೂರವಾಗಲು ಅವಕಾಶ ಕಲ್ಪಿಸಿದಂತಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ, ಮುಂದಿನ ಶೈಕ್ಷಣಿಕ ವರ್ಷದಿಂದ ಭಾಷಾನೀತಿಯನ್ನು ಸರ್ಕಾರ ಪರಿಷ್ಕರಿಸುವುದು ಅಗತ್ಯ. ತೃತೀಯ ಭಾಷೆಯ ಬದಲು, ಪ್ರಥಮ ಇಲ್ಲವೇ ದ್ವಿತೀಯ ಭಾಷೆಯನ್ನಾಗಿ ಕನ್ನಡ ಕಲಿಯುವುದನ್ನು ಸರ್ಕಾರ ಕಡ್ಡಾಯಗೊಳಿಸಬೇಕಾಗಿದೆ. ಅದಾಗದೆ ಹೋದರೆ, ಕನ್ನಡದ ಹಿತಾಸಕ್ತಿಯ ಹೆಸರಿನ ಪ್ರಯತ್ನ ಕನ್ನಡವನ್ನೇ ಬಡವಾಗಿಸಲು ಕಾರಣವಾಗಬಹುದು.

> **ಹಿಂದಿ ವಿಷಯದಲ್ಲಿನ ಅಂಕಗಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶಕ್ಕೆ ಪರಿಗಣಿಸದಿರುವ ಸರ್ಕಾರದ ನಿರ್ಧಾರ ಸಮಯೋಚಿತ. ಇದರಿಂದ ಲಕ್ಷಾಂತರ ಗ್ರಾಮೀಣ ಮಕ್ಕಳಿಗೆ ಅನುಕೂಲ ಆಗಲಿದೆ.**

# ರಾಮಾಯಣ



## ಸಂಪಾತಿಯು ಸೀತಾದೇವಿಯಿರುವ ಸ್ಥಳವನ್ನು ಅಂಗದನಿಗೆ ಹೇಳಿದ್ದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಆಬಳಿಕ ಗಂಭೀರಧ್ವನಿಯುಳ್ಳ ಸಂಪಾತಿಯು ಆ ಕಪಿನಾಯಕರ ದೈನ್ಯವನ್ನು ಕಂಡು ಮನಕರಗಿ ಕಣ್ಣೀರು ತುಂಬಲು ಅವರನ್ನು ಕುರಿತು ಪ್ರೀತಿವಚನಗಳನ್ನು ನುಡಿಯುತ್ತ ಹೀಗೆಂದನು: ಎಲೈ ಕಪಿನಾಯಕರುಗಳಿರಾ, ನನ್ನ ತಮ್ಮನಾದ ಜಟಾಯುವು ರಾವಣನೊಡನೆ ಯುದ್ಧವನ್ನು ಮಾಡಿ ಶರೀರವನ್ನು ಬಿಟ್ಟನೆಂಬ ಸುದ್ದಿಯನ್ನು ಕೇಳಿದೆನು. ಈಗ ಆತನನ್ನು ಕೊಂದ ವೈರಿಯಾದ ರಾವಣನನ್ನು ಕೊಲ್ಲುವುದಕ್ಕೆ ನನ್ನ ಗರಿ ಸೀದಿರುವುದರಿಂದಲೂ ನನ್ನ ವೃದ್ಧಾಪ್ಯದಿಂದಲೂ ಶಕ್ತಿಯಿಲ್ಲದೆ ಸುಮ್ಮನೆ ಇರಬೇಕಾಗಿದೆ. ಜಟಾಯುವೂ ನಾನೂ ಅಣ್ಣತಮ್ಮಂದಿರು. ನಾವು ಒಬ್ಬರನ್ನೊಬ್ಬರು ಅತಿಶಯಿಸ ಬೇಕೆಂಬ ಪಂಥದಿಂದ ಮೇಲಕ್ಕೆ ಹೋಗುತ್ತ ನಮ್ಮ ರೆಕ್ಕೆಗಳಿಂದ ಆಕಾಶಮಂಡಲವನ್ನು ವ್ಯಾಪಿಸಿ ಕೊಂಡು ಸೂರ್ಯಮಂಡಲಕ್ಕೆ ಹಾರಿಹೋದೆವು. ಮಧ್ಯಾಹ್ನ ಸಮಯವಾಗಲು ಸೂರ್ಯಕಿರಣ ಗಳಿಂದ ನನ್ನ ತಮ್ಮನಾದ ಜಟಾಯುವು ಸೀದುಹೋಗುವನೆಂಬ ಭಯದಿಂದ ನಮ್ಮ ಸ್ನೇಹಭಾವ ವನ್ನು ನೆನೆದು ನಾನು ಜಟಾಯುವಿಗೆ ಮೇಲುಭಾಗದಲ್ಲಿ ಸೂರ್ಯಕಿರಣಗಳು ಆತನ ಮೇಲೆ ಬೀಳದಹಾಗೆ ಮರೆಯಾಗಿ ನಿಂತೆನು, ಅದರಿಂದಾಗಿ ದಹಿಸಲ್ಪಟ್ಟು ಗರಿಸೀದು ಈ ವಿಂಧ್ಯಪರ್ವತದಲ್ಲಿ ಬಿದ್ದೆನು. ಅದುಮೊದಲಾಗಿ ನಾನು ಈ ವಿಂಧ್ಯಪರ್ವತದಲ್ಲೇ ಇದ್ದು ಯಾವ ದಿಕ್ಕಿಗೂ ಹೋಗಲಾರದೆ ಜಟಾಯುವಿನ ವೃತ್ತಾಂತವನ್ನರಿಯದಿರುವೆನು ಎಂದು ನುಡಿದನು. ಆ ಮಾತನ್ನು ಕೇಳಿ ಅಂಗದನು ಸಂಪಾತಿಯನ್ನು ಕುರಿತು ಸಂವಾತಿ ನೀನು ಬಹುಕಾಲದಿಂದ ಅರಿಯದಿದ್ದ ಜಟಾಯುವಿನ ವೃತ್ತಾಂತವನ್ನು ನಾನು ಹೇಳಿದೆನಾದ್ದರಿಂದ ನೀನು ರಾವಣನಿರುವ ಸ್ಥಳವನ್ನು ತಿಳಿದಿದ್ದರೆ ಹೇಳು ರಾಕ್ಷಸಾಧಮನಾದ ರಾವಣನು ಅವಿವೇಕದಿಂದ ಸೀತಾದೇವಿಯನ್ನು ಆಪಹರಿಸಿಕೊಂಡು ಹೋದನು. ಆತನಿರುವ ಸ್ಥಾನವು ಇಲ್ಲಿಗೆ ಸಮೀಪವೊ ದೂರವೊ ಹೇಳು ಎಂದು ಕೇಳಿದನು. ಮಹಾತ್ಮನಾದ ಸಂಪಾತಿಯು ಆ ಕಪಿನಾಯಕರಿಗೆ ಸಂತೋಷಹುಟ್ಟುವಹಾಗೆ ತಾನರಿತವರೆಗೂ ರಾವಣನಿರುವ ಸ್ಥಳವನ್ನು ಹೇಳಬೇಕೆಂದೆಣಿಸಿ ಅಂಗದಾದಿಗಳನ್ನು ಕುರಿತು ಇಂತೆಂದನು : ಎಲೈ ಕಪಿನಾಯಕರುಗಳಿರಾ, ನಾನು ವಚನಮಾತ್ರದಿಂದಲಾದರೂ ಶ್ರೀರಾಮನಿಗೆ ಪ್ರಿಯೋಪಕಾರವನ್ನು ಮಾಡುತ್ತೇನೆ. ನಾನು ಈ ಉದಕದಲ್ಲಿರುವ ವರುಣಲೋಕವನ್ನು ಬಲ್ಲೆನು. ವಾಮನಾವತಾರ ಮಾಡಿದ ಪರಮಪುರುಷನು ಬಲಿಚಕ್ರವರ್ತಿಯಿಂದ ಭೂದಾನವನ್ನು ಪಡೆದು ಭೂಮಿಯನ್ನಳೆಯುವುದ ಕ್ಕಾಗಿ ತ್ರಿವಿಕ್ರಮನಾಗಿ ಅಡಿಯಿಟ್ಟ ಮೂರುಪಾದಗಳನ್ನೂ ನೋಡಿದೆನು. ದೇವಾಸುರರು ಸಮುದ್ರ ಮಂಥನವನ್ನು ಮಾಡಿ ಅಮೃತವನ್ನು ತೆಗೆದದ್ದನ್ನೂ ಕಂಡಿದ್ದೇನೆ. ಶ್ರೀರಾಮನ ಕಾರ್ಯಕ್ಕೆ ನೆರವಾಗುವುದು ನನ್ನ ಕರ್ತವ್ಯ. ನನಗೆ ವೃದ್ಧಾಪ್ಯದಿಂದ ತನುಕಾಂತಿಗುಂದಿ ಪ್ರಾಣಗಳು ಶಿಥಿಲ ವಾಗಿವೆ. ರಾವಣನು ಎತ್ತಿಕೊಂಡು ಹೋಗುತ್ತಿದ್ದಾಗ ರೂವಲಾವಣ್ಯವತಿಯಾಗಿ ಸರ್ವಾಭರಣಭೂಷಿತೆಯಾಗಿ ನವಯೌವನ ಕೋಮಲಾಂಗಿಯಾದ ಒಬ್ಬ ಸ್ತ್ರೀಯು ‘ ಹಾ ರಾಮಾ ಹಾ ಲಕ್ಷ್ಮಣಾ’ ಎಂದು ಮೊರೆಯಿಡುತ್ತ ಹೋಗುತ್ತಿದ್ದುದ್ದನ್ನು ನಾನು ಕಂಡೆನು. ಆ ದೇವಿಯು ಮೈ ಮುರಿದು ಕಾಲುಗಳನ್ನು ನೀಡಿ ತನ್ನ ಆಭರಣಗಳನ್ನು ಈಡಾಡುತ್ತಿರಲು ಆಕೆಯು ಉಟ್ಟಿದ್ದ ಪೀತಾಂಬರದ ಸೆರಗು ಪರ್ವತಾಗ್ರದಲ್ಲಿರುವ ಸೂರ್ಯಪ್ರಭೆಯಂತೆ ಕಾಣುತಿತ್ತು. ಆ ದೇವಿಯು ಕಾರ್ಮುಗಿಲುಗಳೊಡ್ಡುಗಳಲ್ಲಿ ಅಂತರಿಕ್ಷಮಾರ್ಗದಲ್ಲೊಪ್ಪುತ್ತಿರುವ ಮಿಂಚಿನಂತೆ ಕಪ್ಪಾದ ರಾವಣನ ಸಮೀಪದಲ್ಲಿ ಕಾಣುತ್ತಿದ್ದಳು. ರಾಮಾ ರಾಮಾ ಎಂದು ಮೊರೆಯಿಡುತ್ತಿದ್ದುದರಿಂದ ಆಕೆಯೇ ಸೀತಾದೇವಿಯಾಗಿರಬೇಕು. ಎಲೈ ಕೃಷಿನಾಯಕರುಗಳಿರಾ, ರಾವಣನಿರುವ ಸ್ಥಾನವನ್ನು ಹೇಳುತ್ತೇನೆ ಕೇಳಿ.

ಮುಂದುವರಿಯುವುದು...

# ಇಂದಿನ ಪರಿಸ್ಥಿತಿ ಬದಲಾವಣೆಯ ದಾರಿಯಲ್ಲಿ ಸಮಾಜ

ಇಂದಿನ ಜಗತ್ತು ವೇಗವಾಗಿ ಬದಲಾಗುತ್ತಿದೆ. ತಂತ್ರಜ್ಞಾನ, ಆರ್ಥಿಕತೆ, ಶಿಕ್ಷಣ ಮತ್ತು ಸಾಮಾಜಿಕ ಜೀವನ all these fields are evolving at an unprecedented pace. ಈ ಬದಲಾವಣೆಗಳು ಮಾನವನ ಜೀವನಶೈಲಿಯನ್ನು ಸುಲಭಗೊಳಿಸಿದರೂ, ಹೊಸ ಸವಾಲುಗಳನ್ನೂ ಎದುರು ಮಾಡಿಸುತ್ತಿವೆ. ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ, ನಾವು ಪ್ರಗತಿಯೊಂದಿಗೆ ಕೆಲವು ಪ್ರಮುಖ ಸಮಸ್ಯೆಗಳನ್ನೂ ಗಮನಿಸಬೇಕಾಗಿದೆ. ಮೊದಲು, ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯನ್ನು ನೋಡಿದರೆ, ಮೊಬೈಲ್, ಇಂಟರ್ನೆಟ್ ಸಾಮಾಜಿಕ ಜಾಲತಾಣಗಳು ನಮ್ಮ ದಿನನಿತ್ಯದ ಬದುಕಿನ ಅವಿಭಾಜ್ಯ ಭಾಗವಾಗಿವೆ. ಇವು ಮಾಹಿತಿಯನ್ನು ಕ್ಷಣಾರ್ಧದಲ್ಲಿ ತಲುಪಿಸುವುದರಿಂದ ಜ್ಞಾನವೃದ್ಧಿಗೆ ಸಹಕಾರಿ ಆಗಿವೆ. ಆದರೆ, ಇದರಿಂದ ಮಾನವ ಸಂಬಂಧಗಳಲ್ಲಿ ದೂರವುಂಟಾಗುತ್ತಿದೆ. ಕುಟುಂಬದ ಸದಸ್ಯರು ಒಂದೇ ಮನೆಗೆ ಸೇರಿಕೊಂಡಿದ್ದರೂ, ಮನಸ್ಸುಗಳಿಂದ ದೂರವಾಗುತ್ತಿರುವುದು ನೋವುಂಟುಮಾಡುವ ಸಂಗತಿಯಾಗಿದೆ. ಆರ್ಥಿಕವಾಗಿ ದೇಶವು ಬೆಳವಣಿಗೆ ಕಂಡರೂ, ಬೆಲೆ ಏರಿಕೆ ಜನಸಾಮಾನ್ಯರ ಬದುಕಿಗೆ ಹೊರೆ ತಂದಿದೆ. ದಿನಸಿ ಸಾಮಗ್ರಿಗಳ ಬೆಲೆ ಏರಿಕೆಯಿಂದ ಮಧ್ಯಮ ವರ್ಗದ ಜನರು ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಉದ್ಯೋಗದ ಅಭಾವವೂ ಒಂದು ದೊಡ್ಡ ಸಮಸ್ಯೆಯಾಗಿದ್ದು, ಯುವಕರು ತಮ್ಮ ಭವಿಷ್ಯದ ಬಗ್ಗೆ ಆತಂಕದಲ್ಲಿದ್ದಾರೆ. ಪದವೀಧರರಾದರೂ ತಕ್ಕ ಉದ್ಯೋಗ ಸಿಗದಿರುವುದು, ಪ್ರತಿಭೆಯ ವ್ಯರ್ಥತೆಗೆ ಕಾರಣವಾಗಿದೆ.




ಶಿಕ್ಷಣ ಕ್ಷೇತ್ರದಲ್ಲೂ ಮಹತ್ವದ ಬದಲಾವಣೆಗಳು ಕಂಡು ಬರುತ್ತಿವೆ. ಆನ್‌ಲೈನ್ ಶಿಕ್ಷಣವು ವಿದ್ಯಾರ್ಥಿಗಳಿಗೆ ಸುಲಭವಾದ ಮಾರ್ಗ ಒದಗಿಸಿದರೂ, ಅದರ ಪರಿಣಾಮವಾಗಿ ಮಕ್ಕಳಲ್ಲಿ ಏಕಾಗ್ರತೆ ಕಡಿಮೆಯಾಗುತ್ತಿದೆ. ಮೌಲ್ಯಾಧಾರಿತ ಶಿಕ್ಷಣದ ಕೊರತೆ, ಸಮಾಜದಲ್ಲಿ ನೈತಿಕ ಮೌಲ್ಯಗಳ ಕುಸಿತಕ್ಕೆ ಕಾರಣವಾಗುತ್ತಿದೆ. ಶಿಕ್ಷಣವು ಕೇವಲ ಅಂಕಗಳಿಗೆ ಸೀಮಿತವಾಗದೆ, ವ್ಯಕ್ತಿತ್ವ ವಿಕಾಸಕ್ಕೂ ಒತ್ತು ನೀಡಬೇಕು.

ಸಾಮಾಜಿಕವಾಗಿ ನೋಡಿದರೆ, ಜನರಲ್ಲಿ ಸಹಾನುಭೂತಿ ಮತ್ತು ಪರಸ್ಪರ ಗೌರವದ ಕೊರತೆ ಹೆಚ್ಚುತ್ತಿದೆ.

ಸಣ್ಣ ವಿಷಯಗಳಿಗೂ ದೊಡ್ಡ ವಿವಾದಗಳು ಉಂಟಾಗುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಹಿತಿ ಹರಡುವುದರಿಂದ ಸಮಾಜದಲ್ಲಿ ಗೊಂದಲ ಹೆಚ್ಚುತ್ತಿದೆ. ಈ ಹಿನ್ನೆಲೆಗಳಲ್ಲಿ, ಜವಾಬ್ದಾರಿಯುತ ನಾಗರಿಕರಾಗಿ ವರ್ತಿಸುವುದು ಅವಶ್ಯಕವಾಗಿದೆ. ಪರಿಸರದ ಸ್ಥಿತಿಯೂ ಚಿಂತಾಜನಕವಾಗಿದೆ. ಅರಣ್ಯ ನಾಶ, ಮಾಲಿನ್ಯ ಮತ್ತು ಹವಾಮಾನ ಬದಲಾವಣೆಗಳು ಭೂಮಿಯ ಭವಿಷ್ಯಕ್ಕೆ ದೊಡ್ಡ ಬೆದರಿಕೆಯಾಗಿವೆ. ಇತ್ತೀಚಿನ ವರ್ಷಗಳಲ್ಲಿ ಅನಿಯಂತ್ರಿತ ಮಳೆ, ಬಿಸಿಲಿನ ತೀವ್ರತೆ ಮತ್ತು ಪ್ರಕೃತಿ ವಿಕೋಪಗಳು ಹೆಚ್ಚಾಗುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂಬ ಅರಿವು ಬೆಳೆಸಿಕೊಳ್ಳಬೇಕು.

ಈ ಎಲ್ಲಾ ಸವಾಲುಗಳ ನಡುವೆಯೂ, ಇಂದಿನ ಪರಿಸ್ಥಿತಿಯಲ್ಲಿ ಉತ್ತಮವಾದ ಅಂಶಗಳೂ ಇವೆ. ಯುವಜನತೆ ಹೊಸ ಆವಿಷ್ಕಾರಗಳ ಮೂಲಕ ಸಮಾಜದ ಅಭಿವೃದ್ಧಿಗೆ ಕೈಜೋಡಿಸುತ್ತಿದ್ದಾರೆ. ಸ್ಟಾರ್ಟ್‌ಅಪ್ ಸಂಸ್ಕೃತಿ ಬೆಳೆಯುತ್ತಿರುವುದು, ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿದ್ದಾರೆ. ಒಟ್ಟಾರೆ, ಇಂದಿನ ಪರಿಸ್ಥಿತಿ ಅವಕಾಶಗಳು ಮತ್ತು ಸವಾಲುಗಳ ಸಮನ್ವಯವಾಗಿದೆ.

ನಾವು ಬದಲಾವಣೆಯನ್ನು ಸ್ವೀಕರಿಸುವುದರ ಜೊತೆಗೆ, ನಮ್ಮ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು. ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು, ಸಮಾಜದ ಒಗ್ಗಟ್ಟು ಮತ್ತು ಅಭಿವೃದ್ಧಿಗೆ ಕೈಜೋಡಿಸಿದರೆ, ಉತ್ತಮ ಭವಿಷ್ಯವನ್ನು ನಿರ್ಮಿಸಬಹುದು. ಅಂತಿಮವಾಗಿ, ಪ್ರತಿಯೊಬ್ಬ ನಾಗರಿಕನು ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದಾಗ ಮಾತ್ರ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ಸಾಧ್ಯ. ಇಂದಿನ ಪರಿಸ್ಥಿತಿಯನ್ನು ಅರಿತು, ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಕಾಲದ ಅಗತ್ಯವಾಗಿದೆ.



• ಉದಯವಾಹಿನಿ, ವಿಶೇಷ
ವಿಶ್ವಾಸ್.ಡಿ.ಗೌಡ

ಮಾರುಕಟ್ಟೆಯಲ್ಲಿ ದೊರೆಯುವ ರಾಸಾಯನಿಕ ಉತ್ಪನ್ನಗಳ ಬದಲಾಗಿ ಮನೆಯಲ್ಲಿ ಸಿಗುವ ಕೆಲವೊಂದು ನೈಸರ್ಗಿಕ ಪದಾರ್ಥಗಳನ್ನು ಬಳಸಿಕೊಂಡು ನಾವೇ ಬಹಳ ಸುಲಭವಾಗಿ ಬಾಡಿ ಸ್ಕ್ರಬ್‌ಗಳನ್ನು ಮಾಡಿಕೊಳ್ಳಬಹುದು. ಇವು ದೇಹಕ್ಕೆ ನೈಸರ್ಗಿಕವಾಗಿ ಸ್ಕಬ್ ಮಾಡುವುದರ ಜೊತೆಗೆ ಡೆಡ್ ಸ್ಕಿನ್ ಕೋಶಗಳನ್ನು ತೆಗೆದು ಹಾಕುವಲ್ಲಿ ನೆರವಿಗೆ ಬರುತ್ತದೆ ಹಾಗೂ ತ್ವಚೆಯನ್ನು ಮಾಯಿಶ್ಚರೈಸ್ ಮಾಡುತ್ತದೆ

# ಮನೆಯಲ್ಲೇ ನೈಸರ್ಗಿಕ ಪದಾರ್ಥಗಳನ್ನು ಬಳಸಿ ಬಾಡಿ ಸ್ಕ್ರಬ್ ಮಾಡುವ ವಿಧಾನ

ಪ್ರಸ್ತುತ ಮಾರುಕಟ್ಟೆಯಲ್ಲಿ ಉತ್ತಮ ಗುಣಮಟ್ಟದ ಅಂದರೆ ನೈಸರ್ಗಿಕವಾಗಿ ಸಿಗುವ ಫೇಸ್ ವಾಶ್, ಬಾಡಿ ಸ್ಕ್ರಬ್‌ಗಳು ಖರೀದಿಸಲು ಹೋದ್ರೆ ತುಂಬಾನೇ ದುಬಾರಿಯಾಗಿರುತ್ತವೆ, ಅದರಲ್ಲೂ ನೈಸರ್ಗಿವಾಗಿ ಸಿಗುವ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಖರೀದಿಸಲು ಹೋದರೆ ದುಬಾರಿ ಬೆಲೆ ವ್ಯಯಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ನೋಡುವುದಕ್ಕೆ ಹೋದರೆ, ಮನೆಯಲ್ಲಿಯೇ ನೈಸರ್ಗಿಕ ಪದಾರ್ಥಗಳನ್ನು ಬಳಸಿ ಬಾಡಿ ಸ್ಕಬ್ ತಯಾರಿಸಿ ಕೊಂಡು, ಚರ್ಮದ ಕಾಂತಿಯನ್ನು ಹೆಚ್ಚಿಸಿಕೊಳ್ಳಬಹುದು. ಪ್ರಸ್ತುತ ಮನೆಯಲ್ಲಿಯೇ ಮಾಡಿಕೊಳ್ಳ ಬಹುದಾದ ನೈಸರ್ಗಿಕ ಬಾಡಿ ಸ್ಕಬ್‌ಗಳ ಬಗ್ಗೆ ನೋಡೋಣ

**ಅಧ್ಯಾಯನದ ಪ್ರಕಾರ:** ಚರ್ಮದ ಮೇಲ್ಭಾಗದಲ್ಲಿರುವ ಡೆಡ್ ಸ್ಕಿನ್ ತೆಗೆದುಹಾಕಲು, ರಕ್ತ ಪರಿಚಲನೆಯನ್ನು ಹೆಚ್ಚಿಸಲು ಮತ್ತು ಚರ್ಮದ ಕಾಂತಿಯನ್ನು ಹೆಚ್ಚಿಸಲು ನೆರವಿಗೆ ಬರುತ್ತದೆ. ಹೀಗಾಗಿ ನೈಸರ್ಗಿಕ ಸಾಮಾಗ್ರಿಗಳಿಂದ ಮಾಡುವ ಬಾಡಿ ಸ್ಕಬ್‌ಗಳನ್ನು ನಿಯಮಿತ ಬಳಕೆಯು ಚರ್ಮದ ಟೋನ್ ಅನ್ನು ಸುಧಾರಿಸುತ್ತದೆ, ಸೌಮ್ಯವಾದ ಕಲೆಗಳನ್ನು ಕಡಿಮೆ ಮಾಡುತ್ತದೆ, ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತವೆ.

## ಬಾಡಿ ಸ್ಕ್ರಬ್ ಮಾಡಲು ಬೇಕಾಗುವ ಸಾಮಾಗ್ರಿಗಳು

- ಒಂದು ಚಮಚ ಸಕ್ಕರೆ
- ಒಂದು ಚಮಚ ತೆಂಗಿನಕಾಯಿ ಪುಡಿ
- ಒಂದು ಚಮಚ ತೆಂಗಿನ ಎಣ್ಣೆ
- ಒಂದು ಚಮಚ ಬಾಡಿ ವಾಶ್
- ಒಂದು ಚಮಚ ಕಾಫಿ ಪುಡಿ
- ಸ್ವಲ್ಪ ನಿಂಬೆ ಸಿಪ್ಪೆಯ ಪುಡಿ
- ಕಾಫಿ ಪುಡಿ

**ಬಾಡಿ ಸ್ಕ್ರಬ್ ಮಾಡುವುದು ಹೇಗೆ?:** ಬಾಡಿ ಸ್ಕ್ರಬ್ ಮಾಡಲು, ಮೇಲೆ ತಿಳಿಸಿದ ಎಲ್ಲಾ ಪದಾರ್ಥಗಳನ್ನು ಒಂದು ಬೌಲ್ ನಲ್ಲಿ ಮಿಶ್ರಣ ಮಾಡಿ. ಈಗ ನಿಮ್ಮ ನೈಸರ್ಗಿಕವಾಗಿ ತಯಾರಿಸಿದ ಬಾಡಿ ಸ್ಕ್ರಬ್ ಸಿದ್ಧವಾಗಿದೆ.

**ಇದನ್ನು ಹೇಗೆ ಬಳಸುವುದು?:** ಸ್ನಾನ ಮಾಡುವಾಗ ದೇಹದ ಮೇಲೆ ಹಚ್ಚಿ. ವಿಶೇಷವಾಗಿ ಮೊಣಕೈಗಳು, ಮೊಣಕಾಲುಗಳು ಮತ್ತು ಕುತ್ತಿಗೆಯ ಮೇಲೆ ವೃತ್ತಾ ಕಾರದ ಚಲನೆಗಳಲ್ಲಿ ಮಸಾಜ್ ಮಾಡಿ ಎರಡು ನಿಮಿಷಗಳ ನಂತರ ಸ್ನಾನ ಮಾಡಿ.

**ಮನೆಯಲ್ಲಿ ತಯಾರಿಸಿದ ಬಾಡಿ ಸ್ಕ್ರಬ್‌ನ ಪ್ರಯೋಜನಗಳ ಬಗ್ಗೆ ನೋಡುವುದಾದರೆ:** ಚರ್ಮದ ಮೇಲ್ಮೈಯಲ್ಲಿರುವ ಡೆಡ್ ಸ್ಕಿನ್ ಅಂದರೆ ಹೆಚ್ಚುವರಿ ಎಣ್ಣೆ, ಕಲ್ಮಶಗಳನ್ನು ತೆಗೆದುಹಾಕಿ, ತ್ವಚೆಯನ್ನು ನಯವಾಗಿ ಮತ್ತು ಹೊಳೆಯುವಂತೆ ಮಾಡಲು ಸಹಾಯ ಮಾಡುತ್ತದೆಚರ್ಮವು ಮೃದುವಾಗುತ್ತದೆ.

**ಚರ್ಮವನ್ನು ಹೈಡ್ರೀಕರಿಸುತ್ತದೆ:** ಚರ್ಮವು ತಾಜಾವಾಗಿ ಕಾಣುತ್ತದೆ

## ಈ ವಿಷಯಗಳನ್ನು ನೆನಪಿನಲ್ಲಿಡಿ

- ವಾರಕ್ಕೆ ಎರಡು ಬಾರಿ ಮಾತ್ರ ಬಳಸಿ
- ತುಂಬಾ ಗಟ್ಟಿಯಾಗಿ ಉಜ್ಜಬೇಡಿ
- ಬಳಸುವ ಮೊದಲು ಪ್ಯಾಚ್ ಪರೀಕ್ಷೆ ಮಾಡಿ
- ಯಾವಾಗಲೂ ತಾಜಾ ಬಾಡಿ ಸ್ಕ್ರಬ್ ಮಾಡಿ
- ಸಂಗ್ರಹಿಸಬೇಡಿ
- ನಿಮಗೆ ಯಾವುದೇ ಸಮಸ್ಯೆ ಇದ್ದರೆ, ತಕ್ಷಣ ತಜ್ಞರನ್ನು ಸಂಪರ್ಕಿಸಿ.

## ನೈಸರ್ಗಿಕ ಬಾಡಿ ಸ್ಕ್ರಬ್‌ಗಳನ್ನು ಬಳಸುವುದರಿಂದಾಗುವ ಪ್ರಮುಖ ಪ್ರಯೋಜನ ಗಳು ಇಲ್ಲಿವೆ

**ಹೊಳಪಿನ ತ್ವಚೆಗೆ ಸಹಕಾರಿ:** ಸಕ್ಕರೆ ಅಥವಾ ಕಾಫಿ ಪುಡಿ, ತೆಂಗಿನ ಎಣ್ಣೆ, ನಿಂಬೆರಸ ಅಥವಾ ನಿಂಬೆ ಸಿಪ್ಪೆಯ ಪುಡಿ, ಹೀಗ ಹಲವಾರು ನೈಸರ್ಗಿಕ ಸಾಮಾಗ್ರಿಗಳನ್ನು ಬಳಸಿ ಮಾಡುವ ನೈಸರ್ಗಿಕ ಸ್ಕಬ್‌ಗಳು, ಡೆಡ್ ಸ್ಕಿನ್ ಕೋಶಗಳನ್ನು ಕಡಿಮೆ ಮಾಡುವುದರ ಜೊತೆಗೆ, ಮಂದತೆಯನ್ನು ನಿವಾರಿಸಿ, ಆರೋಗ್ಯಕರ, ಕಾಂತಿಯುತ ಮತ್ತು ಯೌವನಯುಕ್ತ ಚರ್ಮವನ್ನು ಪಡೆಯುವಲ್ಲಿ ನೆರವಿಗೆ ಬರುತ್ತದೆ.

**ಚರ್ಮದ ವಿನ್ಯಾಸವನ್ನು ಸುಧಾರಿಸುತ್ತದೆ:** ಚರ್ಮವನ್ನು ಮೃದು, ಕಾಂತಿಯುತ, ತೇವಾಂಶದಿಂದ ಕೂಡಿರುವಂತೆ, ವಿಶೇಷವಾಗಿ ಮೊಣಕೈಗಳು, ಮೊಣ ಕಾಲುಗಳು, ಹಿಮ್ಮಡಿಯಂತಹ ಒರಟು ಪ್ರದೇಶಗಳಲ್ಲಿ. ಚರ್ಮಕ್ಕೆ ಸ್ಕ್ರಬ್ ಅನ್ನು ಮಸಾಜ್ ಮಾಡುವ ದೈಹಿಕ ಕ್ರಿಯೆಯು ರಕ್ತದ ಹರಿವನ್ನು ಹೆಚ್ಚಿಸುತ್ತದೆ, ಇದು ಕಾಲಜನ್ ಉತ್ಪಾದನೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ, ದೃಢವಾದ, ಆರೋಗ್ಯಕರವಾಗಿ ಕಾಣುವ ಚರ್ಮವನ್ನು ಪ್ರೋತ್ಸಾಹಿ ಸುತ್ತದೆ.



ಈ ನೈಸರ್ಗಿಕ ಸ್ಕಬ್‌ಗಳು ಪ್ರಯೋಜನಕಾರಿ ಆಗಿದ್ದರೂ, ಅತಿಯಾದ ಸಿಪ್ಪೆಸುಲಿ ಯುವಿಕೆ ಮತ್ತು ಹಾನಿಗೊಳಗಾದ ಚರ್ಮದ ತಡೆಗೋಡೆಯನ್ನು ಸರಿಪಡಿಸಲು ನೈಸರ್ಗಿಕ ಸ್ಕಬ್‌ಗಳನ್ನು ಮಿತವಾಗಿ ಬಳಸಬೇಕು, ಸಾಮಾನ್ಯವಾಗಿ ವಾರಕ್ಕೆ 1–2 ಬಾರಿ ಎಂದು PubMed ಅಧ್ಯಯನಗಳು ಸೂಚಿಸುತ್ತವೆ.

# ಶುದ್ಧ ತುಪ್ಪವನ್ನು ಪತ್ತೆಹಚ್ಚೋದು ಹೇಗೆ?

ಭಾರತೀಯ ಅಡುಗೆಮನೆಗಳಲ್ಲಿ ತುಪ್ಪವು ಪ್ರಧಾನ ವಸ್ತುವಾಗಿದೆ. ತುಪ್ಪವನ್ನು ಹಲವು ವಿಧಗಳಲ್ಲಿ ಬಳಸಲಾಗುತ್ತದೆ. ಸಿಹಿ ತಿಂಡಿಗಳು ಸೇರಿದಂತೆ ಯಾವುದೇ ರೀತಿಯ ಅಡುಗೆಗೆ ರುಚಿಯನ್ನು ನೀಡಲು ಸಹಾಯ ಮಾಡುತ್ತದೆ. ಆರೋಗ್ಯಕರ ಕೊಬ್ಬುಗಳು, ಎ, ಡಿ, ಇ ಮತ್ತು ಕೆ ನಂತಹ ಕೊಬ್ಬು–ಕರಗಬಲ್ಲ ಜೀವಸತ್ವಗಳು ಮತ್ತು ಬ್ಯುಟರಿಕ್ ಆಮ್ಲದಂತಹ ಸಂಯುಕ್ತಗಳಿಂದ ತುಂಬಿರುವ ತುಪ್ಪವು ಜೀರ್ಣಕ್ರಿಯೆಯನ್ನು ಬೆಂಬಲಿಸುತ್ತದೆ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ನಿರಂತರ ಶಕ್ತಿಯನ್ನು ಒದಗಿಸುತ್ತದೆ.

**ಶುದ್ಧತೆಯನ್ನು ಪರಿಶೀಲಿಸಲು ಸ್ಮಾರ್ಟ್ ತಂತ್ರಗಳು:** ಮಾರುಕಟ್ಟೆಯು ಈಗ ಕಲಬೆರಕೆ ತುಪ್ಪದಿಂದ ತುಂಬಿದೆ, ಅಲ್ಲಿ ಅಗ್ಗದ ಎಣ್ಣೆಗಳು, ವನಸ್ಪತಿ ಅಥವಾ ಪ್ರಾಣಿಗಳ ಕೊಬ್ಬನ್ನು ಬೆರೆಸಲಾಗುತ್ತದೆ. ಅವು ಕಲಬೆರಕೆ ರುಚಿ ಮತ್ತು ಸುವಾಸನೆಯನ್ನು ಮಾತ್ರವಲ್ಲದೆ ಆರೋಗ್ಯದ ಅಪಾಯಗಳನ್ನು ಸಹ ಉಂಟುಮಾಡಬಹುದು. ಆದ್ದರಿಂದ, ವಿಶ್ವಾಸಾರ್ಹ ಬ್ರ್ಯಾಂಡ್‌ಗಳಿಂದ ತುಪ್ಪವನ್ನು ಪಡೆಯುವುದು ಅಥವಾ ಅದನ್ನು ಸೇವಿಸುವ ಮೊದಲು ಅದರ ಶುದ್ಧತೆಯನ್ನು ಪರಿಶೀಲಿಸಲು ಸ್ಮಾರ್ಟ್ ತಂತ್ರಗಳು, ಸಲಹೆಗಳನ್ನು ಬಳಸುವುದು ಅತ್ಯಗತ್ಯವಾಗುತ್ತದೆ. FSSAI ಅಂತಹ ಸಲಹೆಗಳನ್ನು ಹಂಚಿಕೊಳ್ಳುತ್ತಲೇ ಇದೆ ಮತ್ತು ಎಕ್ಸ್ ನಲ್ಲಿನ ಇತ್ತೀಚಿನ ಪೋಸ್ಟ್‌ನಲ್ಲಿ, ಅವರು ಮನೆಯಲ್ಲಿ ಬಳಸಬಹುದಾದ ಸಕ್ಕರೆ ಮತ್ತು ಹೈಲುರಾನಿಕ್ ಆಮ್ಲ ಪರೀಕ್ಷೆಯನ್ನು ಹಂಚಿಕೊಂಡಿದ್ದಾರೆ.

**ತುಪ್ಪದ ಶುದ್ಧತೆಯನ್ನು ಹೇಗೆ ಪರಿಶೀಲಿಸುವುದು:** ತುಪ್ಪ, ಇತರ ಖಾದ್ಯ ವಸ್ತುಗಳ ಕಲಬೆರಕೆ ಸಾಕಷ್ಟು ಸಾಮಾನ್ಯವಾಗಿದೆ, ಜನರು ಆಹಾರವನ್ನು ಖರೀದಿಸುವಾಗ ಹೆಚ್ಚುವರಿ ಕಾಳಜಿ ವಹಿಸುವುದು ಮುಖ್ಯ. ತುಪ್ಪವನ್ನು ಖರೀದಿಸುವಾಗ ನಕಲಿ ತುಪ್ಪವನ್ನು ಗುರುತಿಸಲು ಅನುಸರಿಸಬಹುದಾದ ಕೆಲವು ಸಲಹೆಗಳು, ತಂತ್ರಗಳು ಇಲ್ಲಿವೆ.



**ಗೋಚರತೆ, ವಿನ್ಯಾಸ:** ಸಾಂಪ್ರದಾಯಿಕವಾಗಿ, ಅದರ ಶುದ್ಧ ರೂಪದಲ್ಲಿ ತುಪ್ಪವು ಚಿನ್ನದ ಬಣ್ಣ, ಶ್ರೀಮಂತ ಮತ್ತು ಕೆನೆ ಬಣ್ಣದ ವಿನ್ಯಾಸವನ್ನು ಹೊಂದಿರುತ್ತದೆ. ಬೆಳಕಿಗೆ ವಿರುದ್ಧವಾಗಿ ಹಿಡಿದಿಟ್ಟುಕೊಂಡಾಗ ಅದು ಅರೆಪಾರದರ್ಶಕ ಮತ್ತು ಸ್ಪಷ್ಟವಾಗಿ ಗೋಚರಿಸಬೇಕು. ತುಪ್ಪದ ಮಸುಕಾದ ಬಣ್ಣವು ಸಂರಕ್ಷಕಗಳನ್ನು ಸೂಚಿಸುತ್ತದೆ ಅಂತಹವನ್ನು ತಪ್ಪಿಸಬೇಕು.

**ಪ್ಯಾಕೇಜಿಂಗ್ ಮತ್ತು ಲೇಬಲ್:** ತುಪ್ಪ ಉತ್ಪನ್ನಗಳ ಪ್ಯಾಕೇಜಿಂಗ್, ಲೇಬಲ್‌ಗೆ ವಿಶೇಷ ಗಮನ ಕೊಡುವುದು ಮುಖ್ಯ. ನಿಜವಾದ ತುಪ್ಪದ ಬ್ರ್ಯಾಂಡ್ ಅದರ ಮೇಲೆ ನಿಯಂತ್ರಣ ಅನುಸರಣೆಯ ಎಲ್ಲಾ ಪ್ರಮುಖ ಪ್ರಮಾಣಪತ್ರಗಳನ್ನು ಹೊಂದಿರುತ್ತದೆ. ತುಪ್ಪವನ್ನು ಖರೀದಿಸುವ ಮೊದಲು ಪರವಾನಗಿ ಸಂಖ್ಯೆ, ಪ್ಯಾಕೇಜಿಂಗ್ ದಿನಾಂಕ, ಮುಕ್ತಾಯವನ್ನು ಸಂಪೂರ್ಣವಾಗಿ ಪರಿಶೀಲಿಸಬೇಕು.

**ಸುವಾಸನೆ:** ಸ್ವಾಭಾವಿಕವಾಗಿ, ತುಪ್ಪವು ಅಡಿಕೆ ಪರಿಮಳ ಮತ್ತು ಮೃದುವಾದ ಸ್ಥಿರತೆಯನ್ನು ಹೊಂದಿರುತ್ತದೆ. ತುಪ್ಪವು ಹೆಚ್ಚಿನ ತಾಪನ ಬಿಂದುವನ್ನು ಹೊಂದಿರುವುದರಿಂದ ಅದು ಎಂದಿಗೂ ಸುಟ್ಟ ವಾಸನೆಯನ್ನು ಹೊಂದಿರಬಾರದು. ಸುಟ್ಟ ವಾಸನೆಯು ನೀರು ಅಥವಾ ಸೇರ್ಪಡೆಗಳ ಉಪಸ್ಥಿತಿಯಿಂದಾಗಿರಬಹುದು. ಆದ್ದರಿಂದ ಅಂತಹ ತುಪ್ಪವನ್ನು ತಪ್ಪಿಸಬೇಕು.

**ಶುದ್ಧತೆ ಪರೀಕ್ಷೆಗಳು ಅನುಸರಿಸಬೇಕು:** ಮೇಲೆ ತಿಳಿಸಿದ ಮಾನದಂಡಗಳನ್ನು ಬಳಸಿಕೊಂಡು ತುಪ್ಪವನ್ನು ಖರೀದಿಸುವ ಮೊದಲು ನಿರ್ಣಯಿಸಬಹುದಾದರೂ, ನೀವು ಸೇವಿಸುತ್ತಿರುವ ತುಪ್ಪವು ಪ್ರಯೋಜನಕಾರಿಯಾಗಿದೆ ಎಂದು ಖಚಿತಪಡಿಸಿಕೊಳ್ಳಲು ಇತರ ಮಾರ್ಗಗಳಿವೆ. ಅಂಗೈ ಪರೀಕ್ಷೆ ಸರಳವಾಗಿ, ನಿಮ್ಮ ಅಂಗೈಯ ಮೇಲೆ ಹೆಪ್ಪುಗಟ್ಟಿದ ತುಪ್ಪವನ್ನು ಸುರಿಯಿರಿ, ಅದು ತಕ್ಷಣ ಕರಗಲು ಪ್ರಾರಂಭಿಸಿದರೆ ತುಪ್ಪವು ಶುದ್ಧವಾಗಿರುತ್ತದೆ. ಇಲ್ಲದಿದ್ದರೆ ಅದು ಶುದ್ಧವಾಗಿಲ್ಲ ಎಂದರ್ಥ. ಅಂತಹ ತುಪ್ಪವನ್ನು ತಪ್ಪಿಸಬೇಕು.

# ಎಲ್ಲರನ್ನು ದಡ ಸೇರಿಸಿದ ದೋಣಿ ತಾನು ಮಾತ್ರ ದಡದಲ್ಲಿಯೇ ಉಳಿಯಿತು...!

ನದಿಯ ಎದೆಯ ಮೇಲೆ ನೂರಾರು ಪಯಣಿಗರನ್ನು ಹೊತ್ತು, ಅಲೆಗಳ ಅಬ್ಬರಕ್ಕೆ ಎದೆಯೊಡ್ಡಿ, ಸುರಕ್ಷಿತವಾಗಿ ದಡ ಸೇರಿಸುವ ದೋಣಿಯ ಬದುಕು ಅದೆಷ್ಟು ಸಾರ್ಥಕ ಮತ್ತು ಅಷ್ಟೇ ಕರುಣಾಜನಕ. ದಡ ಮುಟ್ಟಿದ ಪಯಣಿಗರು ಹಕ್ಕಿಗಳಂತೆ ಹಾರಿಹೋಗುತ್ತಾರೆ, ಆದರೆ ಆ ದೋಣಿ ಮಾತ್ರ ಮೌನವಾಗಿ ದಡದಲ್ಲಿಯೇ ಏಕಾಂಗಿಯಾಗಿ ಉಳಿಯುತ್ತದೆ. ಇಂದಿನ ನಾಗರಿಕ ಸಮಾಜದಲ್ಲಿ ಎಲ್ಲರ ಬದುಕು ಹೀಗಿಲ್ಲದಿದ್ದರೂ, ದುರದೃಷ್ಟವಶಾತ್ ಕೆಲವು ಹೆತ್ತವರ ಸ್ಥಿತಿಯೂ ಈ ಹಳೆಯ ದೋಣಿಯಂತೆಯೇ ಮೌನ ರೋದನೆಯಲ್ಲಿ ಮುಳುಗಿರುವುದು ಸುಳ್ಳಲ್ಲ. ಹೆತ್ತವರ ಬದುಕು ಕೇವಲ ಉಸಿರಾಟದ ಅಂಕಿ–ಅಂಶವಲ್ಲ ಅದೊಂದು ನಿರಂತರ ತ್ಯಾಗದ ಯಜ್ಞ. ತಂದೆ ತನ್ನ ಬೆವರಿನ ಹನಿಗಳಿಂದ ಮಕ್ಕಳ ಭವಿಷ್ಯದ ಬಣ್ಣಗಳನ್ನು ಅಂಟಿಸಿದರೆ, ತಾಯಿ ತನ್ನ ರಕ್ತವನ್ನೇ ಹಾಲಾಗಿಸಿ ಮಗುವನ್ನು ಸಲಹುತ್ತಾಳೆ. ಹರಿದ ಹಳೆಯ ಉಡುಪುಗಳನ್ನು ತೊಟ್ಟು, ಮಗನಿಗೆ ಹೊಸ ಬಟ್ಟೆ ಕೊಡಿಸಿದ ತಂದೆಯ ನೋವು ಆ ಮಗನಿಗೆ ತಿಳಿದಿರಲು ಸಾಧ್ಯವೇ? ಮಗುವಿನ ಶಿಕ್ಷಣಕ್ಕಾಗಿ ಏಣಿಯಂತೆ ನಿಂತ ಹೆತ್ತವರು, ಇಂದು ಮಕ್ಕಳು ಯಶಸ್ಸಿನ ಸೌಧವನ್ನೇರಿ ಸಂಭ್ರಮಿಸುವಾಗ ಅದೇ ಕಟ್ಟಡದ ಹೊರಗಿನ ಮೌನ ವೀಕ್ಷಕರಾಗಿರುವುದು ಇಂದಿನ ಕೆಲವು ಸಂಸಾರಗಳ ಕಟುವಾಸ್ತವ. ಇಂದು ಸಾವಿರಾರು ಪ್ರತಿಭೆಗಳು ಕಡಲಾಚೆಯ ದಡಗಳಲ್ಲಿ ತಮ್ಮ ಕನಸಿನ ಅರಮನೆಗಳನ್ನು ಕಟ್ಟಿಕೊಂಡಿದ್ದಾರೆ. ವೃತ್ತಿ ಬದುಕಿನ ಅನಿವಾರ್ಯತೆಗಳು ಅವರನ್ನು ದೂರ ಕರೆದೊಯ್ಯಬಹುದು. ಅವರು ಗಳಿಸುವ ಸಂಪತ್ತು ಹೆತ್ತವರ ಬ್ಯಾಂಕ್ ಖಾತೆಯನ್ನು ತುಂಬಿಸಬಹುದು, ಆದರೆ ಅವರ ಹೃದಯದ ಶೂನ್ಯತೆಯನ್ನು ತುಂಬಲು ಸಾಧ್ಯವಿಲ್ಲ. ಕೋಟಿ ರೂಪಾಯಿ ಬೆಲೆಬಾಳುವ ಹವಾನಿಯಂತ್ರಿತ ಬಂಗಲೆಗಳಲ್ಲಿರುವ ವೃದ್ಧ ದಂಪತಿಗಳಿಗೆ, ಮೊಬೈಲ್ ಪರದೆಯ ಮೇಲೆ ಬರುವ ಮಗನ ಮುಖ ಅವರ ಏಕಾಂತಕ್ಕೆ ತಾತ್ಕಾಲಿಕ ಮುಲಾಮಾಗಬಹುದೇ ಹೊರತು, ಮಗನ ನೇರ ಸ್ಪರ್ಶದ ಆಸರೆಯನ್ನಂತೂ ನೀಡಲಾರವು. ಸಮಾಜದ ಒಂದು ವರ್ಗ ಇಂದಿಗೂ ಹೆತ್ತವರನ್ನು ದೈವದಂತೆ ಪೂಜಿಸುತ್ತಿದ್ದರೆ, ಇನ್ನೊಂದು ವರ್ಗವು ಜೀವನದ ಸಂಧ್ಯಾಕಾಲದಲ್ಲಿ ಅವರನ್ನು ಅನಾಥಾಶ್ರಮದ ಕಿಟಕಿಯ ಮೂಲಕ ಶೂನ್ಯವನ್ನು ದಿಟ್ಟಿಸುವಂತೆ ಮಾಡಿದೆ. ನನ್ನ ಮಗ ದೊಡ್ಡ ಅಧಿಕಾರಿಯಾಗಿದ್ದಾನೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಾಗಲೂ, ಅವರ ಕಣ್ಣಿನ ಮೂಲೆಯಲ್ಲಿ ಹನಿಗೂಡುವ ಕಣ್ಣೀರು ಅವರ ಒಳಮನಸ್ಸಿನ ನರಳಾಟವನ್ನು ಸಾರಿ ಹೇಳುತ್ತದೆ. ಕೆಲವು ಸಂದರ್ಭಗಳಲ್ಲಿ ರಕ್ತಸಂಬಂಧಗಳು ಇಂದು ಭಾವನೆಗಳ ಸೇತುವೆಯಾಗುವ ಬದಲು, ಕೇವಲ ವ್ಯವಹಾರದ ರಸ್ತೆಯಾಗುತ್ತಿರುವುದು ವಿಷಾದನೀಯ.



ಆಧುನಿಕ ಬದುಕು ಅದೆಂತಹ ಅಮಾನವೀಯ ಘಟ್ಟಕ್ಕೆ ತಲುಪಿದೆ ಎಂದರೆ, ಜನ್ಮ ನೀಡಿದ ತಂದೆ–ತಾಯಿ ಮಣ್ಣಾಗುವಾಗ ಕನಿಷ್ಠ ಅವರ ಪಾದಸ್ಪರ್ಶ ಮಾಡುವ ಭಾಗ್ಯವೂ ಇಲ್ಲದೆ, ‘ವಿಡಿಯೋ ಕಾಲ್’ನಲ್ಲಿ ಅಂತಿಮ ದರ್ಶನ ಪಡೆಯುವ ಅನಿವಾರ್ಯತೆ ಸೃಷ್ಟಿಯಾಗಿದೆ. ದೂರದ ಊರು ಅಥವಾ ದೇಶದಲ್ಲಿದ್ದೇವೆ ಎಂಬ ಕಾರಣವೋ ಅಥವಾ ಸಮಯದ ಅಭಾವವೋ, ಒಟ್ಟಿನಲ್ಲಿ ಜನ್ಮ ನೀಡಿದ ಜೀವವೊಂದು ಪಂಚಭೂತಗಳಲ್ಲಿ ಲೀನವಾಗುವಾಗ ಮಗನ ಹೆಗಲ ಆಸರೆಯೂ ಇಲ್ಲದ ಈ ಬದುಕು ಅದೆಷ್ಟು ಶೂನ್ಯ. ಬದುಕು ಅನಿವಾರ್ಯತೆಗಳ ನಡುವೆ ಸಾಗಬಹುದು, ವೃತ್ತಿಯ ಪಯಣ ನಮ್ಮನ್ನು ಎಲ್ಲಿಗೋ ಕರೆದೊಯ್ಯಬಹುದು. ಆದರೆ, ದಡ ಸೇರಿಸಿದ ದೋಣಿಯನ್ನು ದಡದಲ್ಲಿಯೇ ಅಸಹಾಯಕವಾಗಿ ಬಿಟ್ಟು ಹೋಗುವುದು ನಮ್ಮ ಸಂಸ್ಕಾರವಲ್ಲ. ಅನಾಥಾಶ್ರಮಗಳು ಹೆಚ್ಚುತ್ತಿವೆ ಎಂದರೆ ನಮ್ಮ ಸಮಾಜದ ನೈತಿಕ ಬೇರುಗಳು ಸಡಿಲವಾಗುತ್ತಿವೆ ಎಂದರ್ಥ. ಯಶಸ್ಸಿನ ಶಿಖರ ಏರಿದ ಮೇಲೆ ಕೆಳಗೆ ನಿಂತಿರುವ ಹೆತ್ತವರನ್ನು ಮರೆಯಬಾರದು. ಏಕೆಂದರೆ, ನಾವು ಇಂದು ಯಾವುದನ್ನು ‘ಸಕ್ಸಸ್’ ಎಂದು ಸಂಭ್ರಮಿಸುತ್ತಿದ್ದೇವೆಯೋ, ಆ ಕಟ್ಟಡದ ಅಡಿಪಾಯದ ಕಲ್ಲುಗಳೇ ಅವರು. ಎಲ್ಲರ ಬದುಕು ಹೀಗಿಲ್ಲದಿದ್ದರೂ, ಅನಾಥರಾಗುತ್ತಿರುವ ಕೆಲವು ಪೋಷಕರ ಸ್ಥಿತಿ ಕಂಡು ನಾವು ಮರುಗಬೇಕಿದೆ. ನಾವು ಇಂದು ನಮ್ಮ ಹೆತ್ತವರಿಗೆ ಯಾವ ದಾರಿಯನ್ನು ತೋರಿಸುತ್ತೇವೆಯೋ, ನಾಳೆ ನಮ್ಮ ಮಕ್ಕಳೂ ಅದೇ ದಾರಿಯಲ್ಲಿ ನಮ್ಮನ್ನು ನಡೆಸುತ್ತಾರೆ ಎಂಬ ಎಚ್ಚರ ಪ್ರತಿಯೊಬ್ಬರಲ್ಲೂ ಇರಲಿ. ಕೇವಲ ಇದೊಂದು ಉದಯ ವಾಹಿನಿ ಪತ್ರಿಕೆಯಲ್ಲಿನ ಲೇಖನವಾಗಿ ಉಳಿಯದೆ ನಿಮ್ಮೆಲ್ಲರ ಹೃದಯವಾಹಿನಿಯಾಗಿ ಮಾರ್ಪಟ್ಟು ಪೋಷಕರೊಡನೆ ಇನ್ನಾದರೂ ಸಂತೋಷದಿಂದಿರಿ.



• ಉದಯವಾಹಿನಿ, ವಿಶೇಷ
-ಡಾ.ಸುಧಾಕರ.ಜಿ.ಲಕ್ಕವಳ್ಳಿ.

● ಉನ್ನತ ನಾಯಕರ ಹತ್ಯೆಗೆ ಬಳಸಿದ ಇನ್ಸೈಡ್ ನೆಟ್‌ವರ್ಕ್ ರಹಸ್ಯ ಬಯಲು!

# ಇರಾನ್ ಒಳಗೆ ಇಸ್ರೇಲ್‌ನ ಸೀಕ್ರೆಟ್ ಆರ್ಮಿ

**ಟೆಲ್ ಅವಿವ್:** ಮಧ್ಯಪ್ರಾಚ್ಯದ ಯುದ್ಧಭೂಮಿಯಲ್ಲಿ ಅಮೆರಿಕ ಮತ್ತು ಇಸ್ರೇಲ್ ಒಟ್ಟಾಗಿದ್ದರೆ, ಇರಾನ್ ಏಕಾಂಗಿಯಾಗಿ ಹೋರಾಡುತ್ತಿದೆ. ನೇರ ಯುದ್ಧದಲ್ಲಿ ಈ ರಾಷ್ಟ್ರಗಳು ಪರಸ್ಪರರನ್ನು ಹೊಡೆಯುತ್ತಿದ್ದರೂ, ಪರೋಕ್ಷ ಯುದ್ಧದಲ್ಲಿ ಇರಾನ್ ತನ್ನ ಉನ್ನತ ನಾಯಕರನ್ನು ಒಬ್ಬೊಬ್ಬರನ್ನಾಗಿ ಕಳೆದುಕೊಳ್ಳುತ್ತಿದೆ. ಕಳೆದ ಫೆ.28ರಂದು ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆಯಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಸುಮಾರು ಡಜನ್‌ಗಟ್ಟಲೇ ಇರಾನಿಯನ್ ನಾಯಕರು ಹತ್ಯೆಗೀಡಾಗಿದ್ದಾರೆ. ಎಲ್ಲರನ್ನೂ ಇಸ್ರೇಲ್ ಅತ್ಯಂತ ರಹಸ್ಯವಾಗಿ ಹೊಡೆದು ಹಾಕಿದ್ದು, ಇರನ್ ನೆಲದಲ್ಲಿ ಇಸ್ರೇಲ್ ಗುಪ್ತಚರರು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ತಿಳಿಯದಾಗಿದೆ.

### ಎಐ ತಂತ್ರಜ್ಞಾನ ಬಳಸಿ ಖಮೇನಿ ಹತ್ಯೆ

**ಫೆಬ್ರವರಿ 28 ರಂದು ಇರಾನ್‌ನ ಸುಪ್ರೀಂ ಲೀಡರ್ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಇಸ್ರೇಲ್ ಎಐ ತಂತ್ರಜ್ಞಾನ ಬಳಕೆ ಮಾಡಿತ್ತು. ಮೊದಲಿಗೆ ಇರಾನ್‌ನ ಬೀದಿ ಕ್ಯಾಮೆರಾಗಳ ದೃಶ್ಯಗಳನ್ನು ವಿಶ್ಲೇಷಿಸಿದ ಇಸ್ರೇಲ್, ಖಮೇನಿ ಅವರ ಚಲನವಲನಗಳನ್ನು ನಿಖರವಾಗಿ ಟ್ರ್ಯಾಕ್ ಮಾಡಿತ್ತು. ಇರಾನ್‌ನ ಹಿರಿಯ ರಾಜಕಾರಣಿಯೊಬ್ಬರು ಕಳೆದ ವರ್ಷವೇ ನಮ್ಮ ಕ್ಯಾಮೆರಾಗಳನ್ನು ಇಸ್ರೇಲ್ ಹ್ಯಾಕ್ ಮಾಡಿದೆ, ಇದು ರಾಷ್ಟ್ರೀಯ ಭದ್ರತೆಗೆ ಕುತ್ತು ತರಲಿದೆ ಎಂದು ಬಹಿರಂಗವಾಗಿ ಎಚ್ಚರಿಸಿದ್ದರು. ಆದರೆ ಇದರಿಂದ ಎಚ್ಚೆತ್ತುಕೊಳ್ಳದ ಇರಾನ್, ಇಂದು ಡಜನ್ ಗಟ್ಟಲೇ ನಾಯಕರನ್ನು ಕಳೆದುಕೊಂಡಿದೆ.**

ಇರಾನ್‌ನ ಈ ಘಟಾನುಘಟಿ ನಾಯಕರ ನಿಖರ ಲೊಕೇಶನ್ ಇಸ್ರೇಲ್‌ಗೆ ಸಿಗುತ್ತಿರುವುದಾದರೂ ಹೇಗೆ? ಇರಾನ್‌ನ ಭದ್ರತಾ ಕೋಟೆಯನ್ನು ಇಸ್ರೇಲ್ ಗುಪ್ತಚರರು ಹೇಗೆ ಭೇದಿಸುತ್ತಿದ್ದಾರೆ? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೋದರೆ, ಇನ್ಸೈಡ್ ನೆಟ್‌ವರ್ಕ್ ಎಂಬ ರೋಚಕ ಸತ್ಯವೊಂದು ಬಯಲಾಗುತ್ತದೆ. ಇರಾನ್ ಒಳಗೆ ಇಸ್ರೇಲ್ ನಡೆಸುತ್ತಿರುವ ಈ ನೆರಳು ಯುದ್ಧದ (Shadow War) ಅಸಲಿ ರಹಸ್ಯ ಇನ್ನೂ ರೋಚಕವಾಗಿದೆ. ಇರಾನ್ ನೆಲದಲ್ಲಿ ಕೆಲಸ ಮಾಡುತ್ತಿರುವ ಇಸ್ರೇಲ್‌ನ ಸಿಕ್ರೇಟ್ ಏಜೆಂಟರ ಲೈಫ್ ನಿಜಕ್ಕೂ ರಿಸ್ಕ್‌ನಲ್ಲಿದೆ. ಆದಾಗ್ಯೂ, ಅವರು ಎಲ್ಲಾ ರಿಸ್ಕ್‌ಗಳನ್ನು ತೆಗೆದುಕೊಂಡು ತಮ್ಮ ಗುರಿಯನ್ನು ತಲುಪುತ್ತಿದ್ದಾರೆ.

ಕಳೆದ ನಾಲ್ಕು ವಾರಗಳಿಗೂ ಅಧಿಕ ಕಾಲದಿಂದ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಮುಗಿಬಿದ್ದಿವೆ. ಆದರೆ ಈ ಯುದ್ಧ ಕೇವಲ ಯುದ್ಧವಿಮಾನಗಳು ಮತ್ತು ಬ್ಯಾಲಿಸ್ಟಿಕ್ ಕ್ಷಿಪಣಿಗಳಿಗೆ ಸೀಮಿತವಾಗಿಲ್ಲ. ಇಸ್ರೇಲ್ ತನ್ನ ನಿಜವಾದ ಯುದ್ಧವನ್ನು ನಡೆಸುತ್ತಿರುವುದು ಗುಪ್ತಚರ ಕಾರ್ಯಾಚರಣೆಗಳ ಮೂಲಕ. ದಶಕಗಳಿಂದ ಇರಾನ್ ಮತ್ತು ಇಸ್ರೇಲ್ ನಡುವೆ ನಡೆಯುತ್ತಿದ್ದ ಪ್ರಾಕ್ಸಿ ವಾರ್, ಈಗ ನೇರ ಯುದ್ಧಕ್ಕೆ ತಿರುಗಿದೆ. ಆದರೆ ಇಸ್ರೇಲ್‌ಗೆ ಇರಾನ್ ಮೇಲೆ ಮೇಲುಗೈ ಸಾಧಿಸಲು ಸಾಧ್ಯವಾಗುತ್ತಿರುವುದೇ ಅದರ ಅತ್ಯಂತ ಬಲಿಷ್ಠವಾದ ಗೂಢಚಾರಿ ನೆಟ್‌ವರ್ಕ್‌ನಿಂದ. ಆಯತೊಲ್ಲಾ ಖಮೇನಿ ಹತ್ಯೆಗೆ ಮೊಸಾದ್ ವರ್ಷಗಳ ಯೋಜನೆ ಹೆಣೆದಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಇಸ್ರೇಲ್‌ನ ಈ ಕರಾರುವಕ್ಕಾದ ದಾಳಿಗಳು, ಇರಾನ್‌ನ ಭದ್ರತಾ ವ್ಯವಸ್ಥೆಯಲ್ಲಿರುವ ಬೃಹತ್ ಲೋಪವನ್ನು ಜಗತ್ತಿನೆದುರು ಬೆತ್ತಲು ಮಾಡಿವೆ. ಇರಾನ್‌ನ ಸೇನೆ ಮತ್ತು ರಾಜಕೀಯ ವಲಯದ ಉನ್ನತ ಹುದ್ದೆಗಳಲ್ಲಿರುವವರೇ ಇಸ್ರೇಲ್‌ಗೆ ಮಾಹಿತಿದಾರರಾಗಿ ಕೆಲಸ ಮಾಡುತ್ತಿದ್ದಾರಾ ಎಂಬ ಅನುಮಾನ ದಟ್ಟವಾಗಿದೆ.



ಇಸ್ರೇಲ್‌ನ ಗುಪ್ತಚರ ಜಾಲ ಇರಾನ್‌ನ ಒಳಗೆ ಎಷ್ಟು ಆಳವಾಗಿ ಬೇರೂರಿದೆ ಎಂದರೆ, ಇರಾನ್ ನಾಯಕರು ಎಲ್ಲಿಯೇ ಅಡಗಿದ್ದರೂ ಅವರ ಬೆನ್ನಹಿಂದೆ ಸಾವಿನ ರೂಪದಲ್ಲಿ ಇಸ್ರೇಲ್ ಗೂಢಚಾರರು ನಿಂತಿರುತ್ತಾರೆ. ಮೊಸಾದ್ ತನ್ನ ಕಾರ್ಯಾಚರಣೆಗಳಿಗಾಗಿ ಅತ್ಯಾಧುನಿಕ ತಂತ್ರಜ್ಞಾನವನ್ನೂ ಬಳಸುತ್ತಿರುವುದು ಇರಾನ್‌ನ ನಿದ್ದೆಗೆಡಿಸಿದೆ.

ಇರಾನ್ ತನ್ನದೇ ದೇಶದ ಜನರ ಮೇಲೆ ನಿಗಾ ಇಡಲು ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳೇ, ಈಗ ಅದರ ನಾಯಕರ ಪಾಲಿಗೆ ಯಮಪಾಶವಾಗಿ ಪರಿಣಮಿಸಿವೆ. 2021ರಿಂದಲೇ ಇರಾನ್‌ನ ಬೀದಿ ಬೀದಿಗಳಲ್ಲಿ ಅಳವಡಿಸಲಾಗಿದ್ದ ಸಾವಿರಾರು ಕಣ್ಗಾವಲು ಕ್ಯಾಮೆರಾಗಳನ್ನು ಇಸ್ರೇಲ್ ಹ್ಯಾಕ್ ಮಾಡಿತ್ತು. ಜನವರಿಯಲ್ಲಿ ಇರಾನ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಗಳನ್ನು ಹತ್ತಿಕ್ಕಲು, ಇರಾನ್ ಸರ್ಕಾರ ದೇಶಾದ್ಯಂತ ಲಕ್ಷಾಂತರ ಕ್ಯಾಮೆರಾಗಳನ್ನು ಅಳವಡಿಸಿತ್ತು. ಆದರೆ ಇಂಟರ್‌ನೆಟ್‌ಗೆ ಸಂಪರ್ಕಗೊಂಡಿದ್ದ ಈ ಕಳಪೆ ಭದ್ರತೆಯ ಕ್ಯಾಮೆರಾಗಳನ್ನು ಇಸ್ರೇಲ್ ಹ್ಯಾಕ್ ಮಾಡಿ, ತನ್ನದೇ ಕಣ್ಗಾವಲು ಅಸ್ತ್ರವಾಗಿ ಪರಿವರ್ತಿಸಿಕೊಂಡಿದೆ.

### ಇರಾನ್ ಒಳಗೆ ಇಸ್ರೇಲ್ ಗೂಢಚಾರರು

**ಇರಾನ್ ನೆಲದಲ್ಲಿ ಇಸ್ರೇಲ್ ಅಕ್ಷರಶಃ ನೆರಳು ಯುದ್ಧದಲ್ಲಿ ನಿರತವಾಗಿದೆ. ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್ ಕಳೆದ ಹಲವು ವರ್ಷಗಳಿಂದ ಇರಾನ್‌ನ ರಾಜಕೀಯ ಮತ್ತು ಸೇನಾ ಸಂಸ್ಥೆಗಳ ಒಳಗೆ ತನ್ನದೇ ಆದ ಬೃಹತ್ ನೆಟ್‌ವರ್ಕ್‌ನ್ನು ಸೃಷ್ಟಿಸಿದೆ. ತೀರ ಇತ್ತೀಚಿಗೆ ಅಂದರೆ ಕಳೆದ ಮಾ.26ರಂದು ಐಆರ್‌ಜಿಸಿ ನೌಕಾಪಡೆ ಮುಖ್ಯಸ್ಥ ಅಲಿರೆಜಾ ತಂಗ್ಸಿರಿ ಹತ್ಯೆ ಇದಕ್ಕೆ ತಾಜಾ ಉದಾಹರಣೆಯಾಗಿ ಕೊಡಬಹುದು. ರಾಜಧಾನಿ ಟೆಹ್ರಾನ್‌ನಿಂದ ಬರೋಬ್ಬರಿ 1,300 ಕಿ.ಮೀ ದೂರದಲ್ಲಿರುವ ಬಂದರ್ ಅಬ್ಬಾಸ್ ಎಂಬ ನಗರದಲ್ಲಿ ಅಲಿರೆಜಾ ಅಡಗಿ ಕೊಂಡಿದ್ದ. ಹಾರ್ಮುಜ್ ಜಲಸಂಧಿಯ ಕರಾವಳಿಯಲ್ಲಿರುವ ಈತನ ನಿಖರ ಲೊಕೇಶನ್ ಪತ್ತೆಹಚ್ಚಿದ ಮೊಸಾದ್, ಏರ್‌ಸ್ಟ್ರೈಕ್ ಮೂಲಕ ಆತನ ಹತ್ಯೆ ಮಾಡಿದೆ.**

- **ಕೊನೆಯೇ ಇಲ್ಲದ ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಗುಪ್ತಚರ ಕಾರ್ಯಾಚರಣೆಗಳ ಸ್ಫೋಟಕ ರಹಸ್ಯ.**
- **ಇರಾನ್ ಒಳಗೆ ಇಸ್ರೇಲ್ ಗುಪ್ತಚರರು ಹೇಗೆ ಕೆಲಸ ಮಾಡುತ್ತಿದ್ದಾರೆ?**
- **ಇರಾನ್ ಉನ್ನತ ನಾಯಕತ್ವ ಮುಗಿಸುತ್ತಿರುವ ಇಸ್ರೇಲ್‌ನ ಇನ್ಸೈಡ್ ನೆಟ್‌ವರ್ಕ್ ವರ್ಕಿಂಗ್ ಸ್ಟೈಲ್.**

### ಗೂಢಚಾರರ ಬೇಟೆಯಲ್ಲಿ ನಿರತ ಟೆಹ್ರಾನ್

**ಇಸ್ರೇಲ್‌ನ ಈ ಸರಣಿ ಹತ್ಯೆಗಳಿಂದ ಕಂಗಾಲಾಗಿರುವ ಇರಾನ್ ಸರ್ಕಾರ, ಈಗ ತನ್ನದೇ ದೇಶದ ಜನರ ಮೇಲೆ ಮುಗಿಬಿದ್ದಿದೆ. ಇಸ್ರೇಲ್‌ಗೆ ಯಾರೆಲ್ಲಾ ಗುಪ್ತ ಮಾಹಿತಿ ನೀಡುತ್ತಿದ್ದಾರೆ ಎಂಬ ಮಾಹಿತಿ ಕಲೆ ಹಾಕುತ್ತಿರುವ ಮೊಜ್ತಬಾ ಖಮೇನಿ ಸರ್ಕಾರ, ದೇಶದಾದ್ಯಂತ ಭಾರೀ ಕಾರ್ಯಾಚರಣೆಗಳನ್ನು ಶುರು ಮಾಡಿದೆ. 2025ರ ಸೆಪ್ಟೆಂಬರ್‌ನಿಂದ ಇಲ್ಲಿಯವರೆಗೆ, ಇಸ್ರೇಲ್ ಪರ ಗೂಢಚರ್ಯೆ ನಡೆಸಿದ ಆರೋಪದ ಮೇಲೆ ಡಜನ್‌ಗಟ್ಟಲೆ ಜನರಿಗೆ ಇರಾನ್ ಮರಣದಂಡನೆ ವಿಧಿಸಿದೆ. ಸೇನೆ ಮತ್ತು ಸರ್ಕಾರದ ಒಳಗೆ ಇರಬಹುದಾದ ಇಸ್ರೇಲ್ ಏಜೆಂಟರಿಗಾಗಿ ಖಮೇನಿ ಆಡಳಿತ ಹುಡುಕಾಟ ಆರಂಭಿಸಿದೆ.**

ಇತ್ತ ಇಸ್ರೇಲ್ ತನ್ನ ಗುಪ್ತಚರ ಜಾಲದ ಮೂಲಕ ಇರಾನ್‌ಗೆ ನಡುಕ ಹುಟ್ಟಿಸುತ್ತಿದ್ದರೆ, ಅತ್ತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧವನ್ನು ನಿರ್ಣಾಯಕ ಹಂತಕ್ಕೆ ಕೊಂಡೊಯ್ಯಲು ಸಜ್ಜಾಗಿದ್ದಾರೆ. ಕಳೆದ ಕೆಲವು ವಾರಗಳಿಂದ ಇರಾನ್ ಮೇಲಿನ ದಾಳಿಗಳ ಸ್ವರೂಪ ಬದಲಾಗಿದೆ. ಟ್ರಂಪ್ ಈಗ ಯುದ್ಧವನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ, ಇರಾನ್‌ಗೆ ಅಂತಿಮ ಮತ್ತು ಮಾರಣಾಂತಿಕ ಪೆಟ್ಟು ನೀಡಲು ಕಾಯುತ್ತಿದ್ದಾರೆ. ಪರ್ಷಿಯನ್ ಕೊಲ್ಲಿಯಲ್ಲಿ ಹರಡಿಕೊಂಡಿರುವ ನಿರ್ಣಾಯಕ ದ್ವೀಪಗಳ ಮೇಲೆ, ಭೂಸೇನಾ ಕಾರ್ಯಾಚರಣೆ ನಡೆಸುವ ಕುರಿತು ಅಮೆರಿಕ ಅಧ್ಯಕ್ಷರು ಗಂಭೀರವಾಗಿ ಚಿಂತಿಸುತ್ತಿದ್ದಾರೆ.

## ಸಮ್ಮೇಳನಾಧ್ಯಕ್ಷರಾಗಿ ಡಾ. ಸುಬ್ರಮಣಿ (ಪಲ್ಲವಿ ಮಣಿ) ಆಯ್ಕೆ

**ಗೋವಾ:** ಗೋವಾದ ಪಣಜಿಯಲ್ಲಿ ಆಯೋಜಿಸಿರುವ 21ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಸಮ್ಮೇಳನ ಸಮಿತಿಯು ಡಾ. ಎಂ. ಸುಬ್ರಮಣಿ (ಪಲ್ಲವಿ ಮಣಿ) ಅವರು ನಾಡು ನುಡಿಗೆ ನೀಡಿದ ಅನುಪಮ ಕೊಡುಗೆಯನ್ನು ಪರಿಗಣಿಸಿ ಸಮ್ಮೇಳನ ಸಮಿತಿಯು ಸರ್ವಾನು ಮತದಿಂದ ಆಯ್ಕೆ ಮಾಡಿರುತ್ತದೆ.

ಹೃದಯವಾಹಿನಿ ಮಂಗಳೂರು ಮತ್ತು ಗೋವಾ ಕದಂಬ ಪ್ರತಿಷ್ಠಾನ ಪಣಜಿ ಸಂಯುಕ್ತವಾಗಿ ಪಣಜಿಯ ಅಶೋಕ ಪ್ಲಾಜಾ ಸಭಾಂಗಣದಲ್ಲಿ ಇಲ್ಲಿ ಇದೇ ಬರುವ ಏಪ್ರಿಲ್ 12ರಂದು ಒಂದು ದಿನದ 21ನೇ ರಾಷ್ಟ್ರೀಯ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಆಯೋಜಿಸಿರುತ್ತೇವೆ. ಈ ಸಮ್ಮೇಳನವು 2004ರಿಂದ ಆರಂಭವಾಗಿರುತ್ತದೆ.

ಪ್ರತಿವರ್ಷ ವಿವಿಧ ರಾಜ್ಯಗಳ ಕನ್ನಡ ಸಂಘಗಳ ಸಹಯೋಗದೊಂದಿಗೆ ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದೇವೆ. ನವದೆಹಲಿ (2 ಬಾರಿ), ಪಣಜಿ, ವಾಪಿ(ಗುಜರಾತ್), ಸೂರತ್, ಮುಂಬೈ (3 ಬಾರಿ). ಕಾಸರಗೋಡು, ಕೊಚಿನ್ ಮತ್ತು ಬರೋಡಗಳಲ್ಲಿ ಅನುಕ್ರಮವಾಗಿ ಜರುಗಿರುತ್ತವೆ. ಈ ಸಮ್ಮೇಳನದಲ್ಲಿ ಕರ್ನಾಟಕ ಮತ್ತು ವಿವಿಧ ರಾಜ್ಯಗಳ ಕನ್ನಡ ಸಂಘಟಕರು ಕವಿಗಳು, ಕಲಾವಿದರು ಮತ್ತು ಕನ್ನಡಪರ ಚಿಂತಕರು ಪಾಲ್ಗೊಳ್ಳಲಿರುವರು.

**ಸಮ್ಮೇಳನಾಧ್ಯಕ್ಷರ ಪರಿಚಯ:** ಡಾ. ಎಂ. ಸುಬ್ರಮಣಿ ಸಾರ್ಥಕ ಜೀವನ, ನಾಯಕತ್ವ ಮತ್ತು ಸಾಂಸ್ಕೃತಿಕ ಬದ್ಧತೆಯ ಸಾಕಾರ ರೂಪ ಪಲ್ಲವಿ ಮಣಿ (ಪಿ.ಎಂ.)




ಎಂದೇ ಪ್ರೀತಿಯಿಂದ ಕರೆಯಲ್ಪಡುವ ಡಾ. ಎಂ. ಸುಬ್ರಮಣಿ ಅವರು ಎಂ ಎ ಎಲ್ ಎಲ್ ಬಿ ಬೌದ್ಧಿಕ ಪ್ರತಿಭೆ, ನಿಸ್ವಾರ್ಥ ಸೇವೆ, ಸಾಂಸ್ಕೃತಿಕ ಭಕ್ತಿ ಮತ್ತು ದೂರದರ್ಶಿ ನಾಯಕತ್ವದ ಅಪರೂಪದ ಸಂಗಮ. ಇವರು ಮೇ 20, 1956 ರಂದು ಬಂಗಾರಪೇಟೆಯ ಪವಿತ್ರ ಮಣ್ಣಿನಲ್ಲಿ ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ಮುನಿಸ್ವಾಮಿ ದಂಪತಿಗಳ ಸುಪುತ್ರರಾಗಿ ಜನಿಸಿದರು. ಇವರ ಜೀವನದ ಪಯಣವು ಶಿಸ್ತುಬದ್ಧ ಪರಿಶ್ರಮ ಮತ್ತು ಸಮಾಜದ ಏಳಿಗೆಗಾಗಿ ಇರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ. ಬಾಲ್ಯದಿಂದಲೂ ಜ್ಞಾನದ ಹಸಿವು ಹೊಂದಿದ್ದ ಇವರ ಶೈಕ್ಷಣಿಕ ಸಾಧನೆ ಅತ್ಯಂತ ಶ್ಲಾಘನೀಯ. ಬೆಂಗಳೂರು ವಿಶ್ವವಿದ್ಯಾಲಯದಿಂದ ಇತಿಹಾಸ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಪೂರೈಸಿದ ಇವರು, ನಂತರ ಕಾನೂನು ಪದವಿಯನ್ನೂ ಪಡೆದರು. ಇವರ ಈ ಸಾಧನೆಗಳು ಕೇವಲ ಇವರ ವಿದ್ವತ್ತನ್ನು ಮಾತ್ರವಲ್ಲದೆ, ನ್ಯಾಯ ಮತ್ತು ಉದ್ದೇಶಪೂರ್ವಕ ಬದುಕಿನ ಮೇಲಿರುವ ಗೌರವವನ್ನೂ ಎತ್ತಿ ತೋರಿಸುತ್ತವೆ.

**ನಾಡು ನುಡಿಗೆ ನೀಡಿದ ಅನುಪಮ ಕೊಡುಗೆ**

ವೃತ್ತಿಜೀವನವನ್ನು ಶಿಕ್ಷಕರಾಗಿ ಆರಂಭಿಸಿದ ಇವರು, ಮುಂದೆ ಸರ್ಕಾರಿ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾಗಿ ಉನ್ನತ ಸೇವೆ ಸಲ್ಲಿಸಿದರು. ಇವರು ಕೇವಲ ಒಬ್ಬ ಶಿಕ್ಷಕರಾಗಿರದೆ, ಅಸಂಖ್ಯಾತ ವಿದ್ಯಾರ್ಥಿನಿಯರ ಜೀವನವನ್ನು ರೂಪಿಸಿದ ಮಾರ್ಗದರ್ಶಕರಾಗಿದ್ದರು. ಇವರ ನಾಯಕತ್ವವು ಪ್ರಗತಿಪರ ಚಿಂತನೆ, ಮಾನವೀಯ ಆಡಳಿತ ಮತ್ತು ವಿದ್ಯಾರ್ಥಿಗಳ ಸಬಲೀಕರಣಕ್ಕೆ ಸದಾ ಮಿಡಿಯುತ್ತಿತ್ತು. ಡಾ. ಸುಬ್ರಮಣಿ ಅವರ ಬದುಕಿನ ಕೇಂದ್ರಬಿಂದುವೇ ಕನ್ನಡ ಮತ್ತು ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಮೇಲಿರುವ ಅತೀವ ಪ್ರೇಮ. ಕಳೆದ ಎರಡು ದಶಕಗಳಿಂದಲೂ, ಯಾವುದೇ ಬಾಹ್ಯ ಆರ್ಥಿಕ ನೆರವಿಲ್ಲದೆ, ತಮ್ಮ ಸಹವರ್ತಿಗಳೊಂದಿಗೆ ಸೇರಿ ಪ್ರತಿ ತಿಂಗಳೂ ಕನ್ನಡ ರಾಜ್ಯೋತ್ಸವವನ್ನು ನಿರಂತರವಾಗಿ ಆಚರಿಸಿಕೊಂಡು ಬರುತ್ತಿರುವುದು ಇವರ ಅತಿ ದೊಡ್ಡ ಸಾಧನೆ. ಇದು ಕೇವಲ ಒಂದು ಸಮಾರಂಭವಲ್ಲ, ಬದಲಿಗೆ ಕನ್ನಡದ ಅಸ್ಮಿತೆಯನ್ನು ಜೀವಂತವಾಗಿರಿಸುವ ಒಂದು ಸಾಂಸ್ಕೃತಿಕ ಚಳುವಳಿಯಾಗಿದೆ.

**ಡಾ. ಸುಬ್ರಮಣಿ ಅವರನ್ನು ಇತರರಿಗಿಂತ ಭಿನ್ನವಾಗಿಸುವುದು ಅವರ ಜೀವನದ ಬಗ್ಗೆ ಇರುವ ಆಳವಾದ ದೃಷ್ಟಿಕೋನ. ಅವರು ನಾಳೆ ಎಂಬ ಪದವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ:**

ನಾಳೆ ಎನ್ನುವುದು ಭರವಸೆಯ ಅನಿಶ್ಚಿತತೆ ಅಥವಾ ಅನಿಶ್ಚಿತತೆಯೊಳಗಿನ ಭರವಸೆ. ಈ ನಂಬಿಕೆಯೊಂದಿಗೆ ಅವರು ವರ್ತಮಾನದ ಕ್ಷಣಗಳನ್ನು ಸಂಪೂರ್ಣವಾಗಿ ಸಾರ್ಥಕಗೊಳಿಸಿಕೊಳ್ಳುತ್ತಾರೆ. ಇವರ ಬದುಕಿನ ಮೂಲಮಂತ್ರ: ಪ್ರತಿ ಬಾರಿ, ಎಲ್ಲ ಸಮಯದಲ್ಲೂ, ನಿಮ್ಮಿಂದ ಸಾಧ್ಯವಾದಷ್ಟು ಉತ್ತಮವಾದುದನ್ನು ಮಾಡಿ.

ಸತ್ಯ ಮತ್ತು ಬದ್ಧತೆಯಿಂದ ಮಾಡಿದ ಕೆಲಸಗಳನ್ನು ಸಮಾಜವು ಎಂದಿಗೂ ಮರೆಯುವುದಿಲ್ಲ ಎಂದು ಅವರು ಬಲವಾಗಿ ನಂಬುತ್ತಾರೆ.

ಇಂದಿಗೂ ಡಾ. ಎಂ. ಸುಬ್ರಮಣಿ ಅವರು ಅನೇಕರಿಗೆ ದಾರಿದೀಪವಾಗಿದ್ದಾರೆ. ಇವರ ಜೀವನದ ಪಯಣವು ಕೇವಲ ವೈಯಕ್ತಿಕ ಸಾಧನೆಗಳ ದಾಖಲೆಯಲ್ಲ; ಬದಲಿಗೆ ಒಬ್ಬ ವ್ಯಕ್ತಿ ತನ್ನ ದೂರದೃಷ್ಟಿ, ಸೇವಾ ಮನೋಭಾವ ಮತ್ತು ಸೋಲೊಪ್ಪದ ಗುಣದಿಂದ ಸಮಾಜವನ್ನು ಹೇಗೆ ಬದಲಿಸಬಹುದು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ.

ಪಲ್ಲವಿ ಮಣಿ ಅವರು ಸಾರ್ಥಕ ಜೀವನದ ಸಂಕೇತವಾಗಿ ಮತ್ತು ಕನ್ನಡದ ಹೆಮ್ಮೆಯ ಧ್ವನಿಯಾಗಿ ಅನೇಕರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

## ಎಲ್‌ಪಿಜಿ ಹೊತ್ತ ಎರಡು ಹಡಗುಗಳು ಭಾರತದತ್ತ

**ನವದೆಹಲಿ:** ಬರೊಬ್ಬರಿ 94,000 ಟನ್‌ಗಳಷ್ಟು ಎಲ್‌ಪಿಜಿ ಸರಕು ಹೊತ್ತ ಎರಡು ಭಾರತೀಯ ಹಡಗುಗಳು ಯುದ್ಧಪೀಡಿತ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ ಎಂದು ತಿಳಿದುಬಂದಿದೆ. ಶೀಘ್ರದಲ್ಲೇ ಈ ಹಡಗುಗಳು ಭಾರತವನ್ನು ಪ್ರವೇಶಿಸುವ ನಿರೀಕ್ಷೆಯಿದೆ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿಕೆ ನೀಡಿದೆ.

ಸುಮಾರು 94 ಸಾವಿರ ಟನ್‌ಗಳಷ್ಟು ಎಲ್‌ಪಿಜಿ ಸರಕು ಟ್ಯಾಂಕರ್‌ಗಳನ್ನು ಹೊತ್ತ 2 ಹಡಗುಗಳು ಹಾರ್ಮುಜ್ ಜಲಸಂಧಿಯನ್ನ ಸುರಕ್ಷಿತವಾಗಿ ದಾಟಿದ್ದು, ಭಾರತದ ತೀರಗಳತ್ತ ಸಾಗಿವೆ. ಒಂದು ಟ್ಯಾಂಕರ್ ಮುಂಬೈಗೆ ತೆರಳುತ್ತಿದ್ದು, ನಾಳೆ ಮುಂಬೈ ಬಂದರಿಗೆ ಬರುವ ನಿರೀಕ್ಷೆಯಿದೆ. ಇನ್ನೊಂದು ಟ್ಯಾಂಕರ್ ಹೊತ್ತ ಹಡಗು ಏಪ್ರಿಲ್ 1 ರಂದು ನವ ಮಂಗಳೂರು ಬಂದರಿಗೆ ಬರುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಎಲ್‌ಎಸ್‌ಇಜಿ ಹಡಗು ಟ್ರ್ಯಾಕಿಂಗ್ ದತ್ತಾಂಶದ ಪ್ರಕಾರ, ಈಗಾಗಲೇ ಭಾರತದ 4 ಟ್ಯಾಂಕರ್‌ಗಳು ಹಾರ್ಮುಜ್ ಜಲಸಂಧಿಯನ್ನ ಸುರಕ್ಷಿತವಾಗಿ ದಾಟಿವೆ. ಇನ್ನೂ 3 ಹಡಗುಗಳು ಜಲಸಂಧಿಯ ಪಶ್ಚಿಮ ವಿಭಾಗದಲ್ಲಿ ಸಿಲುಕಿವೆ ಎನ್ನಲಾಗಿದೆ. ಇರಾನ್ ಮಿತ್ರರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿ ದಾಟಲು ಅವಕಾಶ ನೀಡಿದ ಬೆನ್ನಲ್ಲೇ ಭಾರತೀಯ ಅಧಿಕಾರಿಗಳು ಸಮನ್ವಯ ಸಾಧಿಸಿ, ಒಂದೊಂದೇ ಹಡಗುಗಳನ್ನು ಹೊರತರುವಲ್ಲಿ ಯಶಸ್ವಿಯಾಗುತ್ತಿದ್ದಾರೆ.

## 1 ಕೋಟಿ ಭಾರತೀಯರ ಜೀವಗಳನ್ನು ಅಪಾಯಕ್ಕೆ ಸಿಲುಕಿಸಬೇಕೆಂದು ಕಾಂಗ್ರೆಸ್ ಬಯಸುತ್ತೆ: ಮೋದಿ


**ಪಾಲಕ್ಕಾಡ್:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ನಡುವೆಯೂ ಸಂಘರ್ಷ ವಲಯಗಳಲ್ಲಿ ಭಾರತೀಯರ ಸುರಕ್ಷತೆಗೆ ಕೇಂದ್ರ ಸರ್ಕಾರ ಆದ್ಯತೆ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಪಾಲಕ್ಕಾಡ್‌ನಲ್ಲಿ ನಡೆದ ಚುನಾವಣಾ ಪ್ರಚಾರ ರ್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಭಾರತೀಯ ನಾಗರಿಕರ ಹಿತಾಸಕ್ತಿಗಳನ್ನು ಕಾಪಾಡುವುದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಒತ್ತಿ ಹೇಳಿದರು.

ಈ ವಿಷಯದ ಬಗ್ಗೆ ಅವರು ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡು ಅಪಾಯಕಾರಿ ಹೇಳಿಕೆಗಳನ್ನು ನೀಡುವ ಮೂಲಕ ಸೂಕ್ಷ್ಮ ವಿಷಯವನ್ನು ರಾಜಕೀಯಗೊಳಿಸುತ್ತಿದ್ದಾರೆ ಎಂದು ಆರೋಪಿಸಿದರು. ಗಲ್ಫ್ ದೇಶಗಳಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಭಾರತೀಯರ ಸುರಕ್ಷತೆಯ ನೆಪದಲ್ಲಿ ಕಾಂಗ್ರೆಸ್ ರಾಜಕೀಯ ಲಾಭವನ್ನು ಪಡೆಯಲು ಪ್ರಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು.


ಈಗ ಎಲ್ಲರ ಕಣ್ಣುಗಳು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಮೇಲೆ ಇದೆ. ಈ ಯುದ್ಧದ ಪರಿಣಾಮವನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ನಮ್ಮ ಸರ್ಕಾರ ನಿರಂತರವಾಗಿ ಕೆಲಸ ಮಾಡುತ್ತಿದೆ. ಭಾರತೀಯರ ಹಿತಾಸಕ್ತಿಗಳನ್ನು ರಕ್ಷಿಸುವುದು ಬಿಜೆಪಿ-ಎನ್‌ಡಿಎ ಸರ್ಕಾರಕ್ಕೆ ಅತ್ಯಂತ ಮಹತ್ವದ್ದಾಗಿದೆ. ಈ ಸೂಕ್ಷ್ಮ ವಿಷಯದಲ್ಲಿ ಕಾಂಗ್ರೆಸ್ ಹೇಗೆ ರಾಜಕೀಯ ಮಾಡುತ್ತಿದೆ ಎಂಬುದನ್ನು ನೀವು ನೆನಪಿನಲ್ಲಿಡಬೇಕು ಎಂದಿದ್ದಾರೆ.

ಕಾಂಗ್ರೆಸ್ ನೀಡುತ್ತಿರುವ ಹೇಳಿಕೆಗಳು ಅಪಾಯಕಾರಿ. ಗಲ್ಫ್ ದೇಶಗಳಲ್ಲಿ ವಾಸಿಸುವ ಸುಮಾರು 1 ಕೋಟಿ ಭಾರತೀಯರ ಜೀವಗಳನ್ನು ಅಪಾಯಕ್ಕೆ ಸಿಲುಕಿಸಬೇಕೆಂದು ಕಾಂಗ್ರೆಸ್ ಬಯಸುತ್ತದೆ, ಇದರಿಂದ ಅವರು ರಾಜಕೀಯ ಲಾಭ ಪಡೆಯಬಹುದು ಎಂದು ಪ್ರಧಾನಿ ಮೋದಿ ಹೇಳಿದರು.

ಮಧ್ಯಪ್ರಾಚ್ಯ ಸಂಘರ್ಷಕ್ಕೆ ಸರ್ಕಾರದ ಪ್ರತಿಕ್ರಿಯೆಯನ್ನು ಎತ್ತಿ ತೋರಿಸಿದ ಪ್ರಧಾನಿ, ಭಾರತವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಮತ್ತು ದೇಶದ ಮೇಲೆ ಅದರ ಪರಿಣಾಮವನ್ನು ಕಡಿಮೆ ಮಾಡಲು ಸಕ್ರಿಯವಾಗಿ ಕೆಲಸ ಮಾಡುತ್ತಿದೆ ಎಂದರು.



## ರೂಪಾಯಿ ಪುನಶ್ಚೇತನ : ಡಾಲರ್ ಎದುರು 1.28 ರೂ. ಏರಿಕೆ



**ರೂಪಾಯಿಗೆ ಒತ್ತಡ ತರಲಿದೆ**

**ಭಾರತವು ಪ್ರಮುಖ ತೈಲ ಆಮದುದಾರ ದೇಶವಾಗಿರುವುದರಿಂದ, ತೈಲ ಬೆಲೆ ಏರಿಕೆ ಡಾಲರ್ ಬೇಡಿಕೆಯನ್ನು ಹೆಚ್ಚಿಸಿ ರೂಪಾಯಿಗೆ ಒತ್ತಡ ತರಲಿದೆ ಎಂದು ಪಬಾರಿ ಹೇಳಿದ್ದಾರೆ. ಇದರ ನಡುವೆ, ದೇಶೀಯ ಷೇರು ಮಾರುಕಟ್ಟೆಯಲ್ಲಿ ಸೆನ್ಸೆಕ್ಸ್ 1,191.24 ಅಂಕ ಕುಸಿದು 72,391.98ಕ್ಕೆ ತಲುಪಿದ್ದು, ನಿಫ್ಟಿ 349.45 ಅಂಕ ಇಳಿದು 22,470.15 ಮಟ್ಟದಲ್ಲಿ ವಹಿವಾಟು ನಡೆಸಿತು. ವಿದೇಶಿ ಸಂಸ್ಥಾಗತ ಹೂಡಿಕೆದಾರರು ಒಟ್ಟು ರೂ. 4,367.30 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ವಿನಿಮಯದ ಅಂಕಿಅಂಶಗಳು ತಿಳಿಸಿವೆ.**

**ಮುಂಬೈ:** ಭಾರತೀಯ ರೂಪಾಯಿ ಇಂದು ಆರಂಭಿಕ ವಹಿವಾಟಿನಲ್ಲಿ 128 ಪೈಸೆ ಏರಿಕೆ ಕಂಡು, ಅಮೆರಿಕನ್ ಡಾಲರ್ ಎದುರು 93.57 ಮಟ್ಟಕ್ಕೆ ತಲುಪಿದೆ. ರಿಸರ್ವ್ ಬ್ಯಾಂಕ್ ಕೈಗೊಂಡ ಕೆಲವು ನಿರ್ಧಾರದಿಂದ ರೂಪಾಯಿ ಬಲಗೊಂಡಿದೆ. ವಿದೇಶಿ ವಿನಿಮಯ ವಹಿವಾಟುದಾರರ ಪ್ರಕಾರ, ಸಾಮಾನ್ಯವಾಗಿ ಲಾಂಗ್ ಪೋಸಿಷನ್ ಹೊಂದಿರುವ ಬ್ಯಾಂಕುಗಳು ತಮ್ಮ ಹೂಡಿಕೆಗಳನ್ನು ಕಡಿತಗೊಳಿಸುವ ಸಾಧ್ಯತೆ ಇರುವುದರಿಂದ ರೂಪಾಯಿ ಆರಂಭದಲ್ಲೇ ಬಲವಾಗಿ ತೆರೆದಿದೆ.

2026ರ ಮಾರ್ಚ್ 27ರ ವೃತ್ತಪತ್ರಿಕೆಯ ಮೂಲಕ ರಿಸರ್ವ್ ಬ್ಯಾಂಕ್, ಬ್ಯಾಂಕುಗಳ ನೆಟ್ ಓಪನ್ ಪೋಸಿಷನ್ ಮಿತಿಯನ್ನು 100 ಮಿಲಿಯನ್ ಅಮೆರಿಕನ್ ಡಾಲರ್‌ಗೆ ನಿಗದಿ ಮಾಡಿದ್ದು, ಏಪ್ರಿಲ್ 10ರೊಳಗೆ ಇದನ್ನು ಅನುಸರಿಸಬೇಕೆಂದು ಸೂಚಿಸಿದೆ. ಇಂಟರ್‌ಬ್ಯಾಂಕ್ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ 93.62ರಲ್ಲಿ ಆರಂಭವಾಗಿ, ಬಳಿಕ 93.57ಕ್ಕೆ ಏರಿಕೆಯಾಗಿ, ಹಿಂದಿನ ದಿನಕ್ಕಿಂತ 128 ಪೈಸೆ ಲಾಭ ದಾಖಲಿಸಿದೆ. ಇದಕ್ಕೂ ಮುನ್ನ ರೂಪಾಯಿ 89 ಪೈಸೆ ಕುಸಿದು, 94.85 ಮಟ್ಟದಲ್ಲಿ ಐತಿಹಾಸಿಕ ಕನಿಷ್ಠ ಮಟ್ಟದಲ್ಲಿ ಮುಕ್ತಾಯಗೊಂಡಿತ್ತು. ಬ್ಯಾಂಕುಗಳು ತಮ್ಮ ಹೂಡಿಕೆಗಳನ್ನು ಸರಿಹೊಂದಿಸಲು ಪ್ರಾರಂಭಿಸಿದಾಗ, ಡಾಲರ್ ಮಾರಾಟ ಹೆಚ್ಚಾಗಬಹುದು. ಇದರಿಂದ ತಾತ್ಕಾಲಿಕವಾಗಿ ರೂಪಾಯಿಗೆ ಬೆಂಬಲ ಸಿಗಬಹುದು ಎಂದು ಫಾರೆಕ್ಸ್ ಅಡ್ವೈಸರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಪಬಾರಿ ಹೇಳಿದ್ದಾರೆ.

ಆದರೆ, ಡಾಲರ್ ಸೂಚ್ಯಂಕ ಮತ್ತು ಕಚ್ಚಾ ತೈಲದ ಬೆಲೆ ಏರಿಕೆ ರೂಪಾಯಿಗೆ ಒತ್ತಡ ತಂದಿದೆ. ಸುರಕ್ಷಿತ ಹೂಡಿಕೆ ಬೇಡಿಕೆಯ ಪರಿಣಾಮ ಡಾಲರ್ ಸೂಚ್ಯಂಕ 100 ಕ್ಕಿಂತ ಮೇಲೆಯೇ ಸ್ಥಿರವಾಗಿದ್ದು, ರೂಪಾಯಿಯ ಮೇಲಿನ ಒತ್ತಡವನ್ನು ಮುಂದುವರಿಸಿದೆ ಎಂದು ವಹಿವಾಟುದಾರರು ತಿಳಿಸಿದ್ದಾರೆ. ಜಾಗತಿಕ ತೈಲ ಮಾನದಂಡ ಬ್ರೆಂಟ್ ಕ್ರೂಡ್ ಪ್ರತಿ ಬ್ಯಾರೆಲ್‌ಗೆ 115 ಡಾಲರ್‌ಗೆ ಏರಿಕೆ ಕಂಡಿದೆ. ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳು ತೈಲ ಬೆಲೆಗಳ ಮೇಲೆ ತಕ್ಷಣದ ಪರಿಣಾಮ ಬೀರಿದ್ದು, ಸರಬರಾಜು ವ್ಯತ್ಯಯದ ಭೀತಿಯಿಂದ ಬೆಲೆಗಳು ಏರಿಕೆಯಾಗಿವೆ.

# ಇರಾನ್ ದಾಳಿಯ ಕುರಿತು ಹೇಳಿಕೆ ಬಿಡುಗಡೆ ಮಾಡಿದ ಕುವೈತ್

## ಕುವೈತ್‌ನ ವಿದ್ಯುತ್ ಮತ್ತು ಉಪ್ಪುನೀರಿನ ಸಂಸ್ಕರಣಾ ಘಟಕದ ಮೇಲೆ ಇರಾನ್ ದಾಳಿಗೆ ಭಾರತೀಯ ಪ್ರಜೆ ಬಲಿ

**ಕುವೈತ್:** ಮಧ್ಯಪ್ರಾಚ್ಯದಲ್ಲಿ ಯುದ್ಧ ತಾರಕಕ್ಕೇರಿದ್ದು, ಇರಾನ್ ತನ್ನ ನೆರೆಯ ಗಲ್ಫ್ ರಾಷ್ಟ್ರಗಳ ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಮುಂದುವರೆಸಿದೆ. ಇರಾನ್ ಕುವೈತ್ ನಲ್ಲಿರುವ ವಿದ್ಯುತ್ ಸ್ಥಾವರ ಮತ್ತು ನೀರು ಶುದ್ಧೀಕರಣ ಘಟಕವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದು, ಈ ದಾಳಿಗೆ ಭಾರತೀಯ ಮೂಲದ ಕಾರ್ಮಿಕನೊಬ್ಬ ಸಾವನ್ನಪ್ಪಿದ್ದಾನೆ ಎಂದು ಕುವೈರ್ ಸರ್ಕಾರ ತಿಳಿಸಿದೆ.

**ಕುವೈತ್ ನಲ್ಲಿ ಇರಾನ್ ದಾಳಿಗೆ ಭಾರತೀಯ ಪ್ರಜೆ ಸಾವು**

ಇರಾನ್ ದಾಳಿಯ ಕುರಿತು ಹೇಳಿಕೆ ಬಿಡುಗಡೆ ಮಾಡಿದ ಕುವೈತ್‌ನ ಇಂಧನ ಸಚಿವಾಲಯದ ವಕ್ತಾರ , ಕುವೈತ್ ನ ಹಲವು ಕಟ್ಟಡಗಳು ಹಾಗೂ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಇರಾನ್ ನಡೆಸಿದ ದಾಳಿಗಳಲ್ಲಿ ವಿದ್ಯುತ್ ಸ್ಥಾವರ ಮತ್ತು ನೀರು ಶುದ್ಧೀಕರಣ ಘಟಕವೂ ಸೇರಿದೆ. ಇನ್ನು, ಈ ಮಾರಕ ದಾಳಿಯ ಪರಿಣಾಮವಾಗಿ ಭಾರತೀಯ ಮೂಲದ ಒಬ್ಬ ಕಾರ್ಮಿಕ ಸಾವನ್ನಪ್ಪಿದ್ದು, ಕಟ್ಟಡ ಭಾರಿ ಪ್ರಮಾಣದ ಹಾನಿಯುಂಟಾಗಿದೆ.

ಇನ್ನು, ದಾಳಿಗೊಳಗಾದ ಸ್ಥಳದಲ್ಲಿ ತಕ್ಷಣವೇ ಅದರ ಪರಿಣಾಮಗಳನ್ನು ನಿರ್ವಸಲು ಮತ್ತು ಸ್ಥಾವರದ ಕಾರ್ಯಾಚರಣೆಯ ಸಾಮರ್ಥ್ಯವನ್ನು ಉಳಿಸಿಕೊಳ್ಳಲು ಸಹಾಯ ಮಾಡಲು ಅನುಮೋದಿತ ತುರ್ತು ಯೋಜನೆಗಳ ಅಡಿಯಲ್ಲಿ ತಾಂತ್ರಿಕ ಮತ್ತು ತುರ್ತು ತಂಡಗಳನ್ನು ತಕ್ಷಣವೇ ನಿಯೋಜಿಸಿದ್ದು, ದಾಳಿಗೊಳಗಾದ ಸ್ಥಳವನ್ನು ಸುರಕ್ಷಿತವಾಗಿರಿಸಲು ಕುವೈತ್‌ನ ಭದ್ರತೆ ಮತ್ತು ಸಂಬಂಧಿತ ಅಧಿಕಾರಿಗಳೊಂದಿಗೆ ಸಂಪೂರ್ಣ ಸಮನ್ವಯದೊಂದಿಗೆ ಈ ಪ್ರತಿಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಮಧ್ಯಪ್ರಾಚ್ಯದಲ್ಲಿ ಯುದ್ಧ ಆರಂಭವಾದಾಗಿನಿಂದ ಈವರೆಗೂ ಅಲ್ಲಿನ ದಾಳಿಗಳಿಗೆ ಸಾವನ್ನಪ್ಪಿರುವ ಭಾರತೀಯರ ಪ್ರಜೆಗಳ ಸಂಖ್ಯೆ 7ಕ್ಕೆ ಏರಿಕೆಯಾಗಿದೆ. ಇದಕ್ಕೂ ಮೊದಲು ಗಲ್ಫ್‌ನಾದ್ಯಂತ ಇರಾನ್ ನಡೆಸಿದ ದಾಳಿಗಳಿಗೆ ಸೌದಿ ಅರೇಬಿಯಾದಲ್ಲಿ ಒಬ್ಬರು, ಒಮಾನ್ ನಲ್ಲಿ 2 ಭಾರತೀಯರು, ಯುಎಇಯಲ್ಲಿ 2 ಭಾರತೀಯ ಪ್ರಜೆಗಳು ಸೇರಿದಂತೆ ಒಬ್ಬ ಭಾರತೀಯ ಪ್ರಜೆ ಕಾಣೆಯಾಗಿರುವುದಾಗಿ ವರದಿ ಮಾಡಿದೆ.

ಇನ್ನು, ಭಾರತದ ದೇಶಾಂಗ ಇಲಾಖೆಯ ಪ್ರಕಾರ, ರಿಯಾದ್, ಮಸ್ಕತ್, ಅಬುಧಾಬಿ ಹಾಗೂ ಬಗ್ದಾದ್ ನಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ದಾಳಿಗಳಲ್ಲಿ ಸಾವನ್ನಪ್ಪಿರುವ ಭಾರತೀಯ ಪ್ರಜೆಗಳ ಮೃತದೇಹವನ್ನು ಸ್ವದೇಶಕ್ಕೆ ಕರೆತರುವ ನಿಟ್ಟಿನಲ್ಲಿ ಹಾಗೂ ಅಲ್ಲಿ ಸಿಲುಕಿರುವ ಭಾರತೀಯ ಪ್ರಜೆಗಳ ಸುರಕ್ಷತೆಗೆ ಬೇಕಾದ ಎಲ್ಲಾ ನೆರವನ್ನು ನೀಡುತ್ತಿದೆ ಎಂದು ತಿಳಿಸಿದ್ದಾರೆ.



**ಭಾರತೀಯ ರಕ್ಷಣೆಗೆ ಸರ್ಕಾರ ಕಾರ್ಯ**

### ಕುವೈತ್‌ನಲ್ಲಿ ಭಾರತೀಯ ಪ್ರಜೆ ಸಾವು ಬಗ್ಗೆ ರಾಯಭಾರ ಕಚೇರಿ ಸ್ಪಷ್ಟನೆ

**ಇರಾನ್ ದಾಳಿಗೆ ಭಾರತೀಯ ಪ್ರಜೆಯ ನಿಧನದ ಸುದ್ದಿಯನ್ನು ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ದೃಢಪಡಿಸಿದ್ದು, ತಮ್ಮ ಅಧಿಕೃತ ಎಕ್ಸ್ ಖಾತೆಯ ಮೂಲಕ ಸಂತಾಪ ಸೂಚಿಸಿದೆ. ನಿನ್ನೆ ಕುವೈತ್‌ನಲ್ಲಿ ಉಪ್ಪುನೀರಿನ ಸಂಸ್ಕರಣಾ ಘಟಕದ ಮೇಲೆ ನಡೆದ ದಾಳಿಯಲ್ಲಿ ಭಾರತೀಯ ಪ್ರಜೆಯೊಬ್ಬರು ಸಾವನ್ನಪ್ಪಿದ್ದು, ಕುವೈತ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತೀವ್ರ ಸಂತಾಪ ಸೂಚಿಸಿದೆ. ಸಾಧ್ಯರುವ ಎಲ್ಲಾ ಬೆಂಬಲ ಮತ್ತು ಸಹಾಯವನ್ನು ನೀಡಲು ರಾಯಭಾರ ಕಚೇರಿಯು ಕುವೈತ್ ಅಧಿಕಾರಿಗಳೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿದೆ ಎಂದು ಬರೆದುಕೊಂಡಿದೆ.**

- **ಕುವೈತ್ ನ ವಿದ್ಯುತ್ ಸ್ಥಾವರ ಮತ್ತು ಉಪ್ಪು ನೀರು ಶುದ್ಧೀಕರಣ ಘಟಕದ ಮೇಲೆ ಇರಾನ್ ದಾಳಿಗೆ ಭಾರತೀಯ ಕಾರ್ಮಿಕ ಬಲಿ**
- **ಕುವೈತ್ ನಲ್ಲಿ ಭಾರತೀಯ ಪ್ರಜೆಯ ಸಾವನ್ನಪ್ಪಿರುವ ಬಗ್ಗೆ ದೃಢಿಕರಿಸಿದ ಅಲ್ಲಿನ ಭಾರತೀಯ ರಾಯಭಾರ ಕಚೇರಿ**
- **ಯುದ್ಧದಿಂದ ಗಲ್ಫ್ ನಲ್ಲಿ ಭಾರತೀಯರ ಸಾನ ಸಂಖ್ಯೆ ಹೆಚ್ಚಳ, ಅಲ್ಲಿ ಸಿಲುಕಿರುವ ಭಾರತೀಯ ರಕ್ಷಣೆಗೆ ಸರ್ಕಾರ ಕಾರ್ಯ**

## ಮಿನಿ ನ್ಯೂಸ್

### ಮಹಿಳೆಯನ್ನು ಕೊಂದು ಫ್ರಿಡ್ಜ್‌ನಲ್ಲಿ ಇಟ್ಟಿದ್ದ ನೌಕಾಪಡೆ ಉದ್ಯೋಗಿ

**ಹೈದರಾಬಾದ್:** ತಾನು ಅಕ್ರಮ ಸಂಬಂಧವಿರಿಸಿಕೊಂಡಿದ್ದ ಮಹಿಳೆಯನ್ನು ಕೊಂದು ಆಕೆಯ ಶವವನ್ನು ನೌಕಾಪಡೆಯ ಉದ್ಯೋಗಿಯೊಬ್ಬ ಫ್ರಿಜರ್‌ನಲ್ಲಿಟ್ಟಿದ್ದ ಆಘಾತಕಾರಿ ಘಟನೆ ಆಂಧ್ರದಲ್ಲಿ ನಡೆದಿದೆ. ವಿಶಾಖಪಟ್ಟಣಂ ಜಿಲ್ಲೆಯ ಗಾಜುವಾಕದಲ್ಲಿ ಕೃತ್ಯ ನಡೆದಿದೆ. ಆರೋಪಿಯನ್ನು ವಿಜಯನಗರ ಜಿಲ್ಲೆಯ ಮೂಲದ ರವೀಂದ್ರ ಎಂದು ಗುರುತಿಸಲಾಗಿದೆ.

ಆರೋಪಿ ರವೀಂದ್ರ ನೌಕಾಪಡೆಯಲ್ಲಿ ಕೆಲಸ ಮಾಡುತ್ತಿರುವುದಾಗಿ ಗೊತ್ತಾಗಿದೆ. ಇತ್ತೀಚಿಗೆ ಆರೋಪಿ ರವೀಂದ್ರ ಪತ್ನಿ ತವರು ಮನೆ ಸೇರಿದ್ದರಿಂದ ಮೌನಿಕಾ (28) ಎಂಬ ವಿವಾಹಿತ ಮಹಿಳೆಯೊಂದಿಗೆ ವಿವಾಹೇತರ ಸಂಬಂಧ ಬೆಳೆಸಿದ್ದ ಎನ್ನಲಾಗಿದೆ. ಇತ್ತೀಚೆಗೆ, ಮೌನಿಕಾ ಹಣಕ್ಕಾಗಿ ಒತ್ತಡ ಹೇರಲು ಶುರು ಮಾಡಿದ್ದಳು ಎನ್ನಲಾಗಿದೆ ರವೀಂದ್ರನ ಪತ್ನಿ ಕೂಡ ಊರಲ್ಲಿ ಇಲ್ಲದಿದ್ದ ಕಾರಣ ಆಕೆಯನ್ನ ಮನೆಗೆ ಆಹ್ವಾನಿಸಿದ್ದಾನೆ. ಇವರಿಬ್ಬರ ಭೇಟಿ ವೇಳೆ ವಾಗ್ವಾದ ನಡೆದು ರವೀಂದ್ರ, ಮೌನಿಕಾಳನ್ನ ಚಾಕುವಿನಿಂದ ಇರಿದು ಕೊಂದಿದ್ದಾನೆ. ಬಳಿಕ ಆಕೆಯ ದೇಹವನ್ನ ಕತ್ತರಿಸಿ, ಅರ್ಧ ಭಾಗವನ್ನ ಫ್ರಿಡ್ಜ್‌ನಲ್ಲಿ ಇನ್ನುಳಿದ ಅರ್ಧ ಭಾಗವನ್ನು 1 ಬಂಡಲ್‌ನಲ್ಲಿ ಸುತ್ತಿ ಮನೆಯ ಒಂದು ಮೂಲೆಯಲ್ಲಿ ಬಚ್ಚಿಟ್ಟು ಬಳಿಕ ಪೊಲೀಸರಿಗೆ ಶರಣಾಗಿದ್ದಾನೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

### ಗುಜರಾತ್‌ನಲ್ಲಿ ದಲಿತರ ಮೇಲಿನ ದಬ್ಬಾಳಿಕೆ ಹೆಚ್ಚಳ ; ರಾಹುಲ್ ಗಾಂಧಿ

**ಅಹಮದಾಬಾದ್:** ಗುಜರಾತ್‌ನಲ್ಲಿ ದಲಿತರು, ಆದಿವಾಸಿಗಳ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ ಎಂದು ಬಿಜೆಪಿ ಗುರಿಯಾಗಿಸಿ ಕೊಂಡು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪ ಮಾಡಿದ್ದಾರೆ. ನ್ಯಾಯಕ್ಕಾಗಿ ಧ್ವನಿ ಎತ್ತುವುದಾಗಿ ಪ್ರತಿಜ್ಞೆ ಮಾಡಿದ ಅವರು, ಪ್ರಸ್ತುತ ಆಡಳಿತದಲ್ಲಿ ಈ ಸಮುದಾಯಗಳ ವಿರುದ್ಧ ತಾರತಮ್ಯ ಹೆಚ್ಚುತ್ತಿದೆ ಎಂದು ಆರೋಪಿಸಿದ್ದಾರೆ. ಇಂದಿಗೂ ದಲಿತರು ಮತ್ತು ಆದಿವಾಸಿಗಳನ್ನು ಕ್ರೂರವಾಗಿ ಥಳಿಸಲಾಗುತ್ತಿರುವ ಘಟನೆಗಳು ನಡೆಯುತ್ತಲೇ ಇವೆ. ಆದಿವಾಸಿಗಳು ಬೆಸ್ಟ್ ಯೂನಿವರ್ಸಿಟಿಯಲ್ಲಿ ಓದಬೇಕು, ದೊಡ್ಡ ಕಂಪನಿಗಳಲ್ಲಿ ಕೆಲಸ ಮಾಡಬೇಕು ಮತ್ತು ಸಿಇಒ ಆಗಬೇಕು ಎಂದು ನಾವು ಬಯಸುತ್ತೇವೆ. ಇದು ನಮ್ಮ ಹೋರಾಟ ಎಂದರು. ಒಬ್ಬ ವ್ಯಕ್ತಿಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಲಾಗಿದ್ದು, ಅವರ ದೇಹದಾದ್ಯಂತ 19 ಮುರಿತಗಳು ಸಂಭವಿಸಿವೆ. ತಮ್ಮ ಹಕ್ಕುಗಳ ರಕ್ಷಣೆಗಾಗಿ ಧ್ವನಿ ಎತ್ತುವವರು ಹೆಚ್ಚಾಗಿ ಭಾರೀ ಬೆಲೆ ತೆರಬೇಕಾಗುತ್ತಿದೆ ಎಂದು ದೂರಿದರು.

### ರಷ್ಯಾದಲ್ಲಿ ಉದ್ಯೋಗ ಕೊಡಿಸುವುದಾಗಿ ಹಣ ಪಡೆದು ವಂಚನೆ: ಪ್ರಕರಣ

**ಥಾಣೆ:** ರಷ್ಯಾದಲ್ಲಿ ಉತ್ತಮ ಉದ್ಯೋಗ ಕೊಡಿಸುವ ನೆಪದಲ್ಲಿ ವ್ಯಕ್ತಿಯಿಂದ 2.92 ಲಕ್ಷ ರೂ.ಪಡೆದು ವಂಚಿಸಿದ ಆರೋಪದ ಮೇಲೆ ಇಲ್ಲಿ ಪೊಲೀಸರು ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಆರೋಪಿಗಳು ಬಡ್ಲಾಪುರ (ಪೂರ್ವ) ನಿವಾಸಿ 38 ವರ್ಷದ ವ್ಯಕ್ತಿಗೆ ಟ್ರಾವೆಲ್ ಸಂಸ್ಥೆಯ ಮೂಲಕ ರಷ್ಯಾದಲ್ಲಿನ ಮಾಲ್‌ನಲ್ಲಿ ಉದ್ಯೋಗ ಒದಗಿಸುವುದಾಗಿ ಭರವಸೆ ನೀಡಿದ್ದರು.

ಉದ್ಯೋಗ ವೀಸಾ ಜೊತೆಗೆ ಪಾಸ್‌ಪೋರ್ಟ್, ವೀಸಾ ಮತ್ತು ಟಿಕೆಟ್ ವ್ಯವಸ್ಥೆ ಮಾಡಿಕೊಡುವುದಾಗಿ ಹೇಳಿ, ಕಳೆದ 2025ರ ನವೆಂಬರ್‌ನಿಂದ ಈ ವರ್ಷದ ಜನವರಿ ತನಕ ಅರಿಂದ ರೂ. 2.92 ಲಕ್ಷ ಹಣವನ್ನು ಪಡೆದಿದ್ದಾರೆ. ನಂತರ ದೂರುದಾರ ವ್ಯಕ್ತಿಯನ್ನು ಉದ್ಯೋಗ ವೀಸಾ ಬದಲು ತಾತ್ಕಾಲಿಕ ವೀಸಾದ ಮೇಲೆ ವಿದೇಶಕ್ಕೆ ಕಳುಹಿಸಲಾಗಿದೆ ಎಂದು ಭಿವಂಡಿ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಷ್ಯಾಕ್ಕೆ ತಲುಪಿದ ಬಳಿಕ ಭರವಸೆ ನೀಡಿದ ಕೆಲಸ ನೀಡದೆ ಶೌಚಾಲಯ ಸ್ವಚ್ಛತೆ ಸೇರಿ ಕಠಿಣ ಕೆಲಸ ಮಾಡಿಸಲಾಗಿದೆ ಎಂದು ದೂರುದಾರ ಆರೋಪಿಸಿದ್ದಾನೆ. ಜೊತೆಗೆ ಪಡೆದ ಹಣವನ್ನೂ ಆರೋಪಿಗಳು ಹಿಂತಿರುಗಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ದೂರಿನ ಆಧಾರದ ಮೇಲೆ, ಪೊಲೀಸರು ಇಬ್ಬರು ಪುರುಷರು ಹಾಗೂ ಒಬ್ಬ ಮಹಿಳೆಯ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

### ಎಂಎಲ್‌ಎ ಸ್ಥಾನಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ರಾಜೀನಾಮೆ


**ಪಾಟ್ನಾ:** ಎರಡು ವಾರಗಳ ಹಿಂದೆ ರಾಜ್ಯಸಭೆಗೆ ಆಯ್ಕೆಯಾಗಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಬಿಹಾರದ ಬಂಕಿಪುರದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ. ತಮ್ಮ ಈ ನಿರ್ಧಾರವನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ನಬಿನ್ ಅವರು, ಬಂಕಿಪುರ ಕ್ಷೇತ್ರದಿಂದ ಬಿಹಾರ ವಿಧಾನಸಭೆಯ ಚುನಾಯಿತ ಸದಸ್ಯ ಸ್ಥಾನಕ್ಕೆ ನಾನು ರಾಜೀನಾಮೆ ನೀಡುತ್ತಿದ್ದೇನೆ ಎಂದು ಹೇಳಿದರು. ಕಳೆದ 20 ವರ್ಷಗಳಲ್ಲಿ, ನನ್ನ ತಂದೆ ನವೀನ್ ಕಿಶೋರ್ ಪ್ರಸಾದ್ ಸಿನ್ಹಾ ಅವರು ನಿರ್ಮಿಸಿದ ಈ ಕ್ಷೇತ್ರವನ್ನು ಸಮರ್ಪಣಾಭಾವದಿಂದ ಪೋಷಿಸಲು ಮತ್ತು ಅಭಿವೃದ್ಧಿಪಡಿಸಲು ನಾನು ನಿರಂತರವಾಗಿ ಶ್ರಮಿಸಿದ್ದೇನೆ. ನನ್ನ ಕ್ಷೇತ್ರ ಮತ್ತು ಬಿಹಾರ ರಾಜ್ಯದ ಅಭಿವೃದ್ಧಿಗೆ ನಾನು ಯಾವಾಗಲೂ ಸಂಪೂರ್ಣ ಬದ್ಧತೆಯಿಂದ ಕೆಲಸ ಮಾಡಿದ್ದೇನೆ.ಇದರ ಪರಿಣಾಮವಾಗಿ, ಜನರು ನನ್ನನ್ನು ಸತತ ಐದು ಬಾರಿ ವಿಧಾನಸಭೆಗೆ ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡುವ ಮೂಲಕ ಅವರಿಗೆ ಸೇವೆ ಸಲ್ಲಿಸುವ ಸವಲತ್ತನ್ನು ನನಗೆ ನೀಡಿದರು ಎಂದು ಬಿಜೆಪಿ ಮುಖ್ಯಸ್ಥರು ಹೇಳಿದರು.

### ಹುಸಿ ಬಾಂಬ್ ಬೆದರಿಕೆ ಹಾಕಿದ್ದ ಮೈಸೂರಿನ ವ್ಯಕ್ತಿಯನ್ನು ಬಂಧಿಸಿದ ದೆಹಲಿ ಪೊಲೀಸರು

**ನವದೆಹಲಿ:** ದೇಶಾದ್ಯಂತ ಶಾಲೆಗಳು, ಹೈಕೋರ್ಟ್‌ಗಳು ಮತ್ತು ಸರ್ಕಾರಿ ಕಚೇರಿಗಳಿಗೆ 1,100 ಕ್ಕೂ ಹೆಚ್ಚು ಬಾಂಬ್ ಬೆದರಿಕೆಗಳನ್ನು ಕಳುಹಿಸಿದ ಆರೋಪದ ಮೇಲೆ ಕರ್ನಾಟಕದ ಮೈಸೂರಿನ ವ್ಯಕ್ತಿಯನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ದೆಹಲಿ ಪೊಲೀಸರು ಮತ್ತು ಸ್ಥಳೀಯ ಪೊಲೀಸ್ ತಂಡಗಳ ಜಂಟಿ ಕಾರ್ಯಾಚರಣೆಯ ನಂತರ ಮೈಸೂರಿನ ಶ್ರೀನಿವಾಸ್ ಲೂಯಿಸ್ (47) ಎಂದು ಗುರುತಿಸಲಾದ ಆರೋಪಿಯನ್ನು ಅವರ ಬಾಡಿಗೆ ವಸತಿಗೃಹದಿಂದ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೆಹಲಿ ಹೈಕೋರ್ಟ್, ವಿಧಾನಸಭೆ ಮತ್ತು ಹಲವಾರು ಶಿಕ್ಷಣ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಇತ್ತೀಚೆಗೆ ಬಾಂಬ್ ಬೆದರಿಕೆ ಸಂದೇಶಗಳು ಬಂದಿರುವ ಹಿನ್ನೆಲೆಯಲ್ಲಿ ಈ ಬಂಧನ ನಡೆದಿದೆ. ಲೂಯಿಸ್ ಸ್ನಾತಕೋತ್ತರ ಪದವೀಧರ ಮತ್ತು ಬೆಂಗಳೂರಿನ ನಿವಾಸಿ ಎಂದು ಪೊಲೀಸರು ತಿಳಿಸಿದ್ದಾರೆ. ಅವರು ಪ್ರಸ್ತುತ ನಿರುದ್ಯೋಗಿಯಾಗಿದ್ದು, ನಿವೃತ್ತ ಸರ್ಕಾರಿ ಉದ್ಯೋಗಿಯಾಗಿರುವ ಅವರ ತಾಯಿಯೊಂದಿಗೆ ವಾಸಿಸುತ್ತಿದ್ದಾರೆ. ಪ್ರಾಥಮಿಕ ತನಿಖೆಯು ಅವರು ಮಾನಸಿಕ ಒತ್ತಡದಲ್ಲಿರಬಹುದು ಎಂದು ಸೂಚಿಸುತ್ತದೆ. ಆರಂಭಿಕ ವಿಚಾರಣೆಯ ಸಮಯದಲ್ಲಿ, ಆರೋಪಿಯು ಇಮೇಲ್‌ಗಳು ಮತ್ತು ಇತರ ಸಂವಹನ ವೇದಿಕೆಗಳ ಮೂಲಕ ದೇಶಾದ್ಯಂತ 1,100 ಕ್ಕೂ ಹೆಚ್ಚು ಬೆದರಿಕೆ ಸಂದೇಶಗಳನ್ನು ಕಳುಹಿಸಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ತಾಯಿ ಆದ ಸೋನಂ

ನಟಿ ಸೋನಂ ಕಪೂರ್ ಹಾಗೂ ಉದ್ಯಮಿ ಆನಂದ್ ಅಹೂಜಾ ದಂಪತಿ ಎರಡನೇ ಮಗುವಿಗೆ ಸ್ವಾಗತ ಕೋರಿದ್ದಾರೆ. ಮಾರ್ಚ್ 29ರಂದು ಸೋನಂ ಕಪೂರ್ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಈ ಸಂತಸದ ಸುದ್ದಿಯನ್ನು ಇನ್‌ಸ್ಟಾಗ್ರಾಮ್ ಮೂಲಕ ಹಂಚಿಕೊಂಡಿದ್ದಾರೆ.



ಮೊದಲ ಮಗ ವಾಯುಗೆ ಈಗ ಒಬ್ಬ ತಮ್ಮ ಸಿಕ್ಕಿದ್ದಾನೆ. ಕುಟುಂಬ ವಿಸ್ತಾರವಾಗಿದ್ದು, ನಾಲ್ಕು ಜನರಿಗೆ ಬಡ್ತಿ ಪಡೆದಿದೆ. ನಟಿ ಸೋನಂ ಕಪೂರ್ ಹಾಗೂ ಉದ್ಯಮಿ ಆನಂದ್ ಅಹೂಜಾ ಅಭಿಮಾನಿಗಳಿಗೆ ಖುಷಿ ಸುದ್ದಿ ಕೊಟ್ಟಿದ್ದಾರೆ

ಸೋನಂ ಎರಡನೇ ಬಾರಿಗೆ ತಾಯಿ ಆಗಿದ್ದಾರೆ. ಅವರಿಗೆ ಗಂಡು ಮಗು ಜನಿಸಿದೆ. ಮಾರ್ಚ್ 29ರಂದು ಮಗು ಜನಿಸಿದೆ. ಈ ಬಗ್ಗೆ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಸೋನಂ ಕಪೂರ್ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಈ ಮೂಲಕ ಸೋನಂ ಕುಟುಂಬ ಮತ್ತಷ್ಟು ವಿಸ್ತೃತವಾಗಿದೆ. ಸೋನಂ ಕಪೂರ್ ಅವರು ಇನ್‌ಸ್ಟಾಗ್ರಾಮ್ ಅಲ್ಲಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ. 'ನಮ್ಮ ಕುಟುಂಬ ಹಿರಿದಾಗಿದೆ. ಅವನ ಆಗಮನದಿಂದ ನಮ್ಮ ಹೃದಯದಲ್ಲಿ ಸಂತಸ ಹೆಚ್ಚಿದೆ.

ವಾಯು ತನ್ನ ಚಿಕ್ಕ ಸಹೋದರನನ್ನು ಸ್ವಾಗತಿಸಲು ಖುಷಿಯಾಗಿದ್ದಾನೆ. ನಮ್ಮ ಮನೆಯ ಸಂತೋಷ ಹೆಚ್ಚಿದೆ. ಈಗ ಕುಟುಂಬ ನಾಲ್ಕು ಜನರಿಗೆ ಬಡ್ತಿ ಪಡೆದಿದೆ.

ಹೊಸ ಅಧ್ಯಾಯವನ್ನು ಪ್ರಾರಂಭಿಸಲು ನಾವು ಕೃತಜ್ಞರಾಗಿರುತ್ತೇವೆ. ಪ್ರೀತಿಯಿಂದ, ಸೋನಮ್, ಆನಂದ್ ಮತ್ತು ವಾಯು' ಎಂದು ಅವರು ಬರೆದುಕೊಂಡಿದ್ದಾರೆ.

ಸೋನಂ ಕಪೂರ್ ಅವರಿಗೆ ಅನೇಕ ಸೆಲೆಬ್ರಿಟಿಗಳು ಶುಭಾಶಯ ಕೋರಿದ್ದಾರೆ. 'ಸೋನಾ ಹಾಗೂ ಆನಂದ್‌ಗೆ ಅಭಿನಂದನೆ' ಎಂದು ಕರೀನಾ ಕಪೂರ್ ಕಮೆಂಟ್ ಮಾಡಿದ್ದಾರೆ. ಹುಮಾ ಖುರೇಷಿ ಸೇರಿದಂತೆ ಅನೇಕ ಸೆಲೆಬ್ರಿಟಿಗಳು ಹಾರ್ಟ್ ಎಮೋಜಿ ಹಾಕಿದ್ದಾರೆ. 2025ರ ನವೆಂಬರ್ ಅಲ್ಲಿ ಸೋನಂ ಕಪೂರ್ ಅವರು ಪ್ರೆಗ್ನೆನ್ಸಿ ಬಗ್ಗೆ ಘೋಷಣೆ ಮಾಡಿದ್ದರು. 'ತಾಯಿ' ಎಂದು ಅವರು ಕ್ಯಾಪ್ಶನ್ ನೀಡಿದ್ದರು.

# ಧ್ರುವಗೆ ಕಾಂಪಿಟೇಷನ್ ಕೊಡಲು ಬಂದ ಸುಂದರಿ



ಧ್ರುವ ಸರ್ಜಾ ಅವರ 'ಕೆಡಿ' ಸಿನಿಮಾ ಏಪ್ರಿಲ್ 30ರಂದು ತೆರೆಗೆ ಬರಲು ಸಿದ್ಧವಾಗಿದೆ. ಈ ಚಿತ್ರಕ್ಕೆ ಪೈಪೋಟಿ ನೀಡಲು ಸಮಂತಾ ರುತ್ ಪ್ರಭು ನಟನೆಯ 'ಮಾ ಇಂಟಿ ಬಂಗಾರಂ' ಸಿನಿಮಾ ಏಪ್ರಿಲ್ 30ರಂದು ಬಿಡುಗಡೆಯಾಗುವ ಸಾಧ್ಯತೆ ಇದೆ. ಸಮಂತಾ ವಿವಾಹದ ನಂತರದ ಮೊದಲ ಚಿತ್ರ ಇದಾಗಿದ್ದು, ಕಾರ್ಮಿಕರ ದಿನಾಚರಣೆ ರಜೆಯ ಲಾಭ ಪಡೆಯಲು ಸಿನಿಮಾ ಮುಂದಾಗಿದೆ. ಧ್ರುವ ಸರ್ಜಾ ನಟನೆಯ 'ಕೆಡಿ' ಸಿನಿಮಾ ಏಪ್ರಿಲ್ 30ರಂದು ರಿಲೀಸ್ ಆಗಲು ರೆಡಿ ಆಗಿದೆ. ಈ ಚಿತ್ರವನ್ನು ಕೆವಿಎನ್ ನಿರ್ಮಾಣ ಸಂಸ್ಥೆ ನಿರ್ಮಿಸಿದೆ. ಈ ಚಿತ್ರಕ್ಕೆ ಧ್ರುವ ಹೀರೋ ಆದರೆ, ಶಿಲ್ಪಾ ಶೆಟ್ಟಿ ನಾಯಕಿ. ಈ ಸಿನಿಮಾಗೆ ಕಾಂಪಿಟೇಷನ್ ಕೊಡಲು ಟಾಲಿವುಡ್ ಸುಂದರಿಯ ಆಗಮನ ಆಗುತ್ತಿದೆ ಎಂದು ವರದಿ ಆಗಿದೆ. ಅದುವೇ ಸಮಂತಾ ರುತ್ ಪ್ರಭು.

2023ರಲ್ಲಿ 'ಖುಷಿ' ಸಿನಿಮಾ ಬಳಿಕ ಸಮಂತಾ ರುತ್ ಪ್ರಭು ಅವರು ಯಾವುದೇ ಸಿನಿಮಾದಲ್ಲಿ ನಟಿಸಿಲ್ಲ. ಅಂದಿನಿಂದ ಇಂದಿನವರೆಗೆ ಅವರು ಜೀವನದಲ್ಲಿ ಸಾಕಷ್ಟು ಏರಿಳಿತ ಕಂಡರು. ಈಗ ರಾಜ್ ನಿಧಿಮೋರು ಅವರ ಜೊತೆ ಸಮಂತಾ ವಿವಾಹ ಆಗಿದ್ದಾರೆ. ವಿವಾಹದ ಬಳಿಕ ಅವರ ಮೊದಲ ಸಿನಿಮಾ ರಿಲೀಸ್ ಆಗುತ್ತಿದೆ. ಅದು ಕೂಡ 'ಕೆಡಿ' ಸಿನಿಮಾ ಎದುರು. ನಂದಿನಿ ರೆಡ್ಡಿ ನಿರ್ದೇಶನದ, ಸಮಂತಾ ನಟನೆಯ 'ಮಾ ಇಂಟಿ ಬಂಗಾರಂ' ಸಿನಿಮಾ ಕ್ರೈಮ್ ಆಯಕ್ಷನ್ ಶೈಲಿಯಲ್ಲಿ ಮೂಡಿ ಬರುತ್ತಿದೆ. ಈ ಚಿತ್ರ ಮೇ 15ಕ್ಕೆ ರಿಲೀಸ್ ಮಾಡುವ ಆಲೋಚನೆ ತಂಡಕ್ಕೆ ಇದೆ. ಆದರೆ, ಏಪ್ರಿಲ್ 30ರಂದು ರಿಲೀಸ್ ಆಗಬೇಕಿದ್ದ, 'ಪೆದ್ದಿ' ಚಿತ್ರದ ರಿಲೀಸ್ ದಿನಾಂಕ ಮುಂದಕ್ಕೆ ಹೋಗುವ ಸಾಧ್ಯತೆ ದಟ್ಟವಾಗಿದೆ. ಹೀಗಾಗಿ, 'ಮಾ ಇಂಟಿ ಬಂಗಾರಂ' ಚಿತ್ರವನ್ನು ಪ್ರೀಪೋನ್ಡ್ ಮಾಡಲು ತಂಡ ಪ್ಲ್ಯಾನ್ ರೂಪಿಸಿದೆ.

ಮೇ 1 ಕಾರ್ಮಿಕರ ದಿನಾಚರಣೆ ಪ್ರಯುಕ್ತ ರಜೆ ಇದೆ. ಈ ದಿನವನ್ನು ತಂಡದವರು ಪರಿಗಣಿಸುವ ಸಾಧ್ಯತೆ ಇದೆ. ಇದರಿಂದ 'ಕೆಡಿ' ಸಿನಿಮಾಗೆ ರಾಜ್ಯದಲ್ಲಿ ಸಣ್ಣ ಮಟ್ಟದಲ್ಲಿ ಸ್ಪರ್ಧೆ ಏರ್ಪಡುವ ನಿರೀಕ್ಷೆ ಇದೆ. ಮಾ ಇಂಟಿ ಬಂಗಾರಂ ಚಿತ್ರವನ್ನು ಸಮಂತಾ ಅವರೇ ನಿರ್ಮಿಸಿದ್ದಾರೆ. ಅವರ ಪತಿ ಕೂಡ ನಿರ್ಮಾಣದಲ್ಲಿ ಸಹಾಯ ಮಾಡಿದ್ದಾರೆ. ಸಂತೋಷ್ ನಾರಾಯಣ್ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ.

# ಕಿಯಾರಾ ಟಾಕ್ಸಿಕ್ ಒಪ್ಪಿಕೊಂಡಿದ್ದೇಕೆ



ಯಶ್ ನಟನೆಯ ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾ ಜೂನ್ 4ರಂದು ತೆರೆಗೆ ಬರಲು ಸಜ್ಜಾಗಿದೆ. ಕಿಯಾರಾ ಅಡ್ವಾಣಿ ತಮ್ಮ ನಾಡಿಯಾ ಪಾತ್ರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ನಿರ್ದೇಶಕಿ ಗೀತು ಮೋಹನ್‌ದಾಸ್ ಅವರ ವಿಶೇಷ ದೃಷ್ಟಿಗೆ ಶ್ರೇಯಸ್ಸು ನೀಡಿದ್ದಾರೆ. ಸಿನಿಮಾದಲ್ಲಿ ತಮ್ಮ ಪಾತ್ರದ ಸವಾಲು ಮತ್ತು ವಿಶಿಷ್ಟತೆಯನ್ನು ಕಿಯಾರಾ ವಿವರಿಸಿದ್ದಾರೆ. ಯಶ್ ನಟನೆಯ 'ಟಾಕ್ಸಿಕ್' ಸಿನಿಮಾ ಬಗ್ಗೆ ಅಭಿಮಾನಿಗಳಿಗೆ ನಿರೀಕ್ಷೆ ಸೃಷ್ಟಿ ಆಗಿದೆ. ಈ ಸಿನಿಮಾ ಮಾರ್ಚ್ 19ರಂದೇ ತೆರೆಗೆ ಬರಬೇಕಿತ್ತು.

ಆದರೆ, ಕಾರಣಾಂತರಗಳಿಂದ ಸಿನಿಮಾ ವಿಳಂಬ ಆಗಿದೆ. ಈಗ ಸಿನಿಮಾ ಬಗ್ಗೆ ಕಿಯಾರಾ ಅಡ್ವಾಣಿ ಮಾತನಾಡಿದ್ದಾರೆ. ಅವರು ಸಿನಿಮಾ ಒಪ್ಪಿಕೊಂಡಿದ್ದರ ಕಾರಣವನ್ನು ವಿವರಿಸಿದ್ದಾರೆ. 'ಟಾಕ್ಸಿಕ್' ಸಿನಿಮಾದಲ್ಲಿ ಹಲವು ಹೀರೋಯಿನ್‌ಗಳು ನಟಿಸಿದ್ದಾರೆ. ನಯನತಾರಾ, ಕಿಯಾರಾ ಅಡ್ವಾಣಿ ಮೊದಲಾದವರು ಪ್ರಮುಖರು. ಈಗ ರಿಲೀಸ್ ಆಗಿರುವ ಬಹುತೇಕ ಟೀಸರ್ ಹಾಗೂ ಗ್ಲಿಂಪ್ಸ್ ಯಶ್ ಅವರನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗಿದೆ. ಸಿನಿಮಾ ರಿಲೀಸ್ ಪೋಸ್ಟ್‌ಪೋನ್ ಆಗುವುದಕ್ಕೂ ಮೊದಲು 'ಟಾಕ್ಸಿಕ್' ಸಿನಿಮಾದ ಸಾಂಗ್ ರಿಲೀಸ್ ಆಗಿತ್ತು. ಕಿಯಾರಾ ಹಾಗೂ ಯಶ್ ಒಟ್ಟಾಗಿ ಕಾಣಿಸಿಕೊಂಡ ಹಾಡಿನ ಲಿರಿಕಲ್ ವಿಡಿಯೋ ಇದಾಗಿತ್ತು. ಈಗ ಕಿಯಾರಾ ತಮ್ಮ ಪಾತ್ರದ ಬಗ್ಗೆ ವಿವರಣೆ ನೀಡಿದ್ದಾರೆ. 'ನಾನು ಈವರೆಗೆ ನೋಡಿದ ಭಿನ್ನ ಪಾತ್ರಗಳಲ್ಲಿ ನಾಡಿಯಾ ಕೂಡ ಒಂದು. ನಮ್ಮ ನಿರ್ದೇಶಕಿ ಗಿತು ಮೋಹನ್‌ದಾಸ್ ಪಾತ್ರವನ್ನು ಬರೆದ ರೀತಿ ಹಾಗೂ ಪಾತ್ರವನ್ನು ಕೆತ್ತಿದ ರೀತಿ ನನಗೆ ಇಷ್ಟ ಆಯಿತು. ನಾನು ಆ ಚಾಲೆಂಜ್‌ನ ಸ್ವೀಕರಿಸಬೇಕು ಎನಿಸಿತು. ಅವರ ಆಲೋಚನೆಯಲ್ಲಿ ನನ್ನ ಪಾತ್ರವನ್ನು ಹೇಗೆ ನಿರ್ವಹಿಸಿದ್ದೇನೆ ಎಂಬುದನ್ನು ನೀವೇ ನೋಡಿ' ಎಂದು ಕಿಯಾರಾ ಕೋರಿದ್ದಾರೆ.

# ಸಾರಾಗೆ ಫ್ಯಾನ್ಸ್ ಮುತ್ತಿಗೆ




ಸಾರಾ ಅರ್ಜುನ್ ಅವರ ತಂದೆ ರಾಜ್ ಅರ್ಜುನ್ ಕೂಡ ಖ್ಯಾತ ನಟನಾಗಿ ಗುರುತಿಸಿಕೊಂಡಿದ್ದಾರೆ. ಸಾರಾ ಅವರು ಕುಟುಂಬದವರ ಜೊತೆ ಕ್ರಿಕೆಟ್ ನೋಡಲು ವಾಂಖಡೆ ಸ್ಟೇಡಿಯಂಗೆ ಬಂದಿದ್ದರು. ಆಗ ಅವರನ್ನು ನೋಡಿ ಫ್ಯಾನ್ಸ್ ಮುಗಿಬಿದ್ದರು. ಆ ಸಂದರ್ಭವನ್ನು ರಾಜ್ ಅರ್ಜುನ್ ಚೆನ್ನಾಗಿ ನಿಭಾಯಿಸಿದರು. 'ಧುರಂಧರ್ 2' ಚಿತ್ರದ ಅಭೂತಪೂರ್ವ ಯಶಸ್ಸಿನಿಂದ ನಟಿ ಸಾರಾ ಅರ್ಜುನ್ ಅವರಿಗೆ ಖ್ಯಾತಿ ಹೆಚ್ಚಾಗಿದೆ. ಸಾರಾ ಅರ್ಜುನ್ ಅವರಿಗೆ ಕ್ರಿಕೆಟ್ ಬಗ್ಗೆಯೂ ಕ್ರೇಜ್ ಇದೆ. ಭಾನುವಾರ ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ನಡುವಿನ ಐಪಿಎಲ್ ಪಂದ್ಯವನ್ನು ವೀಕ್ಷಿಸಲು ಅವರು ಆಗಮಿಸಿದ್ದರು. ಆದರೆ, ಪಂದ್ಯ ಮುಗಿದು ಹೊರಬರುವಾಗ ಸಾರಾ ಅರ್ಜುನ್ ಅವರು ಅಭಿಮಾನಿಗಳ ನಡುವೆ ಸಿಲುಕಿಕೊಂಡ ಘಟನೆ ನಡೆದಿದೆ. 20 ವರ್ಷ ವಯಸ್ಸಿನ ಸಾರಾ ಅರ್ಜುನ್ ಅವರು ಮುಂಬೈ ಇಂಡಿಯನ್ಸ್ ತಂಡದ ಜೆರ್ಸಿ ಧರಿಸಿ, ತಮ್ಮ ಪೋಷಕರಾದ ನಟ ರಾಜ್ ಅರ್ಜುನ್ ಮತ್ತು ತಾಯಿ ಸನ್ಯಾ ಅರ್ಜುನ್ ಅವರೊಂದಿಗೆ ಪಂದ್ಯ ವೀಕ್ಷಿಸಲು ಬಂದಿದ್ದರು.

ಕ್ರೀಡಾಂಗಣದಲ್ಲಿ ಪಂದ್ಯವನ್ನು ಪೂರ್ಣವಾಗಿ ಆನಂದಿಸಿದ ನಂತರ ಅವರು ಹೊರಬರುತ್ತಿದ್ದಂತೆ ಅಭಿಮಾನಿಗಳ ಗುಂಪು ಅವರನ್ನು ಸುತ್ತುವರಿಯಿತು. ಸದ್ಯ 'ಧುರಂಧರ್ 2' ಚಿತ್ರದ ಭರ್ಜರಿ ಯಶಸ್ಸಿನಿಂದಾಗಿ ಸಾರಾ ಅವರ ಜನಪ್ರಿಯತೆ ಎಲ್ಲಾ ಕಡೆಗಳಲ್ಲಿ ಹಬ್ಬಿದೆ. ಸ್ಟೇಡಿಯಂನಿಂದ ಹೊರಬರುತ್ತಿದ್ದ ಸಾರಾ ಅವರನ್ನು ಗುರುತಿಸಿದ ಅಭಿಮಾನಿಗಳು ಸೆಲ್ಫಿಗಾಗಿ ಮುಗಿಬಿದ್ದರು. ಪರಿಸ್ಥಿತಿ ಕೈಮೀರುತ್ತಿದ್ದಂತೆಯೇ ಮಗಳ ರಕ್ಷಣೆಗೆ ನಿಂತ ತಂದೆ ರಾಜ್ ಅರ್ಜುನ್ ಅವರು ಸ್ವತಃ ಬಾಡಿಗಾರ್ಡ್‌ನಂತೆ ಕಾರ್ಯನಿರ್ವಹಿಸಿದರು. ಅಭಿಮಾನಿಗಳ ಗುಂಪನ್ನು ಸರಿಸುತ್ತಾ, ಸಾರಾ ಅವರನ್ನು ಸುರಕ್ಷಿತವಾಗಿ ಕಾರಿನವರೆಗೆ ಕರೆದೊಯ್ದರು ರಾಜ್ ಅರ್ಜುನ್.

ಈ ಸಂದರ್ಭದ ವಿಡಿಯೋ ವೈರಲ್ ಆಗಿದೆ. ಅಭಿಮಾನಿಗಳ ಜೊತೆ ಮಾತಾಡಬೇಕು ಎಂಬ ಆಸೆ ಸಾರಾ ಅವರಿಗೆ ಇದ್ದಂತೆ ಕಾಣುತ್ತದೆ ಆದರೆ ತಂದೆಯಾಗಿ ರಾಜ್ ಅರ್ಜುನ್ ಅವರು ಆ ಕ್ಷಣದಲ್ಲಿ ಜಾಗ್ರತೆ ವಹಿಸಿದ್ದು ಕೂಡ ನೆಟ್ಟಿಗರ ಮೆಚ್ಚುಗೆಗೆ ಕಾರಣ ಆಗಿದೆ. ವಾಂಖೆಡೆ ಸ್ಟೇಡಿಯಂ ಹೊರಗೆ ನಡೆದ ಈ ಗದ್ದಲದ ವಿಡಿಯೋಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಮಗಳನ್ನು ರಕ್ಷಿಸಲು ನಟ ರಾಜ್ ಅರ್ಜುನ್ ತೋರಿದ ಕಾಳಜಿಯನ್ನು ಕಂಡ ನೆಟ್ಟಿಗರು, 'ತಂದೆ ಎಂದರೆ ಹೀಗಿರಬೇಕು' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

# 11ನೇ ದಿನವೂ ಅದ್ಭುತ ಕಲೆಕ್ಷನ್

'ಲವ್ ಮಾಕ್ಟೇಲ್ 3' ಸಿನಿಮಾ 11 ದಿನಗಳಲ್ಲಿ 11.15 ಕೋಟಿ ರೂಪಾಯಿ ಗಳಿಸಿ ಭರ್ಜರಿ ಯಶಸ್ಸು ಕಂಡಿದೆ. 'ಧುರಂಧರ್ 2' ಅಂತಹ ದೊಡ್ಡ ಚಿತ್ರದ ಪೈಪೋಟಿ ನಡುವೆಯೂ ಫ್ಯಾಮಿಲಿ ಆಡಿಯನ್ಸ್ ಮೆಚ್ಚುಗೆ ಗಳಿಸಿ ಲಾಭದ ಹಾದಿಯಲ್ಲಿದೆ. ಸಿಗರೇಟ್, ಮದ್ಯ, ಡಬಲ್ ಮೀನಿಂಗ್ ಇಲ್ಲದ ಶುದ್ಧ ಮನರಂಜನೆ, ಚಿತ್ರದ ಯಶಸ್ಸಿಗೆ ಕಾರಣವಾಗಿದೆ. 'ಧುರಂಧರ್ 2' ಸಿನಿಮಾ ರಿಲೀಸ್ ಆಗುವಾಗ ಎಷ್ಟು ನಿರೀಕ್ಷೆಗಳು ಇದ್ದವು ಎಂಬುದನ್ನು ಹೊಸದಾಗಿ ಹೇಳಬೇಕಿಲ್ಲ. ಈ ಚಿತ್ರದ ಎದುರು ಮತ್ತೊಂದು ಸಿನಿಮಾ ತೆರೆಗೆ ಬರಬೇಕು ಎಂದರೆ ಅದು ಸಣ್ಣ ವಿಷಯ ಅಲ್ಲ. ಆದಾಗ್ಯೂ ಇಂತಹ ಚಾಲೆಂಜ್ ಅನ್ನು 'ಲವ್ ಮಾಕ್ಟೇಲ್ 3' ಸಿನಿಮಾ ಸ್ವೀಕರಿಸಿತು. ಈ ಚಿತ್ರ ಫ್ಯಾಮಿಲಿ ಆಡಿಯನ್ಸ್‌ಗೆ ಇಷ್ಟ ಆಗಿದೆ.



ಹೀಗಾಗಿ, ಸಿನಿಮಾದ ಕಲೆಕ್ಷನ್ ಒಳ್ಳೆಯ ರೀತಿಯಲ್ಲೇ ಆಗಿದೆ. ಎರಡನೇ ಭಾನುವಾರವೂ ಸಿನಿಮಾ ಉತ್ತಮ ಗಳಿಕೆ ಮಾಡಿದೆ. 'ಧುರಂಧರ್ 2' ಸಿನಿಮಾ ಸಾವಿರಾರು ಕೋಟಿ ರೂಪಾಯಿ ಗಳಿಕೆ ಮಾಡುತ್ತಿದೆ. ಈ ಚಿತ್ರದಲ್ಲಿ ದೊಡ್ಡ ದೊಡ್ಡ ಸ್ಟಾರ್‌ಗಳಿವೆ. ಇದರ ಜೊತೆಗೆ ಇದು ಪ್ಯಾನ್ ಇಂಡಿಯಾ ಸಿನಿಮಾ. ಆದರೆ, 'ಲವ್ ಮಾಕ್ಟೇಲ್ 3' ಸಿನಿಮಾ ಆ ರೀತಿ ಅಲ್ಲ. ಇದರ ಬಜೆಟ್ ಕಡಿಮೆ. ಡಾರ್ಲಿಂಗ್ ಕೃಷ್ಣ ಚಿತ್ರದ ಹೀರೋ, ನಿರ್ದೇಶಕ. 'ಲವ್ ಮಾಕ್ಟೇಲ್' ಹಾಗೂ 'ಲವ್ ಮಾಕ್ಟೇಲ್ 2' ಚಿತ್ರದ ಗೆಲುವು 'ಲವ್ ಮಾಕ್ಟೇಲ್ 3' ಸಿನಿಮಾ ಮೇಲೆ ನಿರೀಕ್ಷೆ ಮೂಡಲು ಪ್ರಮುಖ ಕಾರಣ. 'ಲವ್ ಮಾಕ್ಟೇಲ್ 3' ಚಿತ್ರ 11 ದಿನಕ್ಕೆ 11.15 ಕೋಟಿ ರೂಪಾಯಿ ಗ್ರಾಸ್ ಕಲೆಕ್ಷನ್ ಮಾಡಿದೆ. ಭಾನುವಾರ ಸಿನಿಮಾ 1.23 ಕೋಟಿ ರೂಪಾಯಿ ಗಳಿಕೆ ಮಾಡಿದೆ. ಮುಂದಿನ ದಿನಗಳಲ್ಲಿ ಸಿನಿಮಾದ ಕಲೆಕ್ಷನ್ ತಗ್ಗುವ ಸಾಧ್ಯತೆ ಇದೆ. ಸದ್ಯ ಸಿನಿಮಾ ಈಗಾಗಲೇ ಲಾಭದಲ್ಲೇ ಇದೆ ಎಂದು ಹೇಳಲಾಗುತ್ತಾ ಇದೆ.

# ನಾಲ್ಕನೇ ಐಷಾರಾಮಿ ಕಾರು ಖರೀದಿಸಿದ ಹಾರ್ದಿಕ್

ಟೀಂ ಇಂಡಿಯಾ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ 1.4 ಕೋಟಿ ಮೌಲ್ಯದ ಹೊಚ್ಚ ಹೊಸ ಮರ್ಸಿಡಿಸ್-ಬೆಂಝ್ ವಿ-ಕ್ಲಾಸ್ ಕಾರನ್ನು ಖರೀದಿಸಿದ್ದಾರೆ. ಈ ಐಷಾರಾಮಿ MPV ಯ ಮೊದಲ ಭಾರತೀಯ ಮಾಲೀಕ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕೇವಲ ಆರು ತಿಂಗಳಲ್ಲಿ ಇದು ಪಾಂಡ್ಯರ ನಾಲ್ಕನೇ ದುಬಾರಿ ಕಾರು. ಅವರ ಗೆಳತಿ ಮಹಿಕಾ ಅವರೊಂದಿಗೆ ಪಾಂಡ್ಯ ಈ ಕಾರಿನ ಮುಂದೆ ಫೋಟೋ ತೆಗೆಸಿಕೊಂಡಿದ್ದು, ಅವರ ಭವ್ಯ ಕಾರು ಸಂಗ್ರಹಕ್ಕೆ ಮತ್ತೊಂದು ಸೇರ್ಪಡೆಯಾಗಿದೆ.




ಟೀಂ ಇಂಡಿಯಾದ ಸ್ಟಾರ್ ಆಲ್‌ರೌಂಡರ್ ಹಾಗೂ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯಗೆ ಕಾರುಗಳ ಮೇಲಿನ ಮೋಹ ಎಂತಹದ್ದು ಎಂಬುದು ಎಲ್ಲರಿಗೂ ತಿಳಿದಿರುವಂತದ್ದೇ. ಪಾಂಡ್ಯ ಗ್ಯಾರೆಜ್‌ನಲ್ಲಿ ಹಲವು ದುಬಾರಿ ಕಾರುಗಳ ಸಂಗ್ರಹವಿದೆ. ಇದೀಗ ಅವುಗಳ ಪಟ್ಟಿಗೆ ಮತ್ತೊಂದು ದುಬಾರಿ ಕಾರು ಸೇರ್ಪಡೆಗೊಂಡಿದೆ. ಈ ಮೂಲಕ ಹಾರ್ದಿಕ್ ಪಾಂಡ್ಯ ಕೇವಲ ಆರು ತಿಂಗಳಲ್ಲಿ ನಾಲ್ಕನೇ ಐಷಾರಾಮಿ ಕಾರನ್ನು ಖರೀದಿಸಿದಂತ್ತಾಗಿದೆ. ಈ ಬಾರಿ ಇತ್ತೀಚೆಗೆ ಬಿಡುಗಡೆಯಾದ ಕಾರನ್ನು ಖರೀದಿಸಿರುವ ಹಾರ್ದಿಕ್, ತಮ್ಮ ಗೆಳತಿ ಮಹಿಕಾ ಅವರೊಂದಿಗೆ ಕಾರಿನ ಮುಂದೆ ನಿಂತ ಫೋಟೋ ಕ್ಲಿಕ್ಕಿಸಿಕೊಂಡಿದ್ದಾರೆ. ಹಾರ್ದಿಕ್ ಪಾಂಡ್ಯ ಹೊಸ ಜನರೇಷನ್‌ನ ಮರ್ಸಿಡಿಸ್-ಬೆನ್ಜ್ ವಿ-ಕ್ಲಾಸ್ ಕಾರನ್ನು ಖರೀದಿಸಿದ್ದಾರೆ. ಈ ಮೂಲಕ ಈ ಕಾರನ್ನು ಖರೀದಿಸಿದ ಭಾರತದ ಮೊದಲ ವ್ಯಕ್ತಿ ಎನಿಸಿಕೊಂಡಿದ್ದಾರೆ. ಈ ಐಷಾರಾಮಿ MPV (ಬಹುಪಯೋಗಿ ವಾಹನ) ಕಾರಿಗೆ ಬೆಲೆ ಸುಮಾರು 1.4 ಕೋಟಿ ರೂ. ಎನ್ನಲಾಗುತ್ತಿದೆ. ಆರಾಮದಾಯಕ ಕುಟುಂಬ ಪ್ರಯಾಣ ಮತ್ತು ಪ್ರೀಮಿಯಂ ಐಷಾರಾಮಿಗೆ ಹೆಸರುವಾಸಿಯಾದ ಇದು ವಿಶಾಲವಾದ ಒಳಾಂಗಣ, ಉನ್ನತ-ಮಟ್ಟದ ವೈಶಿಷ್ಟ್ಯಗಳು ಮತ್ತು ಸಾಟಿಯಿಲ್ಲದ ಸೌಕರ್ಯವನ್ನು ಹೊಂದಿದೆ.

ಹಾರ್ದಿಕ್ ಪಾಂಡ್ಯ ಅವರ ಗ್ಯಾರೇಜ್ ಈಗಾಗಲೇ ಹಲವಾರು ದುಬಾರಿ ಕಾರುಗಳಿಂದ ತುಂಬಿದೆ. ಪಾಂಡ್ಯ ಇತ್ತೀಚೆಗೆ ಸುಮಾರು 4 ಕೋಟಿ ಮೌಲ್ಯದ ಲ್ಯಾಂಡ್ ರೋವರ್ ಡಿಫೆಂಡರ್ ಕಾರನ್ನು ಖರೀದಿಸಿ, ಅವರ ಮಗನಿಗೆ ಉಡುಗೊರೆಯಾಗಿ ನೀಡಿದ್ದರು. ಆ ಬಳಿಕ ಸುಮಾರು 12 ಕೋಟಿ ರೂ. ಮೌಲ್ಯದ ಫೆರಾರಿ 12-ಸಿಲಿಂಡರ್ ಕಾರನ್ನು ಪಾಂಡ್ಯ ಇತ್ತೀಚೆಗೆ ಖರೀದಿಸಿದ್ದರು. ಹಾಗೆಯೇ 4.5 ಕೋಟಿ ರೂ. ಮೌಲ್ಯದ ಲಂಬೋರ್ಘಿನಿ ಉರುಸ್ ಕಾರನ್ನು ಸಹ ಖರೀದಿಸಿದ್ದರು. ಮುಂಬೈ ಇಂಡಿಯನ್ಸ್ ತಂಡದ ನಾಯಕನಾಗಿರುವ ಹಾರ್ದಿಕ್ ಪಾಂಡ್ಯ ಲೀಗ್‌ನಲ್ಲಿ ಗೆಲುವಿನ ಶುಭಾರಂಭ ಮಾಡಿದ್ದಾರೆ. ಮೊದಲ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಎದುರಿಸಿದ್ದ ಮುಂಬೈ, ಕೆಕೆಆರ್ ನೀಡಿದ್ದ 221 ರನ್‌ಗಳ ಗುರಿಯನ್ನು ಕೊನೆಯ ಓವರ್‌ನಲ್ಲಿ ಬೆನ್ನಟ್ಟಿ ಗೆಲುವು ಸಾಧಿಸಿತು.

## ಐಪಿಎಲ್ ಗೆಲುವಿನ ಆರಂಭ

# ಪ್ಲೇಆಫ್ ಆಡಲಿರುವ 4 ತಂಡಗಳನ್ನು ಹೆಸರಿಸಿದ ರಾಯುಡು



ಇಂಡಿಯನ್ ಪ್ರೀಮಿಯರ್ ಲೀಗ್ ಶುರುವಾಗಿದೆ. ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಜಯ ಸಾಧಿಸಿದರೆ, ದ್ವಿತೀಯ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ಭರ್ಜರಿ ಗೆಲುವು ದಾಖಲಿಸಿದೆ.

ಈ ಎರಡು ಅಮೋಘ ಗೆಲುವುಗಳ ಬೆನ್ನಲ್ಲೇ ಸಿಎಸ್‌ಕೆ ತಂಡದ ಮಾಜಿ ಆಟಗಾರ ಅಂಬಾಟಿ ರಾಯುಡು ಈ ಬಾರಿಯ ಐಪಿಎಲ್‌ನಲ್ಲಿ ಪ್ಲೇಆಫ್ ಪ್ರವೇಶಿಸಲಿರುವ 4 ತಂಡಗಳನ್ನು ಹೆಸರಿಸಿದ್ದಾರೆ. ಆ ತಂಡಗಳೆಂದರೆ...


**ಕೊಲ್ಕತ್ತಾ ನೈಟ್ ರೈಡರ್ಸ್:** ಕೆಕೆಆರ್ ತಂಡವು ಈ ಬಾರಿ ಸಮತೋಲನದಿಂದ ಕೂಡಿದೆ. ಅದರಲ್ಲೂ ಕೊಲ್ಕತ್ತಾ ನೈಟ್ ರೈಡರ್ಸ್ ತಂಡದಲ್ಲಿ ಉತ್ತಮ ಬ್ಯಾಟರ್‌ಗಳು ಇರುವ ಕಾರಣ ಈ ಬಾರಿ ಅವರ ಕಡೆಯಿಂದ ಭರ್ಜರಿ ಪ್ರದರ್ಶನವನ್ನು ನಿರೀಕ್ಷಿಸಬಹುದು ಎಂದು ಅಂಬಾಟಿ ರಾಯುಡು ಹೇಳಿದ್ದಾರೆ.

**ಲಕ್ನೋ ಸೂಪರ್ ಜೈಂಟ್ಸ್:** ರಿಷಭ್ ಪಂತ್ ಮುಂದಾಳತ್ವದ ಲಕ್ನೋ ಸೂಪರ್ ಜೈಂಟ್ಸ್ ತಂಡದಲ್ಲಿ ಸ್ಟಾರ್ ಆಟಗಾರರ ದಂಡೇ ಇದೆ. ಅದರಲ್ಲೂ ಕಳೆದ ಬಾರಿ ಉತ್ತಮ ಪ್ರದರ್ಶನ ನೀಡಿದ್ದ ಎಲ್‌ಎಸ್‌ಜಿ ಈ ಬಾರಿ ಕೂಡ ಸಾಂಘಿಕ ಪ್ರದರ್ಶನದೊಂದಿಗೆ ಪ್ಲೇಆಫ್‌ಗೇರಲಿದೆ ಎಂದು ರಾಯುಡು ಭವಿಷ್ಯ ನುಡಿದಿದ್ದಾರೆ.

**ಮುಂಬೈ ಇಂಡಿಯನ್ಸ್:** ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ಇಂಡಿಯನ್ಸ್ ತಂಡದಲ್ಲಿರುವುದು ಅನುಭವಿ ಆಟಗಾರರು. ಅದರಲ್ಲೂ ಬಹುತೇಕ ಆಟಗಾರರು ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಹೀಗಾಗಿ ಮುಂಬೈ ಇಂಡಿಯನ್ಸ್ ತಂಡವು ಈ ಬಾರಿ ಕೂಡ ಪ್ಲೇಆಫ್‌ಗೇರಲಿದೆ ಎಂದು ಅಂಬಾಟಿ ರಾಯುಡು ಹೇಳಿದ್ದಾರೆ.

**ರಾಯಲ್ ಚಾಲೆಂಜರ್ಸ್ ಬೆಂಗಳೂರು:** ಹಾಲಿ ಚಾಂಪಿಯನ್ ಆಗಿ ಕಣಕ್ಕಿಳಿದಿರುವ ಆರ್‌ಸಿಬಿ ತಂಡದಲ್ಲಿ ಮಹತ್ವದ ಬದಲಾಗಿಲ್ಲ. ಅದರಲ್ಲೂ ಕಳೆದ ಬಾರಿ ಕಣಕ್ಕಿಳಿದಿದ್ದ ಪ್ಲೇಯಿಂಗ್ ಇಲೆವೆನ್‌ನ ಆಟಗಾರರು ಈ ಬಾರಿ ಕೂಡ ತಂಡದಲ್ಲಿದ್ದಾರೆ. ಹೀಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಿಂದ ಈ ಬಾರಿ ಕೂಡ ಭರ್ಜರಿ ಪ್ರದರ್ಶನ ನಿರೀಕ್ಷಿಸಬಹುದು. ಈ ಪ್ರದರ್ಶನದೊಂದಿಗೆ ಆರ್‌ಸಿಬಿ ಸಹ ಪ್ಲೇಆಫ್‌ಗೆ ಎಂಟ್ರಿ ಕೊಡಲಿದೆ ಎಂದು ಅಂಬಾಟಿ ರಾಯುಡು ಭವಿಷ್ಯ ನುಡಿದಿದ್ದಾರೆ.

# ತುಂಬಾ ವರ್ಷಗಳಿಂದ ಕಾಯುತ್ತಿದ್ದೆ




ಫಿನ್ ಅಲೆನ್ ನ್ಯೂಝಿಲೆಂಡ್ ತಂಡದ ಸ್ಫೋಟಕ ಆರಂಭಿಕ ದಾಂಡಿಗ. 2021 ರಿಂದ ಐಪಿಎಲ್‌ನಲ್ಲಿ ಕಾಣಿಸಿಕೊಳ್ಳುತ್ತಿರುವ ಅಲೆನ್ ಚೊಚ್ಚಲ ಪಂದ್ಯವಾಡಿರುವುದು 2026 ರಲ್ಲಿ ಎಂಬುದು ವಿಶೇಷ. ಅದು ಸಹ ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಕಣಕ್ಕಿಳಿಯುವ ಮೂಲಕ. ನ್ಯೂಝಿಲೆಂಡ್‌ನ ಸ್ಫೋಟಕ ದಾಂಡಿಗ ಫಿನ್ ಅಲೆನ್ ಐಪಿಎಲ್‌ನಲ್ಲಿ ಪಾದಾರ್ಪಣೆ ಮಾಡಿದ್ದಾರೆ. ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಪರ ಕಣಕ್ಕಿಳಿಯುವ ಮೂಲಕ ಅಲೆನ್ ತಮ್ಮ ಬಹುಕಾಲದ ಕನಸನ್ನು ಈಡೇರಿಸಿಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿದ ಫಿನ್ ಅಲೆನ್, ''ಈ ಕ್ಷಣಕ್ಕಾಗಿ ನಾನು ಬಹಳ ವರ್ಷಗಳಿಂದ ಕಾಯುತ್ತಿದ್ದೆ. ಕೊನೆಗೂ ವಿಶ್ವದ ಅತಿದೊಡ್ಡ ಟಿ20 ಟೂರ್ನಮೆಂಟ್‌ನಲ್ಲಿ ಆಡಲು ಅವಕಾಶ ಸಿಕ್ಕಿದೆ, ಇದು ನಿಜಕ್ಕೂ ಸಂತಸದ ಕ್ಷಣ'' ಎಂದಿದ್ದಾರೆ.

ಅಂದಹಾಗೆ ಫಿನ್ ಅಲೆನ್ ಐಪಿಎಲ್‌ಗೆ ಎಂಟ್ರಿ ಕೊಟ್ಟಿದ್ದು 2021 ರಲ್ಲಿ. 5 ವರ್ಷಗಳ ಹಿಂದೆಯೇ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅವಕಾಶ ಪಡೆದರೂ ಅವರಿಗೆ ಕಣಕ್ಕಿಳಿಯಲು ಚಾನ್ಸ್ ಸಿಕ್ಕಿರಲಿಲ್ಲ ಎಂಬುದೇ ಅಚ್ಚರಿ. 2021ರ ಐಪಿಎಲ್ ಸೀಸನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ಆಸ್ಟ್ರೇಲಿಯಾದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಜೋಶ್ ಫಿಲಿಪೆ ಗಾಯಗೊಂಡಿದ್ದರು. ಅವರ ಬದಲಿಗೆ ಫಿನ್ ಅಲೆನ್ ಆರ್‌ಸಿಬಿ ತಂಡಕ್ಕೆ ಆಯ್ಕೆ ಆಗಿದ್ದರು.

ಹೀಗೆ ಬದಲಿ ಆಟಗಾರನಾಗಿ ಐಪಿಎಲ್‌ಗೆ ಎಂಟ್ರಿ ಕೊಟ್ಟಿದ್ದ ಫಿನ್ ಅಲೆನ್ ಮೂರು ವರ್ಷಗಳ ಕಾಲ ಬೆಂಚ್ ಕಾದಿದ್ದರು ಎಂದರೆ ನಂಬಲೇಬೇಕು. ಅಂದರೆ ಅಲೆನ್‌ಗೆ ಒಂದೇ ಒಂದು ಪಂದ್ಯವಾಡಲು ಆರ್‌ಸಿಬಿ ಅವಕಾಶ ನೀಡಿರಲಿಲ್ಲ. ಇದಾಗ್ಯೂ ಪ್ರತಿ ಸೀಸನ್‌ನಲ್ಲೂ ಆರ್‌ಸಿಬಿ ಫ್ರಾಂಚೈಸಿ ಅವರನ್ನು ತಂಡದಲ್ಲೇ ಉಳಿಸಿಕೊಳ್ಳುತ್ತಿದ್ದರು. ಆ 3 ವರ್ಷಗಳ ನಡುವೆ ಫಿನ್ ಅಲೆನ್ ನ್ಯೂಝಿಲೆಂಡ್ ರಾಷ್ಟ್ರೀಯ ತಂಡದ ಪರ ಪದಾರ್ಪಣೆ ಮಾಡಿದ್ದರು. ವಿವಿಧ ಲೀಗ್‌ಗಳಲ್ಲೂ ಅಬ್ಬರಿಸಿದ್ದರು.

ಅಲ್ಲದೆ ಕಿವೀಸ್ ತಂಡದ ಆರಂಭಿಕನಾಗಿ ಸ್ಫೋಟಕ ಇನಿಂಗ್ಸ್ ಕೂಡ ಆಡಿದ್ದರು. ಇದಾಗ್ಯೂ ಐಪಿಎಲ್‌ಗೆ ಬಂದರೆ ಬೆಂಚ್ ಕಾಯುವುದೇ ಬಂತು. ಕುತೂಹಲಕಾರಿ ವಿಷಯ ಎಂದರೆ ಈ ಮೂರು ಸೀಸನ್‌ಗಳ ನಡುವೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 45 ಪಂದ್ಯಗಳನ್ನಾಡಿತ್ತು. ಅಂದರೆ ಫಿನ್ ಅಲೆನ್ ಬರೋಬ್ಬರಿ 45 ಪಂದ್ಯಗಳಲ್ಲಿ ಬೆಂಚ್ ಕಾದಿದ್ದರು.

# ಐಪಿಎಲ್‌ನಲ್ಲಿ ಬೌಲಿಂಗ್ ಮಾಡದಂತೆ ಗ್ರೀನ್‌ಗೆ ನಿರ್ಬಂಧ

ಈ ಬಾರಿಯ ಐಪಿಎಲ್ ಮೆಗಾ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ಆಸ್ಟ್ರೇಲಿಯನ್ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ ಅವರನ್ನು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಬರೋಬ್ಬರಿ 25.20 ಕೋಟಿ ರೂ.ಗೆ ಖರೀದಿಸಿತ್ತು. ಬೃಹತ್ ಮೊತ್ತ ವ್ಯಯಿಸಿ ಖರೀದಿಸಿದ ಗ್ರೀನ್‌ಗೆ ಬೌಲಿಂಗ್ ಮಾಡದಂತೆ ನಿರ್ಬಂಧ ಹೇರಲಾಗಿದೆ.

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬೌಲಿಂಗ್ ಮಾಡದಂತೆ ಕ್ಯಾಮರೋನ್ ಗ್ರೀನ್‌ಗೆ ಕ್ರಿಕೆಟ್ ಆಸ್ಟ್ರೇಲಿಯಾ ನಿರ್ಬಂಧ ಹೇರಿದೆ. ಕೊಲ್ಕತ್ತಾ ನೈಟ್ ರೈಡರ್ಸ್ ಪರ ಕಣಕ್ಕಿಳಿಯುತ್ತಿರುವ ಗ್ರೀನ್ ಫಿಟ್‌ನೆಸ್ ಸಮಸ್ಯೆಯಿಂದ ಬಳುತ್ತಿದ್ದು, ಹೀಗಾಗಿ ಕೇವಲ ಬ್ಯಾಟರ್ ಆಗಿ ಕಣಕ್ಕಿಳಿಯುವಂತೆ ಸೂಚಿಸಲಾಗಿದೆ.




## ಫಿಟ್‌ನೆಸ್ ಸಮಸ್ಯೆ ಹಿನ್ನಡೆ

ಈ ಬಾರಿಯ ಐಪಿಎಲ್ ಮೆಗಾ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ಕ್ಯಾಮರೋನ್ ಗ್ರೀನ್ ಅವರನ್ನು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಬರೋಬ್ಬರಿ 25.20 ಕೋಟಿ ರೂ.ಗೆ ಖರೀದಿಸಿದೆ. ಆದರೆ ಮುಂಬೈ ಇಂಡಿಯನ್ಸ್ ವಿರುದ್ಧದ ಮೊದಲ ಪಂದ್ಯದಲ್ಲಿ ಅವರು ಬೌಲಿಂಗ್ ಮಾಡಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಕ್ರಿಕೆಟ್ ಆಸ್ಟ್ರೇಲಿಯಾದ ಸೂಚನೆ. ಅಂದರೆ ಬೆನ್ನು ನೋವಿನಿಂದ ಬಳಲುತ್ತಿರುವ ಕ್ಯಾಮರೋನ್ ಗ್ರೀನ್‌ಗೆ ಬೌಲಿಂಗ್ ಮಾಡಲು ಎನ್‌ಒಸಿ ನೀಡಲಾಗಿಲ್ಲ. ಸಂಪೂರ್ಣ ಫಿಟ್‌ನೆಸ್ ಸಾಧಿಸುವರೆಗೆ ಬ್ಯಾಟರ್ ಆಗಿ ಆಡುವಂತೆ ಸೂಚಿಸಲಾಗಿದೆ. 2024ರ ಕೊನೆಯಲ್ಲಿ ಬೆನ್ನಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಅವರ ದೀರ್ಘಕಾಲದ ಫಿಟ್‌ನೆಸ್ ಕಾಪಾಡಿಕೊಳ್ಳಲು ಆಸ್ಟ್ರೇಲಿಯಾ ಕ್ರಿಕೆಟ್ ಮಂಡಳಿ ಅವರ ಬೌಲಿಂಗ್ ಮೇಲೆ ಸದ್ಯಕ್ಕೆ ನಿರ್ಬಂಧ ಹೇರಿದೆ. ಇದಾಗ್ಯೂ ಐಪಿಎಲ್‌ನ ದ್ವಿತಿಯಾರ್ಧದ ವೇಳೆಗೆ ಅವರು ಸಂಪೂರ್ಣವಾಗಿ ಫಿಟ್‌ನೆಸ್ ಸಾಧಿಸಲಿದ್ದಾರೆ ಎಂದು ತಿಳಿದು ಬಂದಿದೆ. ಅಂದರೆ ಏಪ್ರಿಲ್ ಎರಡನೇ ವಾರದ ವೇಳೆಗೆ ಅವರು ಬೌಲಿಂಗ್ ಆರಂಭಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಆರಂಭಿಕ ಪಂದ್ಯಗಳಲ್ಲಿ ಕ್ಯಾಮರೋನ್ ಗ್ರೀನ್ ಕೇವಲ ಬ್ಯಾಟರ್ ಆಗಿ ಮಾತ್ರ ಕಣಕ್ಕಿಳಿಯಲಿದ್ದಾರೆ. ಅತ್ತ ಅನುಭವಿ ವೇಗಿಗಳ ಕೊರತೆ ಎದುರಿಸುತ್ತಿರುವ ಕೆಕೆಆರ್ ತಂಡಕ್ಕೆ ಗ್ರೀನ್ ಅವರ ಫಿಟ್‌ನೆಸ್ ಸಮಸ್ಯೆಯು ಹಿನ್ನಡೆಯಾಗಿ ಪರಿಣಮಿಸಿರುವುದು ಸುಳ್ಳಲ್ಲ.

**ಕೋಲ್ಕತ್ತಾ ನೈಟ್ ರೈಡರ್ಸ್ ತಂಡ:** ರಹಾನೆ, ಅಂಗ್‌ಕ್ರಿಶ್ ರಘುವಂಶಿ, ಅನುಕುಲ್ ರಾಯ್, ಮನೀಶ್ ಪಾಂಡೆ, ರಮಣದೀಪ್ ಸಿಂಗ್, ರಿಂಕು ಸಿಂಗ್, ರೋವ್‌ಮನ್ ಪೊವೆಲ್, ಸುನಿಲ್ ನರೈನ್, ಉಮ್ರಾನ್ ಮಲಿಕ್, ಅರೋರಾ, ವರುಣ್ ಚಕ್ರವರ್ತಿ, ಕ್ಯಾಮೆರೋನ್ ಗ್ರೀನ್, ಫಿನ್ ಅಲೆನ್, ಮಥೀಶ ಪತಿರಾಣ, ತೇಜಸ್ವಿ ಸಿಂಗ್, ಕಾರ್ತಿಕ್ ತ್ಯಾಗಿ,ಸೋಲಂಕಿ, ತ್ರಿಪಾಠಿ, ಟಿಮ್ ಸೈಫರ್ಟ್, ಮುಝುರಬಾನಿ, ರಂಜನ್, ದಕ್ಷ್ ಕಮ್ರಾ, ರಚಿನ್ ರವೀಂದ್ರ

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966